ಸಮ್ರಾಜ್ಞಿ

(ನಾಟಕ)

ನಿರಂಜನ

ಶಾರದಾ ಮಂದಿರ
ರಾಮಯ್ಯರ್ ರಸ್ತೆ :: ಮೈಸೂರು 4

ನೆರೆ ನಾಡಿನ
ಶರಚ್ಚಂದ್ರ ದಂಪತಿಗಳಿಗೆ
ಆದರಪೂರ್ವಕ

'ನಿಮಗಿಲ್ಲ
ಕುರುಡು ಭಾಷೆಯ
ಕಪ್ಪು ಕನ್ನಡಕ'

ಈ ಕೃತಿಯನ್ನು ಕುರಿತು

"I have no regret, nay only joy, for I built a greater work with my sword than many with stone or paint or cunning words."

—ಆಂಗ್ಲ ಬರೆಹಗಾರ ದಿವಂಗತ ರಾಲ್ಫ್‌ಫಾಕ್ಸರ 'ಹುಲ್ಲುಗಾವಲಿನ ಜನತೆ' ಎಂಬ ಸೃಜನಶೀಲ ಕೃತಿಯಲ್ಲಿ ತೈಮೂರ ಆಡಿರುವ ಮಾತು ಇದು. ಮೇಲಿನ ಪಾತ್ರ ಪ್ರೇರಿತವಾಗಿರುವುದು, ಹದಿನಾಲ್ಕು ಹದಿನೈದನೆಯ ಶತಮಾನಗಳನ್ನು ಕುರಿತು ಇತಿಹಾಸಕಾರರು ಸಿದ್ಧಗೊಳಿಸಿರುವ ದಾಖಲೆಗಳಿಂದ.

ಚೆಂಗೀಸ್‌ಖಾನನ ವಂಶಜನೆಂದು ಹೇಳಿಕೊಂಡವನು ತೈಮೂರ. ಮಂಗೋಲರ ಮಧ್ಯೆ ಉದಿಸಿ ಬಂದು, ಬಡಾಖಾನನೆಂದು ಅವರಿಂದ ಆಯ್ಕೆಗೊಂಡು, ಆ ಜನಾಂಗದ ಪ್ರಪ್ರಥಮ ದೊರೆಯೆಂದು ಗುರುತಿಸಲ್ಪಟ್ಟ ಮಹಾನ್ ವ್ಯಕ್ತಿ ಚೆಂಗೀಸ್‌ಖಾನ. ಅವನ ದಂಡು ವಾಯುವೇಗದಿಂದ ಏಷ್ಯ ಯೂರೋಪುಗಳಲ್ಲಿ ಸುತ್ತಾಡಿತು. ಮಂಗೋಲರ ರಣಕೌಶಲ ಸಾಟಿ ಇಲ್ಲದ್ದು.* ಚಂಡಮಾರುತದಂತೆ ಚೆಂಗೀಸ್‌ಖಾನ ಯೂರೋಪು ಏಷ್ಯಗಳ ಮೇಲೆ ಎರಗಿದ. ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ. ಇರುಳು ಬೆಳಗಾಗುವುದರೊಳಗೆ, ನಗರಕ್ಕೆ ನಗರಗಳೇ ಬೂದಿಯ ರಾಶಿಗಳಾದುವು. ಅರಸೊತ್ತಿಗೆಗಳು ಉರುಳಿದುವು. ಧೀರರು ಶೂರರು ಎನ್ನಿಸಿಕೊಂಡವರೆಲ್ಲ ಅವನೆದುರು ತಲೆಬಾಗಿದರು.

ಸಮ್ರಾಟ ಚೆಂಗೀಸ್‌ಖಾನ ಹಿಂದೂಸ್ಥಾನಕ್ಕೂ ಬಂದಿದ್ದ. ಸಿಂಧೂ ನದಿಯವರೆಗಿನ ವಿಸ್ತಾರ ಪ್ರದೇಶ ಅವನ ವಶವಾಯಿತು ಕೂಡಾ. ಆದರೆ ಈ ವಿಶಾಲ ಭೂಭಾಗವನ್ನು ಜಯಿಸಿ ಅರಗಿಸಿಕೊಂಡು ಇಲ್ಲಿ ರಾಜ್ಯಭಾರ ಮಾಡುವುದು ಆಗದ ಮಾತು ಎಂದು, ಸಿಂಧೂ ನದಿಯನ್ನು ದಾಟಿಬರುವ ಯೋಚನೆಯನ್ನು ಅವನು ಬಿಟ್ಟುಕೊಟ್ಟ.

---

* "In scale and in quality, in surprise and mobility, in the strategic and in the tactical indirect approach their campaigns surpass any in history."

—Liddel Hart, quoted in *The Discovery of India*

ಚೆಂಗೀಸ್‌ಖಾನ ಎಂದೊಡನೆ ಮುಸಲ್ಮಾನ ಎಂಬ ಭಾವನೆ ಬರುವುದು ಸಹಜ. ಅದು ಸರಿಯಲ್ಲ. ಮಂಗೋಲರು ಆಕಾಶವನ್ನು ಪೂಜಿಸುತ್ತಿದ್ದ ಜನಾಂಗ. ಅದನ್ನು ಷಮಾ ಮತ ಎಂದು ಕರೆಯುತ್ತಿದ್ದರು. ಅವರಲ್ಲಿ ಸಮ್ರಾಟನಾದ ಕುಬಲಾಯಿಖಾನನು ಚೀಣವನ್ನು ಆಕ್ರಮಿಸಿ ಪೀಕಿಂಗನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಬೌದ್ಧಮತಾನುಯಾಯಿಯಾದನು.

ತಾಯಿಯ ಕಡೆಯಿಂದ ತಾನು ಚೆಂಗೀಸ್‌ಖಾನನ ವಂಶಜನೆಂದು ಕರೆದುಕೊಳ್ಳುತ್ತಿದ್ದ ತೈಮೂರನು ಸಮರ್ಕಂದವನ್ನು ರಾಜಧಾನಿಯಾಗಿ ಮಾಡಿಕೊಂಡು ಮಂಗೋಲ ಸಾಮ್ರಾಜ್ಯವನ್ನು ಕಟ್ಟಿದನು; ಆಗ ಪ್ರಾಬಲ್ಯಕ್ಕೆ ಬಂದಿದ್ದ ಇಸ್ಲಾಂ ಮತವನ್ನು ತಾನೂ ಸ್ವೀಕರಿಸಿದನು.

ಮತೀಯ ಅಥವಾ ಧಾರ್ಮಿಕ ಭಾವನೆಗಳು ಅವನಲ್ಲಿ ಇರಲಿಲ್ಲವೆಂದರೂ ಸಲ್ಲುವುದು. ತೈಮೂರ ಮಾಡಲು ಬಯಸಿದ್ದು, ಚೆಂಗೀಸ್‌ಖಾನನ ಸಾಹಸಗಳ ಪುನರಾವರ್ತನೆಯನ್ನು. ಬಡಾಖಾನನು ಮಾಡದೆ ಉಳಿದಿದ್ದ ಕೆಲಸವೆಂದರೆ ಹಿಂದೂಸ್ಥಾನದ ಆಕ್ರಮಣ. ಅದನ್ನು ತಾನು ಸಾಧಿಸಿ 'ಲೋಕದ ಗಂಡ' ನಾಗಲು ತೈಮೂರ ನಿರ್ಧರಿಸಿದ. ಮುಸಲ್ಮಾನನಾದ ಮುಹಮ್ಮದ್ ಷಾ ಆಗ ದಿಲ್ಲಿಯ ಸುಲ್ತಾನನಾಗಿದ್ದ. ಬಹಳ ದುರ್ಬಲನಾದ ಅರಸ. ದಿಲ್ಲಿಯ ಹೊರಗೆ ಅವನ ಆಳ್ವಿಕೆ ನಾಮಮಾತ್ರವಾಗಿತ್ತೆಂದರೂ ಸರಿಯೆ. ದೇಶ ಹಲವಾರು ರಾಜ್ಯಗಳಾಗಿ ಛಿದ್ರ ಛಿದ್ರವಾಗಿತ್ತು. ಎಲ್ಲೆಲ್ಲೂ ಅನೈಕ್ಯ, ಅಂತಃಕಲಹ. ರಾಷ್ಟ್ರದ ದುರವಸ್ಥೆ ವಿಜಯನಗರದಂತಹ ಸಾಮ್ರಾಜ್ಯದ ಉದಯಕ್ಕೆ ನಾಂದಿ ಹಾಡುತ್ತಿತ್ತು. ಹಿಂದೂಸ್ಥಾನದ ದೌರ್ಬಲ್ಯ ಪ್ರತಿಯೊಬ್ಬ ಆಕ್ರಮಣಕಾರನ ಪಾಲಿಗೂ ವಿಶೇಷ ಆಕರ್ಷಣೆಯೇ. ತೈಮೂರನು ಮುಸಲ್ಮಾನರು-ಹಿಂದೂಗಳು ಎಂದು ಭೇದಭಾವ ಎಣಿಸಲಿಲ್ಲ. ಅವನ ಖಡ್ಗದ ಎದುರಲ್ಲಿ ಅವರೆಲ್ಲರೂ ಸಮಾನರೇ ಆಗಿದ್ದರು!

ಸುಸಜ್ಜಿತ ಮಂಗೋಲ ಸೈನ್ಯಕ್ಕೆ ಸಿಂಧೂ ನದಿಯನ್ನು ದಾಟಿ ಬಂದು ದಿಲ್ಲಿಯನ್ನು ವಶಪಡಿಸಿಕೊಳ್ಳುವುದು ಕಷ್ಟವಾಗಲಿಲ್ಲ. ಹೊಸ ಕ್ಷಿತಿಜದ ಕಡೆಗೇ ಸದಾ ನೋಡುತ್ತಿದ್ದ ತೈಮೂರ ದಿಲ್ಲಿಯಲ್ಲಿ ಸ್ವಲ್ಪ ಸಮಯವಷ್ಟೇ ಇದ್ದ. ದಿಲ್ಲಿಯ ದೊರೆ ಬಲಿಷ್ಠನಾಗಿದ್ದರೆ ಇಡಿಯ ಹಿಂದೂಸ್ಥಾನವೇ-ಆತನ ಪದತಲಕ್ಕೆ ಎರಗುತ್ತದೆ ಎನ್ನುವುದು ತೈಮೂರನ ಅಭಿಪ್ರಾಯವಾಗಿತ್ತು. ಆತ ತನ್ನ

ಪ್ರತಿನಿಧಿಯೊಬ್ಬನನ್ನು ದಿಲ್ಲಿಯ ಪೀಠದಲ್ಲಿರಿಸಿ ಸಮರ್ಕಂದಕ್ಕೆ ಮರಳಿದ. ಮುಂದೆ, ಹಿಂದೂಸ್ಥಾನದ ಅರಸರ ಸ್ವಾತಂತ್ರ್ಯದಾಹ ಬಲಿತು, ಸಮ್ರಾಟ ಪ್ರತಿನಿಧಿ ಖಿಜರ್ ಖಾನನ ಆಳ್ವಿಕೆಯ ನೊಗವನ್ನು ಕಿತ್ತೆಸೆಯುವದು ಅವರಿಗೆ ಸಾಧ್ಯವಾಯಿತು. ವೃದ್ಧಾಪ್ಯದಲ್ಲೂ ತೈಮೂರ ಮಂಗೋಲ ಸಾಮ್ರಾಜ್ಯವನ್ನು ಮೊದಲಿದ್ದಂತೆ ವಿಸ್ತರಿಸುವುದಕ್ಕಾಗಿ ಪೂರ್ವದಿಕ್ಕಿಗೆ ಸಾಗಿದ. ಎಂಥ ಸಮ್ರಾಟನಾದರೂ ಸಾವು ತಪ್ಪಿದ್ದಲ್ಲವಲ್ಲ! ದಂಡಯಾತ್ರೆಯಲ್ಲಿದ್ದಾಗಲೇ ತೈಮೂರ ತನ್ನ ಕಠೋರ ಜೀವನವನ್ನು ಪರಿಸಮಾಪ್ತಿಗೊಳಿಸಿದ.

— ಇದೆಲ್ಲ ಇತಿಹಾಸದಲ್ಲಿ ದಾಖಲೆಯಾಗಿರುವ ಸಂಗತಿ.

* * *

ತೈಮೂರನಿಗೆ ಸಂಬಂಧಿಸಿ ಜಾನಪದ ಕಥೆಗಳಲ್ಲಿ ಸ್ಥಾನಪಡೆದಿರುವ ಬೇರೆಯೂ ಅಂಶವುಂಟು. ಅದು, ಆತನ ಸಮ್ರಾಜ್ಞಿ ಹಾನಿಮ್ ಬೀಬಿಯನ್ನು ಕುರಿತದ್ದು. ಈಕೆ ಅಪ್ರತಿಮ ಸುಂದರಿ. ರಾಜಕುಮಾರನ ಮೇಲೆ, ಬಾದಶಹನ ಮೇಲೆ ಅವಳಿಗೆ ಸಹಜವಾಗಿಯೇ ವಾತ್ಸಲ್ಯ, ಅಭಿಮಾನ. ತನ್ನ ಪತಿಯ ಲೋಕ ಖ್ಯಾತಿಯನ್ನು ಚಿರಸ್ಥಾಯಿಗೊಳಿಸಬೇಕು ಎಂದು ಅವಳಿಗೆ ಅಪೇಕ್ಷೆಯಾಯಿತು. ಸಮ್ರಾಟನ ಅನುಮತಿ ಪಡೆದು ಪ್ರಾರ್ಥನಾಮಂದಿರ ಒಂದರ ನಿರ್ಮಾಣಕ್ಕೆ ಹಾನಿಮ್ ಕೈ ಇಕ್ಕಿದಳು. ಅತ್ಯಂತ ಸಮರ್ಥನಾದ ಶಿಲ್ಪಿಯೊಬ್ಬ ಆ ಕಾರ್ಯಕ್ಕೆ ನಿಯೋಜಿತನಾದ. ಶಿಲಾ ಕಾವ್ಯದ ರಚನೆ ಆರಂಭವಾಯಿತು.

ಆದರೆ ಅದು ಮುಕ್ತಾಯವಾಗುವ ಹೊತ್ತಿಗೆ ಸಮ್ರಾಜ್ಞಿ ಹಾನಿಮಳ ಧವಳ ಕೀರ್ತಿಗೆ ಕಳಂಕ ತಟ್ಟುವ ಸಣ್ಣ ಘಟನೆಯೊಂದು ನಡೆಯಿತು.

ಜೈತ್ರಯಾತ್ರೆಯಿಂದ ಮರಳಿ, ಎಲ್ಲ ಸುಂದರ ಕನಸುಗಳೂ ಹೆಪ್ಪುಗಟ್ಟಿದಂತಿದ್ದ ಪ್ರಾರ್ಥನಾಮಂದಿರವನ್ನು ನೋಡಿ ಅಪ್ರತಿಭನಾದ ತೈಮೂರ, ತನ್ನ ವಿಜಯಗಳಿಗೆ ಸ್ಮಾರಕವಾಗಿ ಶಿಲ್ಪಿ ಅದನ್ನು ನಿರ್ಮಿಸಲಿಲ್ಲ—ಎಂದು ಅರಿತುಕೊಳ್ಳಲು ವಿಲಂಬವಾಗಲಿಲ್ಲ. ಪರಿಣಾಮವೆಂದರೆ, ಮುಂದೆ ಮಂಗೋಲ ಸಾಮ್ರಾಜ್ಯದ ಉದ್ದಗಲಕ್ಕೂ ಶೋಕಗೀತದ ಆಲಾಪನೆಯೇ....

— ಇದೀಗ ಮಾನವೀಯ[illegible]ದ ಕಥಾವಸ್ತು.

* * *

ಇತಿಹಾಸದ ಚೌಕಟ್ಟಿನೊಳಗೆ ಮೇಲಿನ ವಸ್ತುವನ್ನಿರಿಸಿ, 'ಸಮ್ರಾಜ್ಞಿ'

ನಾಟಕವನ್ನು ಬರೆದಿದ್ದೇನೆ. ಇತಿಹಾಸದಲ್ಲಿ ಗುರುತಿಸಲ್ಪಟ್ಟಿರುವವರೆಲ್ಲ ಇಲ್ಲಿ ತಮ್ಮ ಪಾತ್ರಗಳನ್ನು ನಿರ್ವಹಿಸಿದ್ದಾರೆ. ವಸ್ತುವಿನ ಪೋಷಣೆಗೆ, ಘಟನೆಗಳ ಬೆಳವಣಿಗೆಗೆ ಅಗತ್ಯವಾದ ಇತರ ಕೆಲವು ಪಾತ್ರಗಳು ಹೊಸದಾಗಿ ಸೃಷ್ಟಿ ಸಲ್ಪಟ್ಟಿವೆ.

ಬರೆಯುವುದು ಐತಿಹಾಸಿಕ ನಾಟಕವಾದರೂ ಬರೆಯುವವನ ಸಮಾಜ ಪ್ರಜ್ಞೆ ವಸ್ತುವಿನ ಮೇಲೆ ಪ್ರಭಾವ ಬೀರುವುದು ಸಹಜ. ಈ ದಿನದಲ್ಲಿ ನಿನ್ನೆಯ ಅಂಶವಿದೆ. ಇವತ್ತಿನ ಅಂಶ ನಾಳೆಯಲ್ಲಿರುತ್ತದೆ. ಈ ಸೂತ್ರವನ್ನು ಅವಲಂಬಿಸಿಯೇ ಜಗತ್ತು ಬೆಳೆದಿದೆ. ವರ್ತಮಾನಕಾಲದ ನೆಲೆಯಿಂದ ಗತಕಾಲ ವನ್ನು ಅಳೆಯುವುದಕ್ಕೂ ಈ ಸೂತ್ರ ಸಹಾಯಕವಾಗುತ್ತದೆ. ಘಟನೆಗಳ ಬಾಹ್ಯರೂಪವೇನೇ ಇದ್ದರೂ ಅಂತರ್ಯದಲ್ಲಿ ನಿತ್ಯಸತ್ಯದ ಕೆಲವೊಂದು ಅಂಶಗಳು ಸದಾ ಹುದುಗಿರುತ್ತವೆ.

ಹಾನಿವಾ್ ಹಲವು ಸದ್ಗುಣಗಳ ಖಣಿ. ಆಕೆಗೆ ಯಾವಾಗಲೂ ಕೆಡುಕಿನ ಘೋರ ರೂಪವನ್ನು ಹಗುರಗೊಳಿಸುವ ಬಯಕೆ.

ನಿರ್ಮಾಣವಾಗತೊಡಗಿದ್ದ ಪ್ರಾರ್ಥನಾ ಮಂದಿರದ ಶಿಲ್ಪ ಮಾದರಿಯ ಮುಂದೆ ಕುಳಿತು, ಆಕೆ ಸೇವಕಿ-ಸಖಿಗೆ ಹೇಳುತ್ತಾಳೆ :

> "ಅಮಿನಾ, ನನ್ನ ಹೃದಯದ ಅಂತರಾಳದ ಒಂದು ಆಸೆ — ಹೇಳಲೆ ? ಈ ಮಹಾನ್ ಮಂದಿರವನ್ನು ನೋಡಿದ ಮೇಲೆ ಸಮ್ರಾಟರು, ಇನ್ನು ಬೇಡ ದಂಡಯಾತ್ರೆ, ಭೂಮಿಯ ಮೇಲಣ ಈ ಸ್ವಪ್ನನಗರದಲ್ಲೇ ದಿನ ಕಳೆಯೋಣ ಎನ್ನುವ ಹಾಗಾಗಬೇಕು. ರಾಜಕುಮಾರ ರುಖ್ ಅಧಿಕಾರಸೂತ್ರಗಳನ್ನು ವಹಿಸಿಕೊಂಡು ಪ್ರಜಾಕೋಟಿಯನ್ನು ಸುಖ ದಲ್ಲಿರಿಸಿ, ರಾಜ್ಯಭಾರ ಮಾಡುವಂತಾಗಬೇಕು."

ಶಾಂತಿ ನೆಮ್ಮದಿಗಳ ಈ ಅಪೇಕ್ಷೆ ಅತ್ಯಂತ ಮಾನವೀಯವಾದದ್ದು ; ಶತಶತಮಾನಗಳಿಗೆ ಹಿಂದಿನದು ; ಇನ್ನು ಶತಮಾನ ಕಳೆದರೂ ಇರು ವಂಥದು.

ಅಸ್ವಸ್ಥ ತೈಮೂರ ರುಗ್ಣಶಯ್ಯೆಯಲ್ಲಿದ್ದಾನೆ. ಸಾವು ನಿಶ್ಚಿತ ಎಂದು ಆತ ಬಲ್ಲ. ಯುವರಾಜ, "ನಿಮಗೇನಾದರೂ ಬೇಕೆ ?" ಎಂದು ಕೇಳಿದಾಗ ಅವನೆನ್ನು ತ್ತಾನೆ :

"ಬೇಕು! ನನಗೆ ಬೇಕು, ಬದುಕು! ಇನ್ನೂ ನೂರು ವರ್ಷಗಳ ಬದುಕು! ಅದಿಲ್ಲವಾದರೆ, (ಧ್ವನಿ ಕುಂಠಿತ) ತಕ್ಷಣ ಸಾವು."

ಲೋಕನಾಟಕದಲ್ಲಿ ಪ್ರಮುಖ ಪಾತ್ರವಹಿಸಿದವರೆಲ್ಲರೂ ಪ್ರಾಯಶಃ ಕೊನೆಯ ಘಳಿಗೆಯಲ್ಲಿ 'ಇನ್ನೂ ನೂರು ವರ್ಷಗಳ ಬದುಕ'ನ್ನು ಬಯಸಿದವರೇ.

....ಕ್ರೂರಿಯಾದ ತಂದೆಗೆ ಕ್ರೂರಿಯಾದ ಮಗನೇ ಹುಟ್ಟಬಹುದು. ಬದಲು, ಆತ ಸದ್ಗುಣಿಯಾಗಲೂಬಹುದು. ಅನಾದಿ ಕಾಲದಿಂದಲೂ ಲೋಕ ಇವೆರಡಕ್ಕೂ ದೃಷ್ಟಾಂತಗಳನ್ನು ಒದಗಿಸಿದೆ.

ಮಂಗೋಲ ಸಮ್ರಾಟ ತೈಮೂರ ಹಾಗೂ ರಾಜಕುಮಾರ ಷಾ ರುಖ್ ಇವರ ಜೋಡಿ, ಎರಡು ತಲೆಮಾರುಗಳ ಭಿನ್ನ ನೋಟಗಳಿಗೆ ಭಿನ್ನ ವ್ಯಕ್ತಿತ್ವಗಳಿಗೆ ಉದಾಹರಣೆಯಾಗಿದೆ.*

ಕೊನೆ ಸಮೀಪಿಸಿದಾಗ ತೈಮೂರ ಮಗನನ್ನು ಕೇಳುತ್ತಾನೆ:

"ರುಖ್, ಈ ಭೂಮಿಯ ಮೇಲೆ ಏನು ಸಾಧಿಸಬೇಕೆಂಬ ಆಸೆ ಇಟ್ಟುಕೊಂಡಿದೀಯ, ನೀನು?"

ಷಾ ರುಖ್ ಉತ್ತರಿಸುತ್ತಾನೆ:

"ಜಗತ್ತಿನಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಒಂದು ಗ್ರಂಥ ಭಂಡಾರ ಸ್ಥಾಪಿಸಬೇಕು ಎನ್ನುವುದೇ ನನಗಿರುವ ಆಸೆ, ಅಬ್ಬಾಜಾನ್."

ತೋಳಬಲವನ್ನೇ ನಂಬಿ ಆಯುಸ್ಸನ್ನು ಕಳೆದ ತೈಮೂರನಿಗೆ ಹೇಗಾಗಬೇಡ! ಕುಸಿಯುತ್ತಿರುವ ಬಲವನ್ನು ಕೊನೆಯಬಾರಿಗೆ ಒಟ್ಟುಗೂಡಿಸಿ ತೈಮೂರ ಮಾತನಾಡುತ್ತಾನೆ:

"ಥತ್! ಮೂರ್ಖ! ಗ್ರಂಥ ಭಂಡಾರವಂತೆ! ಜಗತ್ತಿನಲ್ಲೆಲ್ಲಾ ಅತ್ಯಂತ ಬಲಿಷ್ಠವಾದ ವಿಸ್ತಾರವಾದ ಸಾಮ್ರಾಜ್ಯ ಕಟ್ಟಬೇಕು, ಜಗತ್ತೇ ನನ್ನ ಸಾಮ್ರಾಜ್ಯವಾಗಬೇಕು—ಎನ್ನುವ ಆಸೆ ಇಟ್ಟುಕೊ!" ಆ ಮಾತಿನ ಜೊತೆಗೇ ಸತ್ಯ ತೈಮೂರನ ಒಳಗಿಂದ ಅಳುತ್ತದೆ:

---

*After Timur's death his successors were more interested in a quiet life and in cultivating the arts than in military exploits.
—*The Discovery of India*

"ಆದರೆ, ಸಾಮ್ರಾಜ್ಯ ಏಳುತದೆ, ಬೀಳುತದೆ...."

ಇಷ್ಟಕ್ಕೂ ತ್ರೈಮೂರನೊಬ್ಬ ದೈತ್ಯ ಎನ್ನುವುದು ಎಷ್ಟು ತಪ್ಪಾದೀತು! ಹೊಟ್ಟೆ ತುಂಬ ನಗಬಲ್ಲ, ಮಾತಿನಲ್ಲಿ ನವುರು ಹಾಸ್ಯವನ್ನು ಬೆರೆಸ ಬಲ್ಲ, ಮನೋದೌರ್ಬಲ್ಯದ ಸನ್ನಿವೇಶದಲ್ಲಿ ಮಗನನ್ನು ತಬ್ಬಿಕೊಳ್ಳಬಲ್ಲ ಮನುಷ್ಯ ಅಪ್ಪಟ ಅಸುರನೆನ್ನಿಸಿಕೊಳ್ಳುವುದಿಲ್ಲ.

....ಹಾನಿಮ್ ಬೀಬಿ ಕಾಣಿಸಿಕೊಳ್ಳುವುದು ಗೃಹಲಕ್ಷ್ಮಿಯಾಗಿ. ಭಾರತೀಯರಿಗೆಲ್ಲ ಪರಿಚಿತರಾದ ಪಂಚಕನ್ಯೆಯರ ಸಾರಸಂಗ್ರಹ, ಈಕೆ. ಈ ಗೃಹದೇವತೆಯನ್ನು ಸಮ್ರಾಟ ಧಿಕ್ಕರಿಸಿದ ಘಳಿಗೆಯಿಂದ ಅವನ ಪ್ರಭುತ್ವಕ್ಕೇ ಗ್ರಹಣ ಹಿಡಿಯಿತು.

ಪತಿಯಿಂದ ಕಾರಾಗೃಹಕ್ಕೆ ಎಸೆಯಲ್ಪಟ್ಟರೂ, ಆತನ ಬಗೆಗೆ ಕಟು ಮಾತನ್ನು ಆಡಲೊಲ್ಲಳು ಈ ಸಾಧ್ವೀಮಣಿ.

ನಾಟಕದ ಕೊನೆಯ ದೃಶ್ಯ ಆ ದೇವಿಯ ಬದುಕಿಗೆ ದರ್ಪಣವಾಗಿದೆ.

* * *

ರಂಗಭೂಮಿಯಲ್ಲಿ ಅಭಿನಯ ಯೋಗ್ಯವಾಗಬೇಕೆಂಬುದನ್ನು ಮನದಲ್ಲಿಟ್ಟುಕೊಂಡೇ ಈ ನಾಟಕವನ್ನು ರಚಿಸಲಾಗಿದೆ. 'ಸಮ್ರಾಜ್ಞಿ'ಯನ್ನು ಮಂಡಲಿಗಳೂ ಆಡಬಹುದು, ನಾಟ್ಯವಿಲಾಸಿಗಳೂ ಆಡಬಹುದು.

ಅಭಿನಯ ಪಟುಗಳಿಗೆ ನಮ್ಮಲ್ಲಿ ಖಂಡಿತ ಕೊರತೆ ಇಲ್ಲ. ದಕ್ಷ ನಿರ್ದೇಶಕರೂ ಇದ್ದಾರೆ; ಇಲ್ಲೂ ಹೊರ ಜಗತ್ತಿನಲ್ಲೂ ನಾಟಕ ನಡೆದು ಬಂದಿರುವ ದಾರಿಯನ್ನು ಅರಿತವರಿದ್ದಾರೆ. ಇಂಥ ಪ್ರತಿಭಾಸಂಪತ್ತು ನಮ್ಮಲ್ಲಿದ್ದರೂ, 'ಸಮ್ರಾಜ್ಞಿ'ಯ ಅಭಿನಯಕ್ಕೆ ಬಹುಶಃ ಅಡ್ಡಿಯಾಗಬಹುದಾದ ಅಂಶವೆಂದರೆ—ಹಣ. ರಂಗ ಸಜ್ಜಿಕೆಯ ಪರಿಕರಗಳು, ಉಡುಪು ಪೋಷಾಕುಗಳು, ಹಿನ್ನೆಲೆಯ ಧ್ವನಿಮುದ್ರಿಕೆ-ಇವೆಲ್ಲ ನಿರ್ಮಾಪಕರಿಗೆ ಸವಾಲು ಹಾಕುವಂತಿವೆ.

ಈ ಸವಾಲಿಗೆ ಪ್ರತಿಸವಾಲು ಹಾಕುವ ದಿಟ್ಟತನ—ಸಾಮರ್ಥ್ಯ—ನಮ್ಮ ನಾಟ್ಯಲೋಕದಲ್ಲಿ ತೋರಿಬರಲೂಬಹುದು ಎಂದು ನಾನು ಆಸೆ ತಳೆದಿದ್ದೇನೆ.

ಇದಿಷ್ಟು ಈ ಕೃತಿಯನ್ನು ಕುರಿತು. ಇನ್ನು ಎರಡು ನಿಮಿಷಗಳಲ್ಲಿ ಅಂಕದ ಪರದೆ ಏಳುತ್ತದೆ. ತಾವು ದಯವಿಟ್ಟು ಅತ್ತ ಗಮನ ಹರಿಸಬೇಕು.

ಆಗಸ್ಟ್ ೨೦, ೧೯೬೭ — ನಿರಂಜನ

ಜಯನಗರ

ಬೆಂಗಳೂರು—೧೧

ಎರಡನೆಯ ಮುದ್ರಣದ ಅರಿಕೆ

ಮೈಸೂರು ವಿಶ್ವವಿದ್ಯಾನಿಲಯದ ಪ್ರಿ-ಯೂನಿವರ್ಸಿಟಿ ತರಗತಿಯ ೧೯೬೯-೭೦ನೆಯ ವರ್ಷದ ಕನ್ನಡ ಪಠ್ಯಪುಸ್ತಕವೆಂದು 'ಸಮ್ರಾಜ್ಞಿ' ಅಂಗೀಕೃತವಾಗಿರುವುದರ ಪ್ರಯುಕ್ತ ಈ ದ್ವಿತೀಯ ಮುದ್ರಣ ಪ್ರಕಟವಾಗುತ್ತಿದೆ. ಇದಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ನಿಯಾಮಕ ಸಮಿತಿಗೆ ನಾನು ಕೃತಜ್ಞನಾಗಿದ್ದೇನೆ. ಇದನ್ನು ಹೊರತರುವ ಹೊಣೆಯನ್ನು ಹೊತ್ತುದಕ್ಕಾಗಿ ಕನ್ನಡ ಕವಿಕಾವ್ಯಮಾಲೆಯ ಒಡೆಯರಾದ ಪ್ರೊ. ಎಚ್. ಎಂ. ಶಂಕರನಾರಾಯಣರಾಯರಿಗೂ ಸಕಾಲದಲ್ಲಿ ಅಂದವಾಗಿ ಮುದ್ರಿಸಿ ಕೊಟ್ಟಿರುವ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್‌ನ ಶ್ರೀ. ಜಿ. ಹೆಚ್. ಕೃಷ್ಣಮೂರ್ತಿಯವರಿಗೂ ನಾನು ಉಪಕೃತನಾಗಿದ್ದೇನೆ.

ಮೇ ೨೦, ೧೯೬೯
ಜಯನಗರ
ಬೆಂಗಳೂರು-೧೧

ನಿರಂಜನ

ಗ್ರಂಥಋಣ

ಭಾರತೀಯ ವಿದ್ಯಾಭವನ

The Delhi Sultanate

ಜವಹರಲಾಲ ನೆಹರೂ

The Glimpses of World History
The Discovery of India

ರಾಲ್ಫ್ ಫಾಕ್ಸ

The People of the Steppes

೧೩

ಸಮ್ರಾಜ್ಞಿ

ಪಾತ್ರ ವರ್ಗ

ಮಂಗೋಲರು

ಬೀಬಿ ಹಾನಿಮ್	....	೩೫	ಸಮ್ರಾಜ್ಞಿ
ತೈಮೂರ	....	೬೦	ಸಮ್ರಾಟ
ಷಾ ರುಖ್	....	೧೮	ರಾಜಕುಮಾರ
ಅವಿಷಾನಾ	....	೩೦	ಸಮ್ರಾಜ್ಞಿಯ ಸೇವಕಿ
ಪೀರ್ ಮಹಮ್ಮದ್	....	೫೦	ಸೇನಾನಿ
ಖಿಜರ್‌ಖಾನ್	....	೪೫	ಸೇನಾನಿ
ಸುಲೇಮಾನ್	....	೫೫	ಅಂಗರಕ್ಷಕ
ಓಲೆಕಾರ	....	೪೦	....
ಇಬ್ಬರು ಸೇವಕರು	....	೪೦	....
ಕಾವಲುಗಾರ	....	೪೦	....
ಯಾಕೂಬ್	....	೭೦	ಸಹಾಯಕ ಶಿಲ್ಪಿ
ರಫೀಖ್	....	೨೫	" ಶಿಲ್ಪಿ
ಇಬ್ಬರು ಬೇಹುಗಾರರು			....
ಇಬ್ಬರು ಅನಾಮಿಕರು			....
ಸೈನಿಕರು			....

ಭಾರತೀಯರು

ಮಹಮ್ಮದ್ ಷಾ	....	೪೦	ಸುಲ್ತಾನ
ಮಲ್ಲೂ ಇಕ್ಬಾಲ್ ಖಾನ್	....	೫೦	ಅಮಾತ್ಯ
ಫಾತಿಮಾ	....	೨೫	ದಿಲ್ಲೀ ನಿವಾಸಿ
ಅಹಲ್ಯಾ	....	೨೫	ದಿಲ್ಲೀ ನಿವಾಸಿ
ಕಾವಲುಗಾರ	....	೪೦	ಅರಮನೆ ಚಾಕರ
ಝುಲ್‌ಫಿಖರ್	....	೩೦	ಸೇವಕ
ಮುಸಲ್ಮಾನ ವರ್ತಕ	....	೫೦	....
ಹಿಂದೂ ಬೈರಾಗಿ	....	೫೦	....
ಇಬ್ಬರು ಮೂವರು ಸೈನಿಕರು			....
ರಾಜಾ ಧೂಲ್‌ಚಂದನ			....
ಬೇಹುಗಾರ	....	೪೦	....

ಅರಬ

ದಾವೂದ್	....	೩೫	ಶಿಲ್ಪಿ

ಕಾಲ : ಹದಿನಾಲ್ಕನೆಯ ಶತಮಾನದ ಕೊನೆ ಹಾಗೂ
ಹದಿನೈದನೆಯ ಶತಮಾನದ ಆರಂಭ

ಪ್ರಥಮಾಂಕ

ದೃಶ್ಯ ೧

[ಮಂಗೋಲ ಸಾಮ್ರಾಜ್ಯದ ರಾಜಧಾನಿಯಾದ ಸಮರ್ಕಂದದಲ್ಲಿ ಅರಮನೆ
೧ ಯೊಳಗಣ ರಾಣೀವಾಸ. (ಭಾರತೀಯ ಪ್ರೇಕ್ಷಕರಿಗೆ ಪರಿಚಿತವಾದ ಮೊಗಲ ಮಾದರಿಯ ರಂಗಸಜ್ಜಿಕೆ.) ತೆರೆ ಸರಿದಾಗ, ಅಗಲ ಪೀಠದ ಮೇಲೆ ಒರಗುದಿಂಬಿಗೆ ಮೈ ಆನಿಸಿ ಬಿಳಿಯ ಪಾರಿವಾಳವನ್ನು ಎದೆಗೆ ಒತ್ತಿಕೊಂಡು ಅದರ ಮೈದಡವುತ್ತ ಕುಳಿತಿರುವಾಕೆ, ಅಪ್ರತಿಮ ಸುಂದರಿಯಾದ ಸಮ್ರಾಜ್ಞಿ ಹಾನಿಮ್. ಸಖಿ-ಪರಿಚಾರಿಕೆ ಅಮೀನಾ, ರಂಗದ ಒಂದು ಮಗ್ಗುಲಲ್ಲಿ ಜಾಲಂಧ್ರದ ಮೂಲಕ ಹೊರಗೆ ನೋಡುತ್ತಿದ್ದಾಳೆ.

ತೆರೆ ಸರಿದಂತೆಯೇ ದೂರದಿಂದ ಉತ್ಸಾಹೀ ಜನಸಮುದಾಯದ ಕಲರವ, ಕೊಂಬು ತಮಟೆ ಭೇರಿಗಳ ಸದ್ದು ಕೇಳಿಸುತ್ತದೆ. ಅದು ಜೈತ್ರಯಾತ್ರೆಯಿಂದ ಮರಳಿ ಬರುತ್ತಿರುವ ಸಮ್ರಾಟ ತೈಮೂರನಿಗೆ ಸಮರ್ಕಂದದ ಸ್ವಾಗತ. ಜನತೆ ಜಯಘೋಷ ಮಾಡುತ್ತಿದೆ: 'ಮಂಗೋಲ ಮಹಾಪ್ರಭು ತೈಮೂರ್‌ಖಾನ್ ಜಿಂದಾಬಾದ್!' 'ಲೋಕೈಕ ವೀರ ತೈಮೂರ್‌ಖಾನ್ ಜಿಂದಾಬಾದ್!']

ಹಾನಿಮ್—ಮೆರವಣಿಗೆ ಕಾಣಿಸುತ್ತಿದೆಯೆ, ಅಮೀನಾ?

ಅಮೀನಾ—(ಈಗ ಹೆಚ್ಚು ಸ್ಪಷ್ಟವಾಗಿರುವ ಕಲರವದ ಹಿನ್ನೆಲೆಯಲ್ಲಿ) ಹ್ಞೂ, ಸಮ್ರಾಜ್ಞಿ. ಅರಮನೆಯ ಬೀದಿಗೆ ಬಂತು. ಅಬ್ಬಯ್ಯಾ! ಏನು ಸಂಭ್ರಮ! ಎಂಥ ಸಡಗರ! ಶ್ವೇತಾಶ್ವದ ಮೇಲೆ ಸಮ್ರಾಟರು! ಸೇನಾನಿಗಳು-ಸೈನಿಕರು! ಹೆಜ್ಜೆ ಹೆಜ್ಜೆಗೂ ಮುಜುರೆ ಸಲ್ಲಿಸುತಿರುವ ಪ್ರಜಾಕೋಟಿ! ಎಷ್ಟೊಂದು ಬಣ್ಣಗಳು! ಎಂಥೆಂಥ ಉಡುಪುಗಳು!

ಹಾನಿಮ್—ನಿನ್ನ ವರ್ಣನೆ ಪ್ರತಿಸಲವೂ ಒಂದೇ ತರಹೆ, ಅಮೀನಾ.

ಅಮೀನಾ—ಸಮ್ರಾಟರಿಗೇನು ವಯಸ್ಸಾಯ್ತೆ ಬೇರೆ ರೀತಿ ಬಣ್ಣಿಸೋದಕ್ಕೆ?

ಹಾನಿಮ್—(ಹುಸಿ ಮುನಿಸಿನಿಂದ) ಕತ್ತೆ! (ಧ್ವನಿ ಬದಲಿಸಿ) ರಾಜಕುಮಾರ ಕಾಣುತ್ತಿಲ್ಲವೆ ನಿನ್ನ ಕಣ್ಣಿಗೆ?

ಅಮೀನಾ—ಸ್ವಾಗತಕ್ಕೆ ಹೋದವರು ಅಡೆಲ್ಲಿ ಬಚ್ಚಿಟ್ಟುಕೊಂಡರೋ?

ಮೊದಲಿನ ಹಾಗೆ ಮಗುವಾಗಿಯೇ ಇದ್ದಿದ್ದರೆ ಎತ್ತಿಕೊಂಡು ಈ ಜಾಲಂದ್ರದಿಂದಲೇ ಬಾದಶಹರನ್ನು ತೋರಿಸುತ್ತಿದ್ದೆ. (ಹಿನ್ನೆಲೆಯಲ್ಲಿ ಜಯಘೋಷ: 'ಮಂಗೋಲ ಮಹಾಪ್ರಭು ತೈಮೂರ್‌ಖಾನ್ ಜಿಂದಾಬಾದ್!' ಎರಡು ಮೂರು ಬಾರಿ) ಅಲ್ಲಾ ಇದೇನು ಕುಳಿತೇಬಿಟ್ಟಿರಿ? ಬಂದು ನೋಡುವುದಿಲ್ಲವೆ?

ಹಾನಿಮ್—(ಪಾರಿವಾಳಕ್ಕೆ ಮುತ್ತುಕೊಟ್ಟು) ಎದೆ ಡವಡವನೆ ಹೊಡೆದು ಕೊಳ್ಳುತಾ ಇದೆ ಅಮೀನಾ.

ಅಮೀನಾ—ಒಂದು ವರುಷವಿಡೀ ಅರಸನನ್ನು ಕಂಡಿಲ್ಲ, ಇನ್ನೇನು ಮಾಡೀತು ಪಾಪ! (ಪರಿಹಾಸ್ಯದ ಧ್ವನಿಯನ್ನು ಬದಲಿಸಿ) ಬನ್ನಿ, ಸಮ್ರಾಜ್ಞಿ.

ಹಾನಿಮ್—(ಎದ್ದು ಪಾರಿವಾಳದೊಡನೆ ಜಾಲಂದ್ರದ ಬಳಿ ಬಂದು ಹೊರಕ್ಕೆ ನೋಡುತ್ತ) ಸಮ್ರಾಟರು ದಣಿದಂತಿದ್ದೆ, ಅಲ್ಲವೆ?

ಅಮೀನಾ—ಪ್ರಯಾಣದ ಬಳಲಿಕೆ. ಅಂತಃಪುರಕ್ಕೆ ಆಗಮಿಸಿ ನಿಮ್ಮ ದರ್ಶನವಾದೊಡನೆಯೇ ಮಾಯ!

ಹಾನಿಮ್—ಸಾಕು, ಬಿಡು!

ಅಮೀನಾ—ಬಾದಶಹರು ಕುದುರೆಯಿಂದ ಇಳಿಯುತಿದಾರೆ; ಪಾರಿವಾಳವನ್ನು ಹಾರಿಸಿಬಿಡೋಣವೆ?

ಹಾನಿಮ್—ಹ್ಞ. (ಪಾರಿವಾಳವನ್ನು ಅಮೀನಾಗೆ ಕೊಡುತ್ತ) ಹಾರಿಸಿ ಬಿಡು.

ಅಮೀನಾ—(ಹಕ್ಕಿಗೆ) ಕುಟುರ್, ಕುಟುರ್. ಹಾರಿಹೋಗಿ ಸಮ್ರಾಟರಿಗೊಂದು ಉಮ್ಮ ಕೊಡು.

ಹಾನಿಮ್—ಛಿ! ನಾಚಿಕೆ ಇಲ್ಲದವಳು!

(ಅಮೀನಾ ನಗುತ್ತ ಪಾರಿವಾಳವನ್ನು ಜಾಲಂದ್ರದ ಹೊರಕ್ಕೆ ಹಾರಿಬಿಡುವಳು.)

(ಕೊಂಬು ತಮಟೆಗಳ ಸದ್ದು ಹಿನ್ನೆಲೆಯಲ್ಲಿ ಒಂದು ಕ್ಷಣ ತೀವ್ರಗೊಂಡು ನಿಂತು ಹೋಗಲು, ಜನರ ಗುಜುಗುಜು ಕಡಮೆಯಾಗುತ್ತ, ನೀರವತೆ ನೆಲೆಸುತ್ತದೆ. ಆ ನೀರವತೆಯನ್ನು ಭೇದಿಸಿ, ನೇಪಥ್ಯದಲ್ಲಿ—)

ಸ್ತುತಿಪಾಠಕರು—ಪಶ್ಚಿಮದ ರಾಜಾಧಿರಾಜರನ್ನು ಸೋಲಿಸಿದ ರಣಾಗ್ರಣಿ, ಸಮರ್ಕಂದ ರಾಜಧಾನಿಯಾಗುಳ್ಳ ಸಾಮ್ರಾಜ್ಯದ ಅಧಿಪತಿ, ಮಹಾ

ಮಂಗೋಲ ಚೆಂಗೀಸ್‌ಖಾನರ ವಂಶಜ, ವೈರಿಕುಲ ಕುಠಾರ, ಬಾದಶಹ ತೈಮೂರ್ ಖಾನರು ಅಂತಃಪುರಕ್ಕೆ ದಯಮಾಡಿಸುತ್ತಿದಾರೆ- ಹೋಷಿಯಾರ್ ! ಹೋಷಿಯಾರ್ !

ಅಮೀನಾ—(ಅವಸರದ ಪಿಸುದನಿಯಲ್ಲಿ) ಸಮ್ರಾಜ್ಞಿ, ನಾನು ಒಳಗಿರುತೇನೆ. (ನಿಷ್ಕ್ರಮಣ)

ಹಾನಿಮ್—(ಉತ್ಕಂಠೆಯಾಗಿ) ಹ್ಞಾ....(ಜಾಲಂಧ್ರದಿಂದ ಮುಖ ತಿರುಗಿಸಿ ಪ್ರವೇಶ ದ್ವಾರದತ್ತ ನೋಡುತ್ತ, ಅಲ್ಲಿಯೇ ನಿಲ್ಲುತ್ತಾಳೆ.)

(ನೇಪಥ್ಯದಲ್ಲಿ ಕುಂಟ ತೈಮೂರನ ನಡಿಗೆಯ ಕ್ಲಾಂಗ್ ಕ್ಲಾಂಗ್ ಸದ್ದು.)

ತೈಮೂರ—(ಆ ಸದ್ದಿನೊಂದಿಗೇ ಪ್ರವೇಶಿಸುತ್ತ ಥಟ್ಟನೆ ನಿಂತು, ಹಾನಿಮಳನ್ನು ಕಂಡು) ಹ್ಞಾ ! ಸಮ್ರಾಜ್ಞಿ ! (ಪರಿಹಾಸ್ಯದಿಂದ) ಈ ಕುಂಟನನ್ನು ಎಷ್ಟು ನಡೆಸುತೀರಿ ! ಒಂದು ಹೆಜ್ಜೆಯಾದರೂ ಮುಂದೆ ಬರಬಾರದೆ ಹಾನಿಮ್ ಬೀಬಿ ?

ಹಾನಿಮ್—(ಎರಡು ಹೆಜ್ಜೆ ಮುಂದೆ ಬರುತ್ತ) ಸಮ್ರಾಟರಿಗೆ ಸ್ವಾಗತ !

ತೈಮೂರ—ಹೀಗೆ ? ಬರಿಮಾತಿನಲ್ಲಿ ? (ಆಕೆಯತ್ತ ಧಾವಿಸಿ, ತೋಳುಗಳಿಂದ ಬಳಸಿ) ಹಂ....ಈ ಅಂತಃಪುರದಲ್ಲಿ ಕಾಲ ಚಲಿಸುವುದಿಲ್ಲ. ನಾನು ಹೊರಟಾಗ ಹೇಗಿದ್ದಿರೋ ಹಾಗೆಯೇ ಇದೀರಿ....ಕಣ್ಣು ಮೂಗು ಕೆನ್ನೆ ಗಲ್ಲ ಹಂ-ಹಂ-ಪ್ರತಿಯೊಂದೂ ಹಾಗೆಯೇ.

ಹಾನಿಮ್—ಕುಳಿತು ವಿಶ್ರಮಿಸಬಾರದೆ ?

ತೈಮೂರ—ಅಪ್ಪಣೆ, ಅಪ್ಪಣೆ ! ದಯಮಾಡಿಸಿ ತಾವೂ....(ಇಬ್ಬರೂ ಪೀಠದ ಮೇಲೆ ಕುಳಿತುಕೊಳ್ಳುವರು) ಹ್ಞಾ ! (ಅರಸಿಯ ಮುಖವನ್ನು ದಿಟ್ಟಿಸಿ ನೋಡಿ ಧ್ವನಿ ಬದಲಿಸಿ) ಏನಿದು ಕಣ್ಣೀರು ?

ಹಾನಿಮ್—ಆನಂದಾಶ್ರು, ದೊರೆ. ಊರು-ಅರಮನೆ-ಕೈಹಿಡಿದಾಕೆಯ ನೆನಪಾಗಿ ರಣರಂಗದಿಂದ ಮರಳಿ ಬಂದಿರಲ್ಲ—ಎಂದು.

ತೈಮೂರ—ಓಹೋ ! ಬೇಟೆಗಾಗಿ ಕಾಡಿಗೆ ಹೋಗುತೇವೆ; ಊಟಕ್ಕಾಗಿ ಊರಿಗೆ ಬರುತೇವೆ. ಅದೂ ಒಂದು ವಿನೋದ, ಇದೂ ಒಂದು ವಿನೋದ. ಕಣ್ಣೊರೆಸಿಕೊಳ್ಳಿ. (ಹಾನಿಮ್ ಬಲವಾಗಿ ಕಣ್ಣು ಮುಚ್ಚಿ ತೆರೆದು ಮುಗುಳು ನಗುತ್ತಾಳೆ.) ಹ್ಞಾ ! ಇಲ್ಲಿ ಎಲ್ಲವೂ ಕುಶಲ ?

ಹಾನಿಮ್—ಸಮ್ರಾಟರ ಕೃಪೆಯಿಂದ, ಅಲ್ಲಾನ ದಯೆಯಿಂದ, ಎಲ್ಲವೂ ಕುಶಲ.

ತೈಮೂರ—ಒಂದು ವಿಷಯ ನೀವು ಮರೆತಿರಿ.

ಹಾನಿಮ್—ಮರೆತೆನೆ?

ತೈಮೂರ—ಈ ಸಲ ನಾನು ಬರುವಾಗ ಸ್ವಾಗತಕ್ಕೆ ರಾಜಕುಮಾರನನ್ನು ಕಳುಹಿಸಬೇಕು ಎಂದಿದ್ದೆನಲ್ಲವೆ?

ಹಾನಿಮ್—ಕಳುಹಿಸಿದ್ದೆ, ದೊರೆ. ರುಖ್‌ಗೆ ಸಂಕೋಚವಾಗಿ ಜನಸಮ್ಮರ್ದ ದಲ್ಲಿ ಎಲ್ಲಿಯೋ ಬದಿಗೆ ಸರಿದಿರಬೇಕು.

ತೈಮೂರ—ಮುದ್ದು ಮಗನನ್ನು ಕರೆಸುತೀರಾ?

ಹಾನಿಮ್—(ಕೈತಟ್ಟಿ) ಅಮಿನಾ! (ಆಕೆ ಹೊರಗೆ ಬಂದು ತೈಮೂರನೆದುರು ಕುರ್ನೀಸು ಮಾಡುತ್ತಿರಲು) ಯುವರಾಜರನ್ನು ಈ ಕ್ಷಣವೇ ಕರೆದು ಕೊಂಡು ಬಾ.

ತೈಮೂರ—ಅರಸುಕುಮಾರನನ್ನು ಸರಿಯಾಗಿ ನೋಡಿಕೊಂಡಿರೊ?

ಹಾನಿಮ್—ಹದಿನೆಂಟರ ಹರೆಯ. ಮಡಿಲಲ್ಲಿ ಬಚ್ಚಿಟ್ಟುಕೊಳ್ಳಲು ಆಗುತ್ತ ದೇನು?

ತೈಮೂರ—ಸದ್ಯ ಇಷ್ಟಾದರೂ ಒಪ್ಪಿಕೊಂಡಿರಲ್ಲ!

ಷಾ ರುಖ್—(ಒಳಗೆ ಬರುತ್ತ) ಅಬ್ಬಾಜಾನ್, ಕರೆದಿರಂತೆ.

ಹಾನಿಮ್—ಎಲ್ಲಿದ್ದೆಯೋ ರುಖ್?

ಷಾ ರುಖ್—ಇಲ್ಲೇ ಇದ್ದೆ, ಅಮ್ಮಾಜಾನ್.

ತೈಮೂರ—(ಮಗನನ್ನೇ ಒಂದು ಕ್ಷಣ ದಿಟ್ಟಿಸಿ) ಎತ್ತರಕ್ಕೆ ಬೆಳೆದಿದಾನೆ.

ಹಾನಿಮ್—ದೀರ್ಘಕಾಲ ಬಿಟ್ಟಿರುತೀರಿ. ವಾಪಸು ಬಂದಾಗ ಇನ್ನು ಹೇಗೆ ಕಂಡಾನು?

ತೈಮೂರ—ರುಖ್! ಅಭ್ಯಾಸಗಳು ಹೇಗೆ ನಡೆದಿವೆ?

ಷಾ ರುಖ್—ಧರ್ಮಗ್ರಂಥವಾಯಿತು, ಖಗೋಳ ಶಾಸ್ತ್ರವಾಯಿತು, ಕಾವ್ಯ ಲಕ್ಷಣ—

ತೈಮೂರ—ಕಾವ್ಯಲಕ್ಷಣ! ಥುತ್! ಸಮರಶಾಸ್ತ್ರ ಎಷ್ಟು ಕಲಿತೆ?

ಹಾನಿಮ್—ಅದೂ ನಡೆದಿದೆ, ಸಮ್ರಾಟರ ಮಾವನವರು—

ತೈಮೂರ—(ತುಸು ಕೋಪದಿಂದ) ಸಮ್ರಾಟರ ಮಾನವಾಯಿತು, ಅವರ ಮಗಳಾದ ನೀವಾಯಿತು. ನನಗೆ ಅಸಮಾಧಾನವಾಗಿದೆ, ಬೇಗಂ ಸಾಹೀಬಾ. ಯುವರಾಜ ಹೆಣ್ಣಿಗನಾಗುತಿದಾನೆ. ಇನ್ನು ಹೀಗೇ ಬಿಟ್ಟಿರಲಾರೆವು. ಮುಂದಿನ ಸಾರೆ ಯುದ್ಧ ಭೂಮಿಗೆ ರಾಜಕುಮಾರ ನನ್ನು ಕರೆದೊಯ್ಯುತೀವೆ.

ಹಾನಿಮ್— ನಿಮ್ಮಿಷ್ಟ. ಬೇಡ ಅನ್ನುತೇನೆಯೇ ?

ತೈಮೂರ—(ಮಗನತ್ತ ತಿರುಗಿ) ಏನೋ ರುಖ್ ? ದಂಡಿನ ಜೊತೆ ರಣರಂಗಕ್ಕೆ ಬರುತೀಯೇನೊ ?

ಷಾ ರುಖ್— ಬಾ ಅಂದರೆ ಬರುತೇನೆ.

ತೈಮೂರ— ಅಬ್ಬ ! ಇಷ್ಟರಿಂದ ನಾವು ತೃಪ್ತರಾಗಬೇಕು !....ಬರಬೇಡ ಅಂದರೂ ಬಂದೇ ತೀರುತೇನೆ, ಅಂತ ಹಟ ತೊಡುತೀಯಾ ?

ಷಾ ರುಖ್— ಹಟ ತೊಡಬೇಕು ಅಂದರೆ ತೊಡುತೇನೆ.

ತೈಮೂರ— ಹೊಹ್ಹೊಹ್ಹೊ ! (ಬಿದ್ದು ಬಿದ್ದು ನಗುವನು. ಹಾನಿಮಳೂ ತುಸು ನಗುವಳು.) ಹಂ. (ಗಾಂಭೀರ್ಯ ತಳೆದು) ರಾಜಕುಮಾರನ ಶಿಕ್ಷಣದ ಹೊಣೆಯನ್ನು ನಾವೇ ಹೊರಬೇಕು ಇನ್ನು. (ನಿಟ್ಟುಸಿರು ಬಿಟ್ಟು, ಧ್ವನಿ ಬದಲಿಸಿ) ಇರಲಿ. (ಚಪ್ಪಾಳೆ ತಟ್ಟಿ) ಯಾರಲ್ಲಿ ? ಅರಮನೆಗೆ ಮುಟ್ಟಿಸ ಬೇಕಾದ ಪೆಟಾರಿಗಳನ್ನು ಒಳಕ್ಕೆ ತನ್ನಿ ! (ಮತ್ತೆ ಮೃದು ಧ್ವನಿಯಲ್ಲಿ) ಬೀಬಿ, ಜಗತ್ತಿನ ಹತ್ತು ದಿಕ್ಕುಗಳಿಂದ ನಿಮಗಾಗಿ ಏನು ತಂದಿದೇವೆ ಹೇಳುತೀರಾ ?

ಹಾನಿಮ್— ಪ್ರತಿಸಲವೂ ತರುವಂತೆ ಕಣ್ಣು ಕುಕ್ಕಿಸುವ ವಜ್ರ ವೈಢೂರ್ಯ ಗಳು, ವಸ್ತ್ರ ಒಡವೆಗಳು, ಅಲ್ಲವೆ ?

ತೈಮೂರ—ಲೋಕದ ಸಂಪತ್ತನ್ನೆಲ್ಲ ತಂದು ನಿಮ್ಮ ಮುಂದಿಟ್ಟರೂ ನಿಮಗೆ ತೃಪ್ತಿ ಇಲ್ಲವಲ್ಲ !

ಹಾನಿಮ್— ಇಲ್ಲದೆ ಉಂಟೆ, ದೊರೆ ? ಈ ಸಂಪತ್ತು ನಿಮ್ಮ ಪರಾಕ್ರಮದ ಫಲ.

(ಇಬ್ಬರು ಸೇವಕರು ಎರಡು ಪೆಟಾರಿಗಳನ್ನು ಒಳಕ್ಕೆ ತರುವರು. ತೈಮೂರನ ಕೈಸನ್ನೆಯನ್ನು ಅನುಲಕ್ಷಿಸಿ ಮುಚ್ಚಳಗಳನ್ನು ತೆರೆಯುವರು.

ಬಗೆಬಗೆಯ ಆಭರಣಗಳು ಕಣ್ಣು ಕುಕ್ಕುವಂತೆ ಝುಗಝುಗಿಸುವುವು. ಸಮ್ರಾಟನ ಸನ್ನೆಯಂತೆ ಸೇವಕರು ಹೊರಡುವರು.)

ತೈಮೂರ— ನೋಡಿದಿರಾ ಬೇಗಂ ?

ಹಾನಿಮ್— ನನ್ನ ಊಹೆ ಸರಿ.

ತೈಮೂರ— ಈ ಐಶ್ವರ್ಯಕ್ಕಿಂತಲೂ ಹೆಚ್ಚಿನದು ನಿಮಗೇನು ಬೇಕು ?

(ಹಾನಿಮ್ ನಿರುತ್ತರ. ಷಾ ರುಖ್ ನಿರಾಸಕ್ತಿಯ ನೋಟದಿಂದ ನೋಡುವನು.)

ತೈಮೂರ— ಯಾಕೆ ಮೌನ? ಹೇಳೋಣವಾಗಲಿ.

ಹಾನಿಮ್— ನನಗೊಂದು ಆಸೆ ಇದೆ. ಅಪ್ಪಣೆಯಾದರೆ—

ತೈಮೂರ— ಓಹೋ ! ಅರಿಕೆ ಮಾಡುವುದಕ್ಕೂ ಅಪ್ಪಣೆ ; ಈಡೇರಿಸಿಕೊಳ್ಳುವುದಕ್ಕೂ ಅಪ್ಪಣೆ.

ಹಾನಿಮ್— ನಿಮ್ಮ ದಿಗ್ವಿಜಯಗಳಿಗೆ ಸ್ಮಾರಕವಾಗಿ ಒಂದು ಮಸೀದಿಯನ್ನೂ ಕಮಾನು ಕಂಬಗಳನ್ನೂ ಕಟ್ಟಿಸಬೇಕೆಂಬ ಆಸೆ.

ತೈಮೂರ— ಅಗತ್ಯವಾಗಿ ಮಾಡಿಸಿ.

ಹಾನಿಮ್— ಈ ಲೋಕದಲ್ಲಿ ಅಂಥದು ಇನ್ನೊಂದು ಇರಬಾರದು.

ತೈಮೂರ— ಅಮೃತಶಿಲೆಯೆ ? ಅಮೂಲ್ಯ ಹರಳುಗಳೆ ? ಸನ್ನೆ ಮಾಡಿದರೆ ಸಾಕು, ಬಂದು ಬೀಳುತವೆ.

ಹಾನಿಮ್— ನಿರ್ಮಿಸಬಲ್ಲ ಅತ್ಯಂತ ಶ್ರೇಷ್ಠನಾದ ಶಿಲ್ಪಿಯೊಬ್ಬ ಬೇಕು.

ತೈಮೂರ— ಅಷ್ಟೇ ತಾನೆ ? ಆತ ಗೋಬಿ ಮರುಭೂಮಿಯಲ್ಲೇ ಇರಲಿ, ಕಪ್ಪು ಸಮುದ್ರದ ತಟದಲ್ಲೇ ಇರಲಿ, ಹಿಡಿದು ತರಿಸುತೇವೆ.

ಹಾನಿಮ್— ಸಮ್ರಾಟರಿಗೆ ನಾನು ಕೃತಜ್ಞಳು.

ತೈಮೂರ— ಬರಿಯ ಬಾಯಿ ಮಾತಿನ ಕೃತಜ್ಞತೆ ? ಉಫ್ !

ಷಾ ರುಖ್— ನನಗೆ ಅಪ್ಪಣೆಯೆ, ಅಬ್ಬಾಜಾನ್ ?

ತೈಮೂರ— ಓಡು ! ಓಡು !

(ಷಾ ರುಖ್ ನಿರ್ಗಮನ. ತೈಮೂರ ಸಮ್ರಾಜ್ಞಿಯತ್ತ ತನ್ನ ಕೈಗಳನ್ನು ಚಾಚುತ್ತಿರುವಂತೆ, ತೆರೆ.)

ದೃಶ್ಯ ೨

[ಅರಮನೆಯಲ್ಲೊಂದು ವಿಶಾಲ ಕೋಣೆ. ಇದು ವಿವಿಧ ರಾಷ್ಟ್ರಗಳ ವಿವಿಧ ಕಾಲಗಳ ಶಸ್ತ್ರಾಸ್ತ್ರಗಳ ಸಂಗ್ರಹಾಲಯ.

ಮಧ್ಯದಲ್ಲಿ ದೊಡ್ಡದೊಂದು ಪೀಠ. ಸಂಗ್ರಹದಲ್ಲಿ ನಾಲ್ಕಾರು ಶಸ್ತ್ರಗಳಿಗೆ ಪ್ರಮುಖ ಸ್ಥಾನ. ಎಡಬಲ ಮಗ್ಗುಲುಗಳಲ್ಲಿ ಒಂದೊಂದು ಸಾಧಾರಣ ಪೀಠ.

ತೆರೆ ಸರಿದಾಗ ತೈಮೂರ ಪ್ರೇಕ್ಷಕರಿಗೆ ಬೆನ್ನುಮಾಡಿ ನಿಂತು, ಒಂದೆರಡು ಅಸ್ತ್ರಗಳನ್ನು ಒಂದೊಂದಾಗಿ ಎತ್ತಿ ಹಿಡಿಯುತ್ತ, ಬೀಸುತ್ತ, ಪರೀಕ್ಷಿಸುತ್ತ ನಿಂತಿದ್ದಾನೆ.

ಸೇವಕ ಒಳಕ್ಕೆ ಮುಖ ತೋರಿಸಿ, ಸಮ್ರಾಟನ ತಲ್ಲೀನತೆಗೆ ಭಂಗತರುವುದು ಹೇಗೆ ಎಂದು ಯೋಚನಾಪರನಾಗಿದ್ದಾನೆ. ಕೊನೆಗೊಮ್ಮೆ ಮೆಲ್ಲಗೆ ಕೆಮ್ಮುತ್ತಾನೆ.]

ತೈಮೂರ—(ಸರಕ್ಕನೆ ತಿರುಗಿ) ಏನದು?

ಸೇವಕ—(ಬಾಗಿ ಕುರ್ನೀಸು ಮಾಡಿ) ಬಾದಶಹ, ಸೇನಾನಿಗಳಾದ ಪೀರ್ ಮಹಮ್ಮದರೂ ಖಿಜರ್‌ಖಾನರೂ ತಮ್ಮ ಅನುಜ್ಞೆಯಂತೆ ಭೇಟಿಗೆ ಬಂದಿದಾರೆ.

ತೈಮೂರ— ಹುಂ, ಒಳಕ್ಕೆ ಕಳುಹಿಸು.

(ಸೇವಕ ನಿಷ್ಕ್ರಮಿಸಿದೊಡನೆಯೇ ಸೇನಾನಿಗಳು ಒಳಬಂದು ಮೌನವಾಗಿ ಕುರ್ನೀಸು ಮಾಡುತ್ತಾರೆ. ತೈಮೂರ ತುಸು ತಲೆಯಲುಗಿಸಿ ವಂದನೆ ಸ್ವೀಕರಿಸಿ) ಪೀಠಗಳು ನಿಮ್ಮ ದಾರಿ ನೋಡುತಿವೆ ಪೀರ್ ಮಹಮದ್, ಖಿಜರ್ ಖಾನ್—(ಕೈಯಲ್ಲಿದ್ದ ಆಯುಧವನ್ನು ಅದರ ಸ್ಥಾನದಲ್ಲಿರಿಸಿ ತೈಮೂರ ದೊಡ್ಡ ಪೀಠದಲ್ಲಿ ಕುಳಿತಮೇಲಷ್ಟೇ ಸೇನಾನಿಗಳು ಆಸೀನರಾಗುತ್ತಾರೆ.)

ತೈಮೂರ—ರಾಜಧಾನಿಗೆ ಮರಳಿ ಇನ್ನೂ ಒಂದು ತಿಂಗಳಿಲ್ಲ-ಅಷ್ಟರಲ್ಲೇ ಸಮ್ರಾಟರು ಕರೆಸಿದರಲ್ಲಾ, ಎಂದು ಆಶ್ಚರ್ಯವಾಯಿತೇನು?

ಪೀರ್ ಮಹಮ್ಮದ್, ಖಿಜರ್‌ಖಾನ್—(ವಿನಯದ ನಸುನಗೆ)

ತೈಮೂರ—ಲೋಕದಲ್ಲಿ ಆಯುಧಗಳ ಎದುರು ನಿಂತು ಚಿಂತನೆಯಲ್ಲಿ ನಾವು ನಿರತರಾಗಿದ್ದೆವು. ಪೀರ್ ಮಹಮದ್, ಅಗೋ, ನಮ್ಮ ಪೂರ್ವಜರಾದ ಚೆಂಗೀಸ್‌ಖಾನರು ಹಿಡಿದ, ಕಡಿದ ಖಡ್ಗ. ಅದನ್ನು ನೋಡುತ್ತ ನಮಗೆ ರೋಮಾಂಚನವಾಯಿತು. ಸ್ವತಃ ಬಡಾಖಾನರೇ ನಮ್ಮ ಮುಂದೆ ನಿಂತು ಗುಡುಗಿದ ಹಾಗಾಯಿತು. ಅವರೆಂದರು: 'ಮಗೂ ನಿನ್ನಲ್ಲಿ ನನಗೆ ಭರವಸೆ ಇದೆ!'

ಪೀರ್ ಮಹಮ್ಮದ್—ತಮ್ಮಂಥ ಒಡೆಯರ ಕೆಳಗೆ ಚಾಕರರಾಗಿರುವ ನಾವು ಧನ್ಯರು, ಜಹಾಪನ.

ಖಿಜರ್‌ಖಾನ್—ನಾವು ಅದೃಷ್ಟವಂತರು ಬಾದಶಹ.

ತೈಮೂರ—ಪೀರ್, ಖಿಜರ್, ಇಲ್ಲಿ ಕೇಳಿ. ಚೆಂಗೀಸ್‌ಖಾನರು ಮಂಗೋಲ್ ಜನಾಂಗದ ಬಡಾಖಾನರೆಂದು ಪಟ್ಟಾಭಿಷಿಕ್ತರಾಗಿ ನೂರ ಅರುವತ್ತ ಮೂರು ವರ್ಷಗಳು ಸಂದಮೇಲೆ ನಾವು ಸಮ್ರಾಟರಾದೆವು. ಎಂಥ ಉಜ್ವಲ ಇತಿಹಾಸವನ್ನು ಬರೆದ ಮಹಾನ್ ವಂಶ ನಮ್ಮದು! ಬಡಾಖಾನರ ಬಳಿಕ ಉಗದಾಯಿಖಾನರೂ ಮಂಗೂಖಾನರೂ ಕ್ರಮ ಕ್ರಮವಾಗಿ ಸಾಮ್ರಾಜ್ಯವನ್ನು ವಿಸ್ತಾರಗೊಳಿಸಿದರು. ಕುಬಲಾಯಿ ಖಾನರು ಕಾರಾಕೋರಮನ್ನು ಬಿಟ್ಟು ಚೀಣದ ಪೀಕಿಂಗನ್ನು ರಾಜ ಧಾನಿಯನ್ನಾಗಿ ಮಾಡಿದರು. ಆಕಾಶವನ್ನೇ ದೇವರೆಂದು ನಂಬುವ ನಮ್ಮ ಪೂರ್ವಜರ ಷಮಾಮತವನ್ನು ತ್ಯಜಿಸಿ ಬೌದ್ಧ ಮತಾವಲಂಬಿ ಯಾದರು. ಮುಂದೆ, ನಾವು ದಕ್ಷಿಣಕ್ಕೆ ಸರಿದು, ಸಮರ್ಕಂದನ್ನು ರಾಜಧಾನಿಯನ್ನಾಗಿ ಮಾಡಿದೆವು. ಆಧುನಿಕ ಪದ್ಧತಿಗೆ ಅನುಗುಣ ವಾಗಿ ಮಹಮ್ಮದೀಯ ಮತವನ್ನು ಸ್ವೀಕರಿಸಿದೆವು. ಬಾಲ್ಯದಲ್ಲಿ ಕಾಲಿಗೆ ಬಾಣ ತಗಲಿ ಕಾಲು ಕುಂಟಾದರೂ ಸಮರ ರಂಗದಲ್ಲಿ ನಮಗೆ ಸಮಾನರಿಲ್ಲ ಎಂಬುದನ್ನು ತೋರಿಸಿಕೊಟ್ಟೆವು. ನಾವು ಅಧಿಕಾರ ವಹಿಸಿಕೊಂಡ ಅನಂತರದ ಈ ಕೆಲ ವರ್ಷಗಳಲ್ಲಿ ನಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದೆವು, ಬಲಪಡಿಸಿದೆವು....ಇಷ್ಟಾದರೂ ಒಂದು ಕೊರತೆ ನಮ್ಮನ್ನು ಕಾಡುತಿದೆ.

ಪೀರ್ ಮಹಮ್ಮದ್, ಖಿಜರ್‌ಖಾನ್—(ಜೊತೆಯಲ್ಲಿ) ಅಪ್ಪಣೆಯಾಗಬೇಕು, ಜಹಾಪನ.

ತೈಮೂರ—ಹಂ. ಸಮ್ರಾಟ ಚೆಂಗೀಸ್‌ಖಾನರದೊಂದು ಕನಸು ಈವರೆಗೂ ಕನಸಾಗಿಯೇ ಉಳಿದಿದೆ. ಹಿಂದೂಸ್ಥಾನ— A

ಪೀರ್ ಮಹಮ್ಮದ್, ಖಿಜರ್‌ಖಾನ್—(ಜೊತೆಯಲ್ಲಿ) ಹಿಂದೂಸ್ಥಾನ?

ತೈಮೂರ—ಆ ದೇಶ ನಮ್ಮ ವಶವಾದಾಗಲೇ ಬಡಾಖಾನರ ಕನಸು ನನಸಾಗು ತ್ತದೆ. (ಸೇನಾನಿಗಳು ಪರಸ್ಪರ ಮುಖ ನೋಡುವರು.) ಏನು? ಒಬ್ಬರ

ಮುಖ ಒಬ್ಬರು ನೋಡುತಿದೀರಲ್ಲ ? ಇದು ಕಷ್ಟ ಸಾಧ್ಯ—ಎಂದೆ ?

ಪೀರ್ ಮುಹಮ್ಮದ್—ಹಾಗಲ್ಲ ಮಹಾಪ್ರಭು.

ಖಿಜರ್ ಖಾನ್—ಜಗದೇಕಮಲ್ಲನಾದ ಮಹಾ ಸಮ್ರಾಟನಿಗೆ ಈ ಲೋಕದಲ್ಲಿ ಯಾವುದು ತಾನೇ ಅಸಾಧ್ಯ ?

ತೈಮೂರ—ಹಿಂದೂಸ್ಥಾನ ಅಂತಃಕಲಹದಿಂದ ದುರ್ಬಲವಾಗಿದೆ; ಹಲವು ರಾಜರ ಕೆಳಗೆ ಹರಿಹಂಚಿ ಹೋಗಿದೆ.

ಪೀರ್ ಮಹಮ್ಮದ್—(ಅಳುಕುತ್ತ, ಇಳಿದನಿಯಲ್ಲಿ ಶಂಕೆ ವ್ಯಕ್ತಪಡಿಸುತ್ತ) ದಿಲ್ಲಿಯ ಸುಲ್ತಾನರು ಮುಸಲ್ಮಾನರು.

ತೈಮೂರ—ಆದರೇನಾಯಿತು ? ಹಿಂದೂಗಳೆಂದು ಮುಸಲ್ಮಾನರೆಂದು ಭೇದ ಭಾವ ಮಾಡೋಣವೆ? ನಮ್ಮ ಖಡ್ಗದ ಮುಂದೆ ಎಲ್ಲ ತಲೆಗಳೂ ಸಮಾನ.

ಪೀರ್ ಮುಹಮ್ಮದ್, ಖಿಜರ್ ಖಾನ್—ನಿಜ, ನಿಜ.

ತೈಮೂರ—(ಎದ್ದು ನಿಲ್ಲುವನು. ಸೇನಾನಿಗಳೂ ಎದ್ದು ನಿಲ್ಲುವರು) ಅಂದಮೇಲೆ ನಾವಿನ್ನು ಸಿದ್ಧರಾಗಬೇಕು. (ಮೌನವಾಗಿ ಕುಂಟು ನಡಿಗೆಯ ಸಪ್ಪಳದೊಡನೆ ಅತ್ತಲಿಂದ ಇತ್ತ ಇತ್ತಲಿಂದ ಅತ್ತ ಒಮ್ಮೆ ಚಲನೆ. ಬಳಿಕ ನಡಿಗೆಯನ್ನು ತೀವ್ರಗೊಳಿಸಿ) ಒಂದು ಸಾವಿರ ವೇಗ ನಡಿಗೆಯ ಒಂಟೆ ಸವಾರರನ್ನೂ ಒಂದು ಸಾವಿರ ಶೀಘ್ರಚಲನೆಯ ಕಾಲಾಳುಗಳನ್ನೂ ಹಿಂದೂಸ್ಥಾನಕ್ಕೆ ಈ ದಿನವೇ ಕಳುಹಿಸಿಕೊಡಿ. ಈ ಬೇಹುಗಾರರು ಹಿಂದೂಸ್ಥಾನದ ವಿವಿಧ ರಾಜ್ಯಗಳಲ್ಲಿ ಸುತ್ತಾಡಲಿ. ಅಲ್ಲಿನ ಅರಸರ ಬಲಾಬಲಗಳನ್ನು ಅರಿತುಕೊಳ್ಳಲಿ. ಅವರ ಅಂತಃಕಲಹದ ಸ್ವರೂಪವನ್ನು ತಿಳಿಯಲಿ. ಹಿಂದೂಸ್ಥಾನದ ಆಂತರಿಕ ಪರಿಸ್ಥಿತಿಯ ಸೂಕ್ಷ್ಮ ವಿವರಗಳೊಂದಿಗೆ ವಾಪಸಾಗಲಿ.

ಪೀರ್ ಮುಹಮ್ಮದ್, ಖಿಜರ್ ಖಾನ್—(ಜೊತೆಯಲ್ಲಿ) ಅಪ್ಪಣೆ, ಬಾದಶಹ.

ತೈಮೂರ—ಅಷ್ಟರೊಳಗೆ ನಮ್ಮ ಪಡೆಗಳು, ಎಂದೂ ಯಾರೂ ಈವರೆಗೆ ಕಂಡಿರದ ಮಹಾನ್ ದಂಡಯಾತ್ರೆಗೆ ಸಿದ್ಧವಾಗಲಿ !

ಪೀರ್ ಮುಹಮ್ಮದ್, ಖಿಜರ್ ಖಾನ್—(ಜೊತೆಯಲ್ಲಿ) ಅಪ್ಪಣೆ, ಜಹಾಪನ.

ತೈಮೂರ—(ಧ್ವನಿ ಬದಲಿಸಿ) ಅಂದಹಾಗೆ, ಇನ್ನೊಂದು ವಿಷಯ. ನಮ್ಮ

ಕೀರ್ತಿಗೆ ಸ್ಮಾರಕವಾಗಿ ಜಗತ್ತಿನಲ್ಲೇ ಶ್ರೇಷ್ಠತಮವಾದ ಮಸೀದಿಯನ್ನೂ ಕಮಾನು ಕಂಬಗಳನ್ನೂ ಕಟ್ಟಿಸಬೇಕು ಎಂದು ಸಮ್ರಾಜ್ಞಿ ಅಪೇಕ್ಷೆ ಪಟ್ಟಿದಾರೆ. ಯೋಗ್ಯ ಶಿಲ್ಪಿಗಾಗಿ ಜಗತ್ತಿನ ನಾಲ್ಕು ಮೂಲೆಗಳಿಗೆ ನಿರೂಪಗಳು ಹೋಗಲಿ. ಹಿಂದೂಸ್ಥಾನದಿಂದ ಬೇಹುಗಾರರು ಮರಳುವ ವೇಳೆಗೆ ಶಿಲ್ಪಿಯೂ ಇಲ್ಲಿರಬೇಕು. ತಿಳಿಯಿತೆ?

ಪೀರ್ ಮುಹಮ್ಮದ್, ಖಿಜರ್‌ಖಾನ್—ತಿಳಿಯಿತು, ಬಾದಶಹ.

ತೈಮೂರ—ಸರಿ! ಕಾರ್ಯೋನ್ಮುಖರಾಗಿ!

(ಸೇನಾನಿಗಳು ವಂದಿಸುವರು. 'ಹ್ಞ' 'ಹ್ಞ' ಎನ್ನುತ್ತ ತೈಮೂರ ವಂದನೆಗಳನ್ನು ಸ್ವೀಕರಿಸುವನು. ಸೇನಾನಿಗಳು ನಿರ್ಗಮಿಸಿದೊಡನೆ ತೈಮೂರ, ದೃಶ್ಯದ ಆರಂಭದಲ್ಲಿ ಇದ್ದಂತೆಯೇ ಪ್ರೇಕ್ಷಕರಿಗೆ ಬೆನ್ನು ಮಾಡಿ, ಶಸ್ತ್ರಸಂಗ್ರಹಗಳ ಮಧ್ಯದಲ್ಲಿದ್ದ ಚೆಂಗೀಸ್‌ಖಾನನ ಖಡ್ಗವನ್ನೆತ್ತಿಕೊಂಡು ಅದರ ಮೊನೆಯನ್ನು ಆಕಾಶದ ಎತ್ತರಕ್ಕೆ ಹಿಡಿದು ನಿಲ್ಲುವನು.)

ದೃಶ್ಯ ೩

[ಅಂತಃಪುರಕ್ಕೆ ಹೊಂದಿಕೊಂಡು ಸಮ್ರಾಟ ತೈಮೂರನ ಖಾಸಗಿ ಕೊಠಡಿ. ತೈಮೂರ ಸಮ್ರಾಜ್ಞಿಯೊಡನೆ ಎದುರುಬದುರು ಪೀಠಗಳ ಮೇಲೆ ಕುಳಿತು ಚದುರಂಗದಾಟದಲ್ಲಿ ನಿರತನಾಗಿದ್ದಾನೆ. ರಾಜಕುಮಾರ ಷಾ ರುಖ್ ವಿನಮ್ರನಾಗಿ ತಾಯಿಗೆ ಸಮೀಪವಾಗಿ ನಿಂತಿದ್ದಾನೆ.

ಮೌನದ ಆಟ. ಇಕ್ಕಟ್ಟಿನಲ್ಲಿ ದೊರೆಯನ್ನು ಸಿಲುಕಿಸಿದಾಗಲೆಲ್ಲ ಹಾನಿಮಳ ಮಾದಕ ನಗೆ. ಪ್ರತಿಯಾಗಿ ಕಾಯಿ ಸರಿಸಿದಾಗ ತೈಮೂರನ ಹುಂಕಾರ, ಸಂತೃಪ್ತಿಯ ಉದ್ಗಾರ.

ಒಮ್ಮೆ ಹಾನಿಮ್ ನಕ್ಕಾಗ ರಾಜಕುಮಾರನೂ ಆಕೆಯ ಜೊತೆ ನಗುವನು.]

ತೈಮೂರ—(ದೃಷ್ಟಿಯನ್ನು ಮಾತ್ರ ಆಟದಮೇಲೆಯೇ ನೆಟ್ಟು) ರುಖ್, ಅಮ್ಮಾಜಾನ್ ಜೊತೆ ಸೇರಿಕೊಂಡು ಪರಿಹಾಸ್ಯ ಮಾಡುತಿದೀಯೇನೊ?

ಷಾ ರುಖ್—ಇಲ್ಲ, ಅಬ್ಬಾಜಾನ್.

ಹಾನಿಮ್—ಬಾದಶಹರ ಆಟದ ವೈಖರಿ ನೋಡಿ ರಾಜಕುಮಾರ ಹೆಮ್ಮೆ ಪಡುತಿದಾನೆ.

ತೈಮೂರ—ಓಹೋ!....ತಗೊಳ್ಳಿ! ಆಡಿ ನೋಡೋಣವಂತೆ! ಏನು ಮಾಡುತೀರಿ ಈಗ?

ಷಾ ರುಖ್—(ತಾಯಿಗೆ ನೆರವಾಗುವವನಂತೆ) ಅಮ್ಮ್ಮಾಜಾನ್, ಈ ಕಡೆಗೆ—ಈಚೆಗೆ.

ತೈಮೂರ—(ಧ್ವನಿ ಏರಿಸಿ) ಷಾ ರುಖ್, ನಮ್ಮ ಹತ್ತಿರ ಬಂದು ನಿಲ್ಲು!

(ಷಾ ರುಖ್ ಸ್ವಲ್ಪ ಗಾಬರಿಯಾಗಿ ತಾಯಿಯಿಂದ ದೂರ ಸರಿದು ತಂದೆಯ ಬಳಿ ಬಂದು ನಿಲ್ಲುವನು. ತೈಮೂರ, ಸಮ್ರಾಜ್ಞಿಯ ಬೆರಳುಗಳ ಚಲನೆಯ ಕಡೆಗೇ ನೋಟ ಬೀರಿ) ರುಖ್, ನೀನು ಆಡಬೇಕಾದ್ದು ಚದುರಂಗವಲ್ಲ, ಯುದ್ಧರಂಗದ ಆಟ.

ಷಾ ರುಖ್—ಹೌದು, ಅಬ್ಬಾಜಾನ್.

ತೈಮೂರ—(ತಲೆ ಎತ್ತದೆಯೇ) ದಿಲ್ಲಿಯ ಸುಲ್ತಾನನ ಪಡೆಗಳು ಕೋಟೆಯ ರಕ್ಷಣೆಗೆ ಹೊರಗೆ ಅಣಿ ನೆರೆದು ನಿಂತಿವೆ. ಮೊದಲ ಸಾಲಿನಲ್ಲಿಯೇ ಐದು ನೂರು ಆನೆಗಳು. ನಮ್ಮ ಸೈನ್ಯದ ಸಂಖ್ಯೆ ವೈರಿಬಲದ ಹತ್ತರಲ್ಲಿ ಒಂದಂಶ ಮಾತ್ರ. ಕುದುರೆ ಒಂಟೆಗಳಷ್ಟೇ ನಮ್ಮಲ್ಲಿವೆ. ವೈರಿದಳವನ್ನು ಭೇದಿಸುವುದು ಕಠಿನ. ಆಗ ಏನು ಮಾಡಬೇಕು? ಹೇಳು, ರುಖ್....

ಷಾಹಿಮ್—(ಕಾಯಿ ಸರಿಸಿ) ನಿಮ್ಮ ಕುದುರೆಯ ರಕ್ಷಣೆ ಮಾಡಿಕೊಳ್ಳಿ. ಅಂಥ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಸಮರಭೂಮಿಯ ಅನುಭವವಿದೆಯೆ ರಾಜಕುಮಾರನಿಗೆ?

ತೈಮೂರ—ನನ್ನ ಕುದುರೆ, ನನ್ನ ಕುದುರೆ! ಸಮ್ರಾಜ್ಞಿಯವರೆ, ನಿಮಗೇನಾಗುತಿದೆ ನೋಡಿಕೊಳ್ಳಿ. ಆಡಿ ಆಟ!....ಅನುಭವ ಬೇಕೆ ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ? ಹುಂ. ಹೇಳು ರುಖ್....

ಷಾ ರುಖ್—(ಅಳುಕುತ್ತ) ವಿಜಯ ಅನಿಶ್ಚಿತವಾದಾಗ ಬೇರೆ ನೆಲೆಗೆ ಸರಿಯಬೇಕು ಎಂದು ತಾತ ಹೇಳಿದಾರೆ.

ತೈಮೂರ—(ಈಗಲೂ ದೃಷ್ಟಿ ಆಟದಮೇಲೆಯೇ) ತಾತ-ತಾತ! ಹಗಲು ಸುಮ್ಮನಿರಬೇಕು ರುಖ್. ರಾತ್ರಿ ಬೆಂಕಿಯುಂಡೆ ಎಸೆದು ಆನೆಗಳು ಹೆದರಿ ಓಡಿಹೋಗುವಂತೆ ಮಾಡಬೇಕು. ಅವರ ಶಿಬಿರ ಉರಿಯುವಾಗಲೇ ಹೋರಾಟ ನಡೆಸಿ ವೈರಿಯನ್ನು ನಿನಾಶನ ಮಾಡಬೇಕು.

ಷಾ ರುಖ್— ಹೌದು, ಅಬ್ಬಾಜಾನ್. ತಾತ ಅದನ್ನೂ ಹೇಳಿದ್ದರು.

ತೈಮೂರ—ಅವರು ಹೇಳಿದ್ದರೂ ನೀನು ಮರೆತೆ.

ಹಾನಿಮ್— (ಕಾಯಿ ಸರಿಸಿ) ಮಂಗೋಲ ಸಮ್ರಾಟರ ಕುದುರೆಸವಾರ ಈಗೇನು ಮಾಡುತಾನೆ? ಹಾದಿ ಮರೆತುಹೋದವರ ಹಾಗೆ ನಿಂತಿದಾನಲ್ಲ!

ತೈಮೂರ—(ಆಟದ ಮೇಲೆಯೇ ದೃಷ್ಟಿ) ಇನ್ನೊಂದು ಸನ್ನಿವೇಶ. ನಮ್ಮ ದೂತರನ್ನು ವೈರಿ ಸೆರೆಹಿಡಿದು ತನ್ನ ದುರ್ಗದಲ್ಲಿರಿಸಿದಾನೆ. ನಮ್ಮವರೇ ಬೇರೆಯೂ ಐದು ಜನ ಛದ್ಮವೇಷಧಾರಿಗಳಾಗಿ ಅಲ್ಲಿದಾರೆ. ವೈರಿಯ ಸೈನ್ಯ ದುರ್ಗದ ಹೊರಗಿದೆ, ಒಳಗೆ ಸಾಕಷ್ಟು ರಕ್ಷಣೆ ಇಲ್ಲ. ಆಗ ನಮ್ಮವರು ಮಾಡಬೇಕಾದುದೇನು?

ಹಾನಿಮ್— ಏನು ಮಾಡುತಾನೊ ನಿಮ್ಮ ಕುದುರೆಸವಾರ?

ಷಾ ರುಖ್—(ಅಳುಕುತ್ತ) ನಮ್ಮವರು ಧೈರ್ಯದಿಂದಿರಬೇಕು. ನಮ್ಮ ದಂಡು ಬರುತದೆ. ವೈರಿಯೊಡನೆ ಹೋರಾಡಿ, ಸೋಲಿಸಿ, ದುರ್ಗವನ್ನು ಸ್ವಾಧೀನಪಡಿಸಿಕೊಂಡ ಮೇಲೆ ನಮ್ಮ ದೂತರೂ ಭಟರೂ ಸ್ವತಂತ್ರರಾಗುತಾರೆ.

ತೈಮೂರ—(ವ್ಯಂಗ್ಯವಾಗಿ) ಅಲ್ಲವೆ, ಮತ್ತೆ! ಎಷ್ಟು ಸುಲಭ! ರುಖ್, ಯೋಚಿಸು! ದುರ್ಗದೊಳಗಿರುವ ನಮ್ಮವರು ರಾತ್ರಿಹೊತ್ತು ದಿಡ್ಡಿ ಬಾಗಿಲನ್ನು ತೆರೆದು ನಮ್ಮವರನ್ನು ಒಳಕ್ಕೆ ಬಿಡಬಹುದಲ್ಲ! ನಾವು ಒಳಗೆ ನಿಂತು ಹೊರಗಿರುವ ವೈರಿಯನ್ನು ಸುಲಭವಾಗಿ ಹಣ್ಣು ಮಾಡಬಹುದಲ್ಲ!

ಷಾ ರುಖ್—ಹೌದು, ಅಬ್ಬಾಜಾನ್.

ತೈಮೂರ—(ಕಾಯಿ ಸರಿಸಿ) ಬೇಗಂ, ನೀವು ಸೋತಿರಿ!

ಹಾನಿಮ್—(ವಿಜಯ) ಆಟದಲ್ಲೂ ನಿಮಗೇ, ಹೋರಾಟದಲ್ಲೂ ನಿಮಗೇ ಬಾದಶಹ!

ತೈಮೂರ— ಹಹ್ಹ!

ಅಮೀನಾ—(ಒಳಕ್ಕೆ ಪ್ರವೇಶಿಸಿ ವಂದಿಸಿ) ದಂಡನಾಯಕರು ತಮ್ಮ ಅನುಕೂಲ ಕೇಳಿಕೊಂಡು ಬಾ ಅಂದರು. ಹಿಂದೂಸ್ಥಾನದಿಂದ—

ತೈಮೂರ— ಬೇಹುಗಾರರು ಮರಳಿಬಂದರೊ?

ಅಮೀನಾ— ಹೌದು, ಬಾದಶಹ. ಖಾನಂದರು ಒಪ್ಪುವುದಾದರೆ—

ತೈಮೂರ—ಅವರೂ ಬರಲಿ.

(ಅಮೀನಾ ತೆರಳುವಳು.)

ಹಾನಿಮ್— ರಾಜಕಾರ್ಯ-ನನಗೆ ಅಪ್ಪಣೆಯಾದರೆ ಒಳಗಿರುತೇನೆ.

ತೈಮೂರ— ಹಹ್ಹ !.... ಈ ನಯನಾಜೂಕಿನ ಮಾತನ್ನಾಡುತೀರಲ್ಲ ?—ಇದೇ ರಾಜಕಾರಣ! ಮುಖ್ಯ, ಸಮರಸಂಭ್ರಮ ನಿಮಗೆ ಅಷ್ಟೇನೂ ಇಷ್ಟವಲ್ಲ, ಒಳಗಿರಿ, ಅದಕ್ಕೇನಂತೆ? (ಹಾನಿಮ್ ಒಳಕ್ಕೆ ನಿಷ್ಕ್ರಮಿಸಲು) ರುಖ್, ನೀನಿಲ್ಲೇ ಇರು. ಬೇಹುಗಾರರು ಹೇಳುವುದನ್ನು ಅರ್ಥ ಮಾಡಿಕೋ ; ಹೇಳದೆ ಇರುವುದನ್ನು ಊಹಿಸಿಕೋ.

ಷಾ ರುಖ್— ಹೂಂ ಅಬ್ಬಾಜಾನ್.

(ಸೇನಾನಿಗಳೂ ಇಬ್ಬರು ಬೇಹುಗಾರರೂ ಪ್ರವೇಶಿಸಿ ನಮಿಸುವರು. ಸೇನಾನಿಗಳು ತೈಮೂರನ ಎಡಭಾಗಕ್ಕೆ ಸಾಗುವರು.)

ತೈಮೂರ—ಅಲೆದು ಅಲೆದು ನಮ್ಮ ಬೇಹುಗಾರರ ಬಣ್ಣ ಕಪ್ಪಾಗಿದೆ, ಅಲ್ಲವೆ ಪೀರ್ ಮಹಮ್ಮದ್? (ಪೀರ್ ಮಹಮ್ಮದ್ ಸಣ್ಣಗೆ ನಗಲು, ಬೇಹುಗಾರರೂ ತುಸು ನಕ್ಕು, ಗೌರವಪೂರ್ವಕವಾಗಿ ತಲೆಬಾಗಿಸಿ ನಿಲ್ಲುವರು. ತೈಮೂರ ಎದ್ದು, ಸಪ್ಪಳದ ಕುಂಟು ನಡಿಗೆಯಿಂದ ಎಡ ಮೂಲೆಗೆ ಸೇನಾನಿಗಳಿದ್ದಲ್ಲಿಗೆ ಹೋಗಿ, ಮತ್ತೆ ಬಲಕ್ಕೆ ನಡೆದು ಬಂದು, ಬೇಹುಗಾರರ ಕಣ್ಣುಗಳನ್ನೇ ದಿಟ್ಟಿಸಿ) ಏನನ್ನುತದೆ ಹಿಂದೂಸ್ಥಾನ ?

೧ ನೆಯ ಬೇಹುಗಾರ— ನಮ್ಮ ಆಗಮನದ ದಾರಿ ನೋಡುತಿದೆ, ಬಾದಶಹ.

ತೈಮೂರ— ಪಾಪ! ಬಹಳ ಕಾಯಿಸಿದೇವೆ!

(ಅಲ್ಲಿಂದ ಸರಿದು ತೈಮೂರ, ರಂಗಮಧ್ಯಕ್ಕೆ ಬಂದು ನಿಲ್ಲುವನು.)

(ಸೇನಾನಿಗಳು ಮುಗುಳು ನಗುವರು.)

೨ ನೆಯ ಬೇಹುಗಾರ—ಹಿಂದೂಸ್ಥಾನ ಅನೇಕ ರಾಜ್ಯಗಳಾಗಿ ಒಡೆದುಹೋಗಿದೆ. ಉತ್ತರದಲ್ಲಿ ಕಾಶ್ಮೀರ, ರಾಜಸ್ಥಾನ ಪೂರ್ವದಲ್ಲಿ ಒಡಿಸಾ, ದಕ್ಷಿಣದಲ್ಲಿ ದೇವಗಿರಿ, ಹೊಯ್ಸಳ, ಪಾಂಡ್ಯ— ಇವೆಲ್ಲಾ ಈಗ ಸ್ವತಂತ್ರ ರಾಜ್ಯಗಳಾಗಿವೆ. ದಿಲ್ಲಿಯ ಸುಲ್ತಾನರ ಪ್ರಭುತ್ವ ತೀರಾ ಸೀಮಿತ

ಪ್ರದೇಶದಲ್ಲಷ್ಟೇ ನಡೆಯುತ್ತಿದೆ. ಈ ಅರಸರಲ್ಲಿ ಐಕ್ಯವಿಲ್ಲ. ಒಬ್ಬರನ್ನು ಕಂಡರೆ ಒಬ್ಬರಿಗಾಗುವುದಿಲ್ಲ.

ತೈಮೂರ—ಭೇಷಕ್ ! ನಾವು ಬಯಸಿದ್ದು ಇಂಥದೇ ಹಿಂದೂಸ್ಥಾನವನ್ನು. ಒಗ್ಗಟ್ಟಿಲ್ಲದ ಪರಸ್ಪರ ಹೋರಾಡುವ ಅರಸರನ್ನು ಕಂಡರೆ ನಮಗೆ ಹಿಗ್ಗು.

೧ ನೆಯ ಬೇಹುಗಾರ—ಅಲ್ಲಿಂದ ಒಂದು ಹಾಡನ್ನು ಕಲಿತುಕೊಂಡು ಬಂದಿದೇವೆ, ಜಹಾಪನ.

ತೈಮೂರ— ಅಂದು ತೋರಿಸು.

೧ ನೆಯ ಬೇಹುಗಾರ—

"ಅಪಾರ ಐಸಿರಿಗಿಂತ ಜನರ ಕಲ್ಯಾಣ ಲೇಸು
ಮುರಿದ ಮನಗಳಿಗಿಂತ ಬರಿದು ಭಂಡಾರ ಲೇಸು...."

— ಇದು ಹಿಂದೂಸ್ಥಾನದ ಅರಸ ಫಿರೋಜ್ ಬರೆದ ಕವಿತೆ.

ತೈಮೂರ— ಫಿರೋಜ್ ಷಾ ಬರೆದ ಕವಿತೆ ! ಹಹ್ಹ ! ಇನ್ನೊಮ್ಮೆ ಅನ್ನು.

೧ ನೆಯ ಬೇಹುಗಾರ—

"ಅಪಾರ ಐಸಿರಿಗಿಂತ ಜನರ ಕಲ್ಯಾಣ ಲೇಸು
ಮುರಿದ ಮನಗಳಿಗಿಂತ ಬರಿದು ಭಂಡಾರ ಲೇಸು...."

(ತೈಮೂರ ನಗುವನು; ಸೇನಾನಿಗಳೂ ನಗುವರು; ಬೇಹುಗಾರರು ಹಲ್ಲು ಕಿರಿಯುವರು.)

ತೈಮೂರ—ಪೀರ್, ಖಿಜರ್! ಕೇಳಿದಿರಾ, ಹಿಂದೂಸ್ಥಾನದ ಗದ್ದುಗೆಯನ್ನೇರಿದ ದುರ್ಬಲ ದೊರೆಯ ತತ್ವಜ್ಞಾನ ? ಐಶ್ವರ್ಯ ಬೇಡವಂತೆ, ಬರಿದಾದ ಭಂಡಾರವೇ ಬೇಕಂತೆ. ಹಹ್ಹ !

೨ ನೆಯ ಬೇಹುಗಾರ— ಈ ಫಿರೋಜ್ ಷಾ ಮೂವತ್ತೇಳು ಸಂವತ್ಸರಗಳ ಕಾಲ ರಾಜ್ಯವಾಳಿ ಸತ್ತು ಇವತ್ತಿಗೆ ಸುಮಾರು ಹತ್ತು ವರ್ಷಗಳಾಗಿವೆ.

ತೈಮೂರ— ಇವರ ಕತ್ತಿಗಳು ಮೊಂಡಾಗಿರಬೇಕು; ಆನೆ ಕುದುರೆಗಳು ಮುದಿ ಮುದಿಯಾಗಿ ಗುಟುಕು ಜೀವ ಹಿಡಿದಿರಬೇಕು. (ರಾಜಕುಮಾರನ ಕಡೆಗೊಮ್ಮೆ ನೋಡುವನು.)

ಬೇಹುಗಾರರು—(ಜೊತೆಯಾಗಿ) ನಿಜ, ನಿಜ.

ತೈಮೂರ—(ಸೇನಾನಿಗಳ ಕಡೆ ನೋಡಿ) ಇದೀಗ ಹಿಂದೂಸ್ಥಾನ! ಒಳ್ಳೇದು!

೧ ನೆಯ ಬೇಹುಗಾರ—ಫಿರೋಜ್ ಷಾನ ತಾಯಿ ರಜಪೂತ ಸ್ತ್ರೀ—ಬೀಬಿ ನಾಯ್ಲಾ.

ತೈಮೂರ—ಆಹಾ! ರಜಪೂತ ಸ್ತ್ರೀಗೆ ಹುಟ್ಟಿದವನೋ ಈ ಮುಸಲ್ಮಾನ?

ಪೀರ್ ಮಹಮ್ಮದ್, ಖಿಜರ್‌ಖಾನ್—(ಜೊತೆಯಲ್ಲಿ) ಹಹ್ಹ! ಹಹ್ಹ!

೨ ನೆಯ ಬೇಹುಗಾರ—ಆ ದೊರೆಯ ಅನಂತರದ ಹಿಂದೂಸ್ಥಾನ ಮತ್ತಷ್ಟು ಛಿದ್ರವಾಗಿದೆ.

ತೈಮೂರ—(ಅತ್ತಿತ್ತ ನಡೆಯುತ್ತ) ನಮ್ಮ ಬಲಿಷ್ಠ ತೋಳನ್ನೊಮ್ಮೆ ಬೀಸಿ ಈ ರಾಜರು ಸುಲ್ತಾನರ ಕಿರೀಟಗಳನ್ನೆಲ್ಲ ಝಾಡಿಸಿಬಿಡುತೇವೆ. (ಮತ್ತೆ ರಂಗಮಧ್ಯದಲ್ಲಿ ನಿಂತು) ಹುಂ! ಈಗ ದಿಲ್ಲಿಯ ಗದ್ದುಗೆಯ ಮೇಲೆ ಇರುವವನು ಯಾರು?

೧ ನೆಯ ಬೇಹುಗಾರ—ಸುಲ್ತಾನ ಮಹಮ್ಮದ್ ಷಾ. ಈತ ಮಲ್ಲೂ ಇಕ್ಬಾಲ್ ಖಾನ್ ಎಂಬವನ ಕೈಗೊಂಬೆ.

ತೈಮೂರ—(ಮತ್ತೆ ನಡೆಯತೊಡಗುತ್ತ) ಕೈಗೊಂಬೆ ಮತ್ತು ಸೂತ್ರಧಾರ ಇಬ್ಬರನ್ನೂ ನಾವು ಕುಣಿಸುತೇವೆ, ಮಣಿಸುತೇವೆ.

೨ ನೆಯ ಬೇಹುಗಾರ—ಹಿಂದೂಸ್ಥಾನದ ರಾಜರು, ಸುಲ್ತಾನರು, ಯಾರ ಸೈನ್ಯಗಳೂ ಸುಸಜ್ಜಿತವಾಗಿಲ್ಲ.

ತೈಮೂರ—(ನಡೆಯುತ್ತಲೇ) ಮಂಗೋಲರ ಒಂದು ಲಕ್ಷ ಸೈನಿಕರ ಅಜೇಯ ಪಡೆಯ ಮಹಾಪೂರದಲ್ಲಿ ಅವರೆಲ್ಲರೂ ಕೊಚ್ಚಿಹೋಗುವರು.

೧ ನೆಯ ಬೇಹುಗಾರ—ಆದರೂ ಹಿಂದೂಸ್ಥಾನದಲ್ಲಿ ನಮಗೊಬ್ಬ ಬಲಾಢ್ಯ ವೈರಿಯಿದಾನೆ.

ತೈಮೂರ—(ರಂಗಮಧ್ಯದಲ್ಲಿ ನಿಂತು) ಯಾರದು?

೨ ನೆಯ ಬೇಹುಗಾರ—ಸೂರ್ಯ, ಉರಿ. ಸಹಿಸಲಾಗದ ಉಷ್ಣ.

ತೈಮೂರ—ಪೀರ್ ಮಹಮ್ಮದ್, ಖಿಜರ್‌ಖಾನ್-ನನ್ನ ಪ್ರಿಯ ಸೇನಾನಿಗಳೇ, ಇದಕ್ಕೆ ಏನನ್ನುತೀರಿ?

ಪೀರ್ ಮಹಮ್ಮದ್—ಬೇಹುಗಾರರ ವರದಿ ತಥ್ಯವಿರಬಹುದು. ಆದರೂ—

ಖಿಜರ್ ಖಾನ್—ಇದೊಂದು ಕಾರಣಕ್ಕಾಗಿ ನಮ್ಮ ವೀರ ಸೈನಿಕರು ಹಿಂಜರಿಯುವವರಲ್ಲ.

ಪೀರ್ ಮುಹಮ್ಮದ್— ಖಂಡಿತ ಹಿಂಜರಿಯುವವರಲ್ಲ.

ತೈಮೂರ— (ನಡೆಯತೊಡಗುತ್ತ) ಭೇಷಕ್ ! ಹಸುರು ಹುಲ್ಲುಗಾವಲಿನ ಕಣಿವೆ ತಪ್ಪಲುಗಳ ಮಕ್ಕಳಾದ ನಾವು, ಹಿಂದೂಸ್ಥಾನದ ಬೆಂಕಿಯಲ್ಲಿ ಬೆಂದು ಕನುರುವುದಕ್ಕೆ ಹೋಗುತಾ ಇಲ್ಲ. ಆ ದೇಶವನ್ನು ಕೈವಶ ಪಡಿಸಿ, ಲೂಟಿ ಹೊಡೆದು, ನಾಶಗೊಳಿಸಿ, ಆ ರಾಷ್ಟ್ರದ ಅಧಿಪತಿಗಳೆನಿಸಿಕೊಂಡು, ಜಗತ್ತಿನ ಏಕಮಾತ್ರ ಮಾಯಾನಗರಿಯಾದ ಸಮರ್ಕಂದಕ್ಕೆ ಮರಳುವವರು ನಾವು! (ರಂಗಮಧ್ಯದಲ್ಲಿ ನಿಲ್ಲುವನು.)

ಪೀರ್ ಮಹಮ್ಮದ್—ಈ ಘೋಷಣೆಯಿಂದ ರಾಜ್ಯದ ಪ್ರಜಾಕೋಟಿಯೂ ಯೋಧ ಗಣವೂ ಸಂತುಷ್ಟರಾಗುತಾರೆ.

ತೈಮೂರ— ಖಿಜರ್, ನಿಮ್ಮ ಅಭಿಪ್ರಾಯವೇನು ?

ಖಿಜರ್— ಸಮರ್ಕಂದದ ಕೀರ್ತಿಪತಾಕೆ ಇದರಿಂದ ಗಗನಕೇರುತದೆ, ಬಾದಶಹ.

ತೈಮೂರ— ಗಗನಕೇರುವ-ಕೀರ್ತಿ-ಪತಾಕೆ (ಏನೋ ನೆನಪಾದವನಂತೆ) ಹ್ಹ. ಕುಶಲ ಶಿಲ್ಪಿಯೊಬ್ಬನನ್ನು ಕರೆತರಬೇಕೆಂದು ಆಜ್ಞೆಯಾಗಿತ್ತಲ್ಲ?

೧ ನೆಯ ಬೇಹುಗಾರ— ಕರೆತಂದಿದ್ದೇವೆ. ಇಲ್ಲಿಯೇ ಇದಾನೆ.

ತೈಮೂರ— ಬರಲಿ ಒಳಕ್ಕೆ.(ಕುಳಿತುಕೊಳ್ಳುವನು.)

೧ ನೆಯ ಬೇಹುಗಾರ—(ಎರಡು ಹೆಜ್ಜೆ ನೇಪಥ್ಯದತ್ತ ಸರಿದು, ಅತ್ತ ನೋಡಿ)ಬಾರಪ್ಪ. (ಸುಂದರನಾದ ಯುವಕ ಶಿಲ್ಪಿಯ ಪ್ರವೇಶ. ಕ್ಷಣಿಕ ಸಂಕೋಚದ ಬಳಿಕ, ತೈಮೂರನತ್ತ ನೋಡಿ ತಲೆಬಾಗಿ ಯಾಂತ್ರಿಕವಾಗಿ ಒಮ್ಮೆ ನಮಿಸುವನು.)

ಶಿಲ್ಪಿ— ಸಮ್ರಾಟರಿಗೆ ಜಯವಾಗಲಿ !

ತೈಮೂರ—ಯಾವ ಕೆಲಸಕ್ಕೆ ಬಂದಿದೀಯೋ ಅದರಲ್ಲಿ ನಿನಗೆ ಜಯ ಸಿಗಬೇಕು ಕಣಯ್ಯ. ಏನು ನಿನ್ನ ಹೆಸರು ?

ಶಿಲ್ಪಿ— ಶಿಲ್ಪಿ ದಾವೂದ್.

ತೈಮೂರ— ಶಿಲ್ಪಿ ದಾವೂದ್....ಸಮ್ರಾಟ ತೈಮೂರ—ಅನ್ನುವ ಹಾಗೆ. ಹುಂ ! (ಸೇನಾನಿಗಳು ಮಂದಸ್ಮಿತರು.)

೨ ನೇ ಬೇಹುಗಾರ—ಇವನು ಅರಬ. ಅಫಘಾನ ರಾಜ್ಯದಲ್ಲಿ ಸೌಧ ನಿರ್ಮಾಣ ಕಾರ್ಯದಲ್ಲಿ ನಿರತನಾಗಿದ್ದ. ಬಹಳ ಹೆಸರುವಾಸಿಯಾದವನು.

ತೈಮೂರ—ಶಿಲ್ಪಿ ದಾವೂದ್, ಯಾವ ಉದ್ದೇಶಕ್ಕಾಗಿ ನಿನ್ನನ್ನು ಕರೆಸಲಾಗಿದೆ ಗೊತ್ತೊ?

ಶಿಲ್ಪಿ ದಾವೂದ್—ತಮ್ಮ ದೂತರು ತಿಳಿಸಿದಾರೆ.

ತೈಮೂರ—(ಸಣ್ಣನೆ ನಗುತ್ತ ಎದ್ದು, ಅತ್ತಿತ್ತ ನಡೆದು) ನಾವೂ ಒಬ್ಬ ಶಿಲ್ಪಿ, ಬಲ್ಲೆಯೊ?

ಶಿಲ್ಪಿ ದಾವೂದ್—ನಾನು ಈ ಭೂಭಾಗಕ್ಕೆ ಹೊಸಬ.

ತೈಮೂರ—ಹೊಸಬ? ಹಹ್ಹ! ಬಾಗ್ದಾದಿನಲ್ಲಿ, ದಮಾಸ್ಕಸಿನಲ್ಲಿ, ಟರ್ಕಮಾನಿಯಾದಲ್ಲಿ ಆಕಾಶದೆತ್ತರಕ್ಕೆ ಮನುಷ್ಯ ರುಂಡಗಳ ಪಿರಮಿಡ್ಡುಗಳು ರಚಿತವಾದದ್ದನ್ನು ಕೇಳದೀಯೊ?

ಶಿಲ್ಪಿ ದಾವೂದ್—ನಾನು ಸಮರಾಸಕ್ತನಲ್ಲ. ಆದರೂ ಸಮ್ರಾಟರ ಪಡೆಗಳ ಶೌರ್ಯ ಸಾಹಸಗಳ ಬಗೆಗೆ ತಿಳಿದಿರುವೆ.

ತೈಮೂರ—(ಷಾ ರುಖ್ ಕಡೆಗೊಮ್ಮೆ ನೋಡಿ, ಬಳಿಕ ಶಿಲ್ಪಿಯ ಎದುರು ನಿಂತು) ಒಂದು ಕಡೆ ವೈರಿ ಬಣದ ಎರಡು ಸಾವಿರ ಜನರನ್ನು ನಿಲ್ಲಿಸಿ ಸುತ್ತಲೂ ಇಟ್ಟಂಗಿ ಸುಣ್ಣಗಳಿಂದ ಗೋಡೆ ಏರಿಸಿ ನಾವು ಗೋರಿ ರಚಿಸಿದ್ದನ್ನು ಕೇಳಿ ಬಲ್ಲೆಯೊ?

ಶಿಲ್ಪಿ ದಾವೂದ್—(ನಿರ್ವಿಕಾರವಾಗಿ) ಇಲ್ಲ.

ತೈಮೂರ—ಹ್ಹ. ಹಾಗಾದರೆ ನಿನಗಿದು ತಿಳಿದಿರುವುದು ಮೇಲು. ಈ ಬಗೆಯ ಅನೇಕ ಭವ್ಯ ಸೌಧಗಳನ್ನು ನಿರ್ಮಿಸಿದ ಶಿಲ್ಪಿ ನಾವೇ! ಹಹ್ಹ! ಹಹ್ಹ! (ಅತ್ತಿತ್ತ ನಡೆಯುವನು. ನೆರೆದವರು ಪ್ರಶಂಸಾ ಸೂಚಕವಾಗಿ ನಸು ನಗುವರು. ಗೋಣು ಆಡಿಸುವರು.)

ತೈಮೂರ—ಒಳ್ಳೇದು. ನಾವು ಹಿಂದೂಸ್ಥಾನದ ಮೇಲೆ ದಂಡಯಾತ್ರೆ ಹೊರಡಲಿದ್ದೇವೆ. ಹಿಂತಿರುಗಿ ನಾವು ಬರುವುದರೊಳಗಾಗಿ ಸ್ಮಾರಕ ಪ್ರಾರ್ಥನಾ ಮಂದಿರವೂ ಕಮಾನು ಕಂಬಗಳೂ ನಿರ್ಮಾಣವಾಗಲಿ. ನಿನ್ನ ಕೆಲಸದ ಉಸ್ತುವಾರಿಯನ್ನು ಸ್ವತಃ ಸಮ್ರಾಜ್ಞಿಯವರೇ ವಹಿಸುತಾರೆ.

ಶಿಲ್ಪಿ ದಾವೂದ್—ಅಪ್ಪಣೆ....

(ತೈಮೂರ ಕುಳಿತುಕೊಳ್ಳುತ್ತ ಎಲ್ಲರೂ ಹೋಗಬಹುದು ಎನ್ನುವಂತೆ ಅಂಗೈಯಿಂದಲೂ ದೃಷ್ಟಿಯಿಂದಲೂ ಸನ್ನೆ ಮಾಡುವನು. ಮೊದಲು ಬೇಹುಗಾರರು ಬಳಿಕ ಸೇನಾನಿಗಳು ವಂದಿಸಿ ನೇಪಥ್ಯದತ್ತ ಸಾಗುವರು. ಶಿಲ್ಪಿಯೂ ವಂದಿಸ ತೊಡಗಲು ಕೈಸನ್ನೆಯಿಂದ ತೈಮೂರ ತಡೆಯುವನು.)

ತೈಮೂರ— ರುಖ್ !

ಷಾ ರುಖ್—ಅಬ್ಬಾಜಾನ್....

ತೈಮೂರ— ನಿಮ್ಮ ತಾಯಿಯನ್ನು ಕರೆ. (ರುಖ್ ಒಳಕ್ಕೆ ನಿರ್ಗಮನ)

ತೈಮೂರ—(ಶಿಲ್ಪಿಯತ್ತ ಕತ್ತು ಹೊರಳಿಸಿ) ಮಂಗೋಲ ಸಾಮ್ರಾಜ್ಯದ ಒಡತಿಯ ಸಮ್ಮತಿ ಪಡೆದು ಹೋಗು.

ಹಾನಿಮ್—(ಒಳದ್ವಾರದ ಪರದೆಯ ಹಿಂದೆ ಕಾಣಿಸಿಕೊಳ್ಳುತ್ತ) ಜಹಾಪನ, ಕರೆದಿರಂತೆ.

(ಪರದೆಯ ಹಿಂದಿನ ಅಸ್ಪಷ್ಟ ಆಕೃತಿಯಲ್ಲಿ ಸೌಂದರ್ಯರಾಶಿಯನ್ನು ಕಂಡಂತಾಗಿ ದಾವೂದ್ ತುಟಿಗಳನ್ನು ಬಿರಿದು ಬೆರಗಾಗಿ ನಿಲ್ಲುವನು.)

ತೈಮೂರ— ಹ್ದಾ ಬೇಗಂ ಸಾಹೀಬಾ, ನೀವು ಬಯಸಿದ ಶಿಲ್ಪಿ ಬಂದಿದಾನೆ.

ಹಾನಿಮ್—ಸಂತೋಷ.

ತೈಮೂರ—(ತುಸು ಏರಿದ ಧ್ವನಿಯಲ್ಲಿ) ಶಿಷ್ಟಾಚಾರವನ್ನು ಕಲಿ, ಶಿಲ್ಪಿ ದಾವೂದ್ ! ಸಮ್ರಾಜ್ಞಿಗೆ ವಂದಿಸು !

(ಬೆಚ್ಚುತ್ತ ದಾವೂದ್ ನಮಿಸಲೆಂದು ತಲೆ ಬಾಗುತ್ತಿರುವಂತೆ, ತೆರೆ.)

ದೃಶ್ಯ ೪

[ಅಂತಃಪುರ, ಒಂದನೆಯ ದೃಶ್ಯದಲ್ಲಿ ಇದ್ದಂತೆಯೇ. ತೆರೆ ಸರಿದಾಗ ಅಮೀನಾ ಜಾಲಂದ್ರದ ಬಳಿ ನಿಂತು ಹೊರಕ್ಕೆ ನೋಡುತ್ತಿದ್ದಾಳೆ. ಅಗಲ ಪೀಠದ ಮೇಲೆ ಮ್ಲಾನವದನೆಯಾಗಿ ಹಾನಿಮ್ ಕುಳಿತಿದ್ದಾಳೆ.

ಹಿನ್ನೆಲೆಯಲ್ಲಿ ಕ್ಷೀಣವಾದ ಕೊಂಬಿನ ಸದ್ದು, ಕುದುರೆಗಳ ಹೇಷಾರವ, ಜನಜಾತ್ರೆಯ ಧ್ವನಿ ಕೇಳಿಬರುತ್ತಿವೆ.]

ಹಾನಿಮ್—ದಂಡು ಹೊರಡುವ ಹೊತ್ತಾಯಿತೆ, ಅಮೀನಾ ?

ಅಮೀನಾ—ಎಲ್ಲ ಸಿದ್ಧವಾಗಿದೆ. ಇನ್ನೇನು ಹೊರಡಬೇಕು. ಇಷ್ಟೊಂದು ಸಡಗರದಿಂದ ಮಂಗೋಲ ಸೇನೆ ಹೊರಟದ್ದನ್ನು ನಾನೆಂದೂ ಕಂಡವಳಲ್ಲ, ಸಮ್ರಾಜ್ಞಿ.

ಹಾನಿಮ್—ದೂರದ ಪ್ರಯಾಣ. . .

ಅಮೀನಾ—(ಹಾನಿಮಳತ್ತ ತಿರುಗಿ) ನಮ್ಮ ಗಿಡುಗಗಳಿಗೆ ಲೋಕದ ವಿಸ್ತಾರ ಒಂದು ಲೆಕ್ಕವೆ, ಒಡತಿ ?

ಹಾನಿಮ್—ಇಲ್ಲ ಎಂದೆನೆ ? ಆದರೂ, ರಾಜಕುಮಾರ ರುಖ್. . . (ನಿಟ್ಟುಸಿರು ಬಿಟ್ಟು) ಹಿಂದೂಸ್ಥಾನವೆಲ್ಲಿ ? ಸಮರ್ಕಂದವೆಲ್ಲಿ ?

ಅಮೀನಾ—ಸಮ್ರಾಟರು ಸಮೀಪದಲ್ಲೇ ಇರುವಾಗ ಯಾಕೆ ಚಿಂತೆ ?

ಹಾನಿಮ್—ಏನಿದ್ದರೂ, ಜನ್ಮವಿತ್ತ ತಾಯಿಕರುಳು ಕೊರಗುವುದು ತಪ್ಪೆ, ಅಮೀನಾ ?

ಅಮೀನಾ—ತಪ್ಪೋ ಒಪ್ಪೋ, ಒಂದು ಬೇಡಿಕೋತೇನೆ ಸಮ್ರಾಜ್ಞಿ. ಹೇಳಿ ಹೋಗಲು ಸಮ್ರಾಟರೂ ರಾಜಕುಮಾರರೂ ಬರುವಾಗ—

ಹಾನಿಮ್—ಇಲ್ಲ, ಇಲ್ಲ. . . ಖಂಡಿತ ಅಳುವುದಿಲ್ಲ. (ಲವಲವಿಕೆಯನ್ನು ಧ್ವನಿಯಲ್ಲಿ ತೋರಿಸಲು ಯತ್ನಿಸುತ್ತ) ನೋಡು ! ಮಂಗೋಲ ರಾಣಿಗೆ ಅತ್ಯಂತ ಹರ್ಷದ ದಿನವಲ್ಲವೆ ಇದು ?

ಅಮೀನಾ—ಮೆಚ್ಚಿದೆ, ಸಮ್ರಾಜ್ಞಿ. (ಕೊಂಬು ಕಹಳೆ ಧ್ವನಿ ಬಲವಾಗಲು, ಜಾಲಂದ್ರದಿಂದೊಮ್ಮೆ ನೋಡಿ) ಓ ! ಸಮ್ರಾಟರೂ ರಾಜಕುಮಾರರೂ ಅರಮನೆಯ ಪಾರ್ಶ್ವದ್ವಾರದಿಂದ ಹೊರಬಿದ್ದರು ! ಇನ್ನೊಂದು ಕ್ಷಣದಲ್ಲಿ ಇಲ್ಲಿಗೆ ಬಂದುಬಿಡುತಾರೆ !

(ಹಾನಿಮ್ ಲಗುಬಗೆಯಿಂದ ಏಳುವಳು. ಅಮೀನಾ ಬಾಗಿಲಿನತ್ತ ಧಾವಿಸುವಳು.)

[ನೇಪಥ್ಯದಲ್ಲಿ ಸ್ತುತಿಪಾಠಕರು : "ಪಶ್ಚಿಮದ ರಾಜಾಧಿರಾಜರನ್ನು ಸೋಲಿಸಿದ ರಣಾಗ್ರಣಿ, ಸಮರ್ಕಂದ ರಾಜಧಾನಿಯಾಗುಳ್ಳ ಸಾಮ್ರಾಜ್ಯದ ಅಧಿಪತಿ, ಮಹಾ ಮಂಗೋಲ ಚೆಂಗೀಸ್‌ಖಾನರ ವಂಶಜ ..." "ಸಾಕುಮಾಡಿ !" ಎಂಬ ತೈಮೂರನ ಅಸಹನೆಯ ನುಡಿ ಸ್ತುತಿಪಠನವನ್ನು ಅರ್ಧಕ್ಕೇ ನಿಲ್ಲಿಸುತ್ತದೆ. ಸಪ್ಪಳದ ಕುಂಟು ನಡಿಗೆಯೊಡನೆ ತೈಮೂರ ಒಳಕ್ಕೆ ಬರುತ್ತಾನೆ. ಅವನನ್ನು

ಹಿಂಬಾಲಿಸಿ ಷಾ ರುಖ್. ಖಡ್ಗಧಾರಿಗಳು ಇಬ್ಬರೂ. ಶಿರಸ್ತ್ರಾಣ ಧರಿಸಿದ್ದಾರೆ. ಹಿಂದಿನ ದೃಶ್ಯದಲ್ಲಿದ್ದುದಕ್ಕಿಂತ ತುಸು ಭಿನ್ನವಾದ ಉಡುಪು. ತೈಮೂರ ಬರುತ್ತಲೇ ದೃಷ್ಟಿ ಮಗನ ಮೇಲಿದ್ದರೂ, ಹಾನಿಮ್ ನಮಿಸುವಳು.]

ತೈಮೂರ—ಬಿಡಿ, ಸಾಕು—ಬೇಗಂ ಸಾಹೀಬಾ. ನಿಮ್ಮಿಂದ ವಿದಾಯ ಪಡೆಯಲು ಬಂದಿದೇವೆ. ನನ್ನ ಜೊತೆ ಇರುವವರು ಯಾರು, ಬಲ್ಲಿರೋ? ಹಹ್ಹ! ಇವರು ನಮ್ಮೊಂದಿಗೆ ಬರುತಿದಾರೆ. (ರಾಜಕುಮಾರನತ್ತ ಹೊರಳಿ) ರುಖ್! ಹಿಂದೂಸ್ಥಾನವನ್ನು ಗೆದ್ದುಬರುತೇವೆ ಎಂದು ನಿಮ್ಮ ಅಮ್ಮನಿಗೆ ಹೇಳು.

ಷಾ ರುಖ್—(ತಬ್ಬಿಬ್ಬಾಗಿದ್ದರೂ ತೋರ್ಪಡಿಸದೆ) ಅಮ್ಮಾಜಾನ್, ಹೋಗಿ ಬರುತೇವೆ.

(ತಾಯಿಯ ಬಳಿ ಸರಿಯಲು, ಹಾನಿಮ್ ಒಂದು ಕ್ಷಣ ಅತನನ್ನು ತಬ್ಬಿಕೊಳ್ಳುವಳು.)

ಹಾನಿಮ್—(ದುಗುಡ ತೋರ್ಪಡಿಸದೆ, ಅದನ್ನು ಮುಚ್ಚಿಕೊಳ್ಳಲೆಂದು ಧ್ವನಿ ಏರಿಸಿ) ಹೋಗಿ ಬಾ, ರುಖ್. ಯಾವಾಗಲೂ ತಂದೆಯ ಪಗ್ಗಲಲ್ಲೇ ಇರು. ಇಬ್ಬರೂ ವಿಜಯಿಗಳಾಗಿ ಬನ್ನಿ. ಲೋಕವೆಲ್ಲ ಹಾಡಿ ಹೊಗಳುವ ಕೀರ್ತಿ ಸಂಪಾದಿಸಿ ಬನ್ನಿ.

ತೈಮೂರ—ಲೋಕವೆಲ್ಲ ಹಾಡಿ ಹೊಗಳುವ—(ನೆನಪಾಗಿ) ಹಂ—ನಿಮ್ಮ ಶಿಲ್ಪಿಯನ್ನೇನು ಮಾಡಿದಿರಿ?

ಹಾನಿಮ್—ವಸತಿಗೆ ಏರ್ಪಾಟಾಗಿದೆ. ಐದು ಸಹಸ್ರ ಕಲ್ಲುಕುಟಿಗರನ್ನು ಒಟ್ಟು ಸೇರಿಸುತಿದಾನೆ. ಸಾಮಗ್ರಿಗಳ ಸಂಗ್ರಹವಾಗುತಿದೆ. ಅರಮನೆಯ ಭಂಡಾರದಿಂದ ವೆಚ್ಚಕ್ಕೆ ಹೊನ್ನು ನೀಡುತಿದೇನೆ.

ತೈಮೂರ—ಹಿಂದೂಸ್ಥಾನದಿಂದ ಹಿಂತಿರುಗಿ ಬಂದವರು ಅಪೂರ್ವ ಮಸೀದಿಯನ್ನೂ ನಿಮ್ಮ ಅರಳಿದ ಮುಖವನ್ನೂ ನೋಡುತೇವೆ.

ಹಾನಿಮ್—ಅಲ್ಲಾನ ದಯೆಯಿಂದ ಸಮ್ರಾಟರಿಗೆ ನಿರಾಶೆಯಾಗದು!

ತೈಮೂರ—ಅರವತ್ತು ದಾಟಿರುವ ಸಮ್ರಾಟ ತೈಮೂರರಿಗೆ ಈವರೆಗೆ ಎಂದಾದರೂ ನಿರಾಶೆಯಾದುದುಂಟೆ ಬೀಬಿ? (ಹಿನ್ನೆಲೆಯಲ್ಲಿ ಕಹಳೆ ಧ್ವನಿ) ಅಗೋ ಕರೆ! ನಾವು ಹೊರಡುತೇವೆ.

ಹಾನಿಮ್—ದೇವರು ನಿಮ್ಮಿಬ್ಬರಿಗೆ ರಕ್ಷೆಯಾಗಲಿ!

ತೈಮೂರ—ನಮ್ಮ ಬಾಹುಗಳು ನಮ್ಮನ್ನು ಕಾಪಾಡುತವೆ! ರುಖ್, ಬಾ!

(ತೈಮೂರ ಸರಕ್ಕನೆ ತಿರುಗಿ ನಿಷ್ಕ್ರಮಣ. ರಾಜಕುಮಾರ ತಾಯಿಯ ಬಳಿಗೆ ಧಾವಿಸುವನು. ಆಕೆ ಅವನ ಹಣೆಗೆ ಮುತ್ತು ಕೊಡುವಳು. ರುಖ್ ತಂದೆಯ ಹಿಂದೆ ಓಡುವನು. ಹೊರಗೆ ಕಲರವ.)

(ಅಮೀನಾ ಒಳಕ್ಕೆ ಬರುವಳು.)

ಹಾನಿಮ್—ಇನ್ನು ಅಳಬಹುದೆ, ಅಮೀನಾ?

ಅಮೀನಾ—[ಹೆಣ್ಣು ಶೋಕದ ಅಕ್ಷಯ ಪಾತ್ರೆ, ನಿಜ: ಆದರೆ ಸಮ್ರಾಜ್ಞಿಯಾದವರು ಅಳಬಾರದು!]

ಹಾನಿಮ್—ಹೋಗಲಿ, ಬಿಡು, ಬಳಲಿದ್ದೀ[illegible] ಕುಳಿತುಕೊಳ್ಳಬಹುದೆ?

ಅಮೀನಾ—ನನ್ನ ತಾಯಿ! (ಅಮೀನಾ ಆಸರೆಯಾಗಿ, ಹಾನಿಮ್ ಕುಳಿತುಕೊಳ್ಳಲು ನೆರವಾಗುವಳು.)

[ಹಿನ್ನೆಲೆಯಲ್ಲಿ ದೂರದಿಂದ ಹಲವು ಸಹಸ್ರ ಕುದುರೆಗಳ, ಹೇರುಬಂಡಿಗಳ ಗಡ್ಡಲವನ್ನೂ ಮೀರಿಸಿ, ಪೀರ್ ಮಹಮ್ಮದನ ಕಂಠ: "ಕಣಿವೆಗಳ ಮಾರ್ಗವಾಗಿ ಕೆಳಕ್ಕಿಳಿಯಿರಿ! ದಕ್ಷಿಣ ದಿಕ್ಕಿಗೆ ಮುನ್ನಡೆಯಿರಿ!"

ಕುಳಿತಲ್ಲೇ ದಿಂಬಿಗೆ ಒರಗಿದ ಸಮ್ರಾಜ್ಞಿಯ ಮುಖಕ್ಕೆ ಅಮೀನಾ ಅಂಗವಸ್ತ್ರದಿಂದ ಗಾಳಿ ಬೀಸುತ್ತಿರುವಾಗ—]

[ಅಂಕದ ತೆರೆ]

ದ್ವಿತೀಯಾಂಕ

ದೃಶ್ಯ ೧

[ಅಂಕದ ಪರದೆ ಸರಿದಾಗ ರಂಗದ ಮೇಲಿರುವುದು ಒಂದು ದೊಡ್ಡ ಬಂಡೆ ಕಲ್ಲು. ಅದರ ಅಕ್ಕಪಕ್ಕದಲ್ಲಿ, ಗಾತ್ರದಲ್ಲಿ ಕಿರಿದಾದ ಬೇರೆಯ ಕಲ್ಲುಬಂಡೆಗಳು. ದೂರದಲ್ಲಿ ಎತ್ತರದ ಸಮತಟ್ಟಾದ ಸ್ಥಳವಿದ್ದಂತೆ, ಅದರ ಮಗ್ಗುಲಲ್ಲಿ ಕಡಿದಾದ ಕಣಿವೆ ಇದ್ದಂತೆ ಕಾಣಿಸುವ ಹಿನ್ನೆಲೆಯ ಪರದೆ. ಹಿನ್ನೆಲೆಯಿಂದ ಸಹಸ್ರಾರು ಕಲ್ಲುಕುಟಿಗರು ಏಕಕಾಲದಲ್ಲಿ ಕೆಲಸ ಮಾಡುತ್ತಿರುವ ಸದ್ದು ಕ್ಷೀಣವಾಗಿ ಕೇಳಿಸುವುದು.

ಬರಿದಾದ ರಂಗಸ್ಥಲಕ್ಕೆ ಮೇನೆಯೊಂದರ ಪ್ರವೇಶ. ಹೊತ್ತಿರುವವರು ನಾಲ್ವರು ಬೋವಿಗಳು, ಮುಂದುಗಡೆಯಲ್ಲಿ ಒಬ್ಬ ಅಂಗರಕ್ಷಕ-ಸುಲೇಮಾನ್. ಮೇನೆಯ ಪರದೆ ಸರಿಸಿ ಕೆಳಕ್ಕೆ ಬಾಗುತ್ತಾಳೆ, ಅಮೀನಾ. ಪರದೆ ಸರಿಸಿದಾಗ ಸಮ್ರಾಜ್ಞಿಯೂ ಮೇನೆಯಲ್ಲಿ ಕುಳಿತಿರುವುದು ಪ್ರೇಕ್ಷಕರಿಗೆ ಕಾಣಿಸುತ್ತದೆ.]

ಅಮೀನಾ—ಬೋವಿಗಳೆ, ನಿಲ್ಲಿರಿ. ಸುಲೇಮಾನ್, ಶಿಲ್ಪಿಯನ್ನು ಕರೆದು ತರಬೇಕೆಂದು ಸಮ್ರಾಜ್ಞಿ ಅನುಜ್ಞೆ ಮಾಡುತಾರೆ.

ಸುಲೇಮಾನ್—ಅಪ್ಪಣೆ. (ಮುಂದುವರಿದು ನೇಪಥ್ಯದಲ್ಲಿ ಮರೆಯಾಗುವನು.)

ಹಾನಿಮ್—ದೂರದಲ್ಲಿ ಕಾಣಿಸುತ್ತಿರುವ ಎತ್ತರದ ಸ್ಥಳವೇ ಅಲ್ಲವೆ ಕೀರ್ತಿ ಮಂದಿರಕ್ಕಾಗಿ ಶಿಲ್ಪಿ ಆರಿಸಿರುವ ತಾಣ?

ಅಮೀನಾ—ಹೌದು, ಒಡತಿ. ಎಷ್ಟೊಂದು ಪ್ರಶಸ್ತವಾದ ಸ್ಥಳ!

ಹಾನಿಮ್—ಆ ಸಪ್ಪಳ, ಶಿಲ್ಪಿಯ ಆದೇಶದಂತೆ ದುಡಿಯುತ್ತಿರುವ ಸಹಸ್ರ ಸಹಸ್ರ ಕಲ್ಲುಕುಟಿಗರದೇ ಇರಬೇಕು.

ಅಮೀನಾ—ಹೌದು, ಹೌದು. ಇದೂ ಒಂದು ರಣಭೂಮಿಯೇ. ಕಾರ್ಮಿಕರ ತಂಡವೇ ಸೇನೆ. ಈ ಶಿಲ್ಪಿಯೇ ದಂಡನಾಯಕ.

ಹಾನಿಮ್—ತಮಾಷೆಯಾಗಿದೆ ನಿನ್ನ ಹೋಲಿಕೆ.

ಅಮೀನಾ—ಶಿಲ್ಪಿ ಬರುತಿದಾನೆ. ನೋಡುವ ಹಾಗಿದೆಯಪ್ಪ ಇವನು ನಡೆಯುವ ರೀತಿ . . . . (ಅವಸರವಾಗಿ ಮೇನೆಯ ಪರದೆ ಮುಚ್ಚುವಳು.)

ಶಿಲ್ಪಿ ದಾವೂದ್—(ಪ್ರವೇಶ. ಆತನ ಹಿಂದೆ ಅಂಗರಕ್ಷಕ ಸುಲೇಮಾನ್. ಮೇನೆಗೆ ಸ್ವಲ್ಪ ದೂರದಲ್ಲಿ ನಿಂತು, ತುಸು ಬಾಗಿ, ಆತ್ಮವಿಶ್ವಾಸದ ಕಂಠದಿಂದ) ಶಿಲ್ಪಿ ದಾವೂದ್ ವಂದಿಸುತಿದಾನೆ. ಏನಪ್ಪಣೆ?

ಅಮೀನಾ—ಕೆಲಸ ಹೇಗೆ ಸಾಗಿದೆ ಎಂದು ನೋಡಲು ಸಮ್ರಾಜ್ಞಿಯವರು ಸ್ವತಃ ಬಂದಿದಾರೆ.

ಶಿಲ್ಪಿ ದಾವೂದ್—ಶಿಲ್ಪಿ ಉಪಕೃತನಾಗಿದಾನೆ. ಮೇನೆಯ ಪರದೆ ಸರಿಸಿದರೆ ಆಗಿರುವ ಕೆಲಸ ಕುಳಿತಲ್ಲಿಗೇ ಕಾಣಿಸಬಹುದು.

ಅಮೀನಾ— ಪರದೆ ಸರಿಸದೇ ಇದ್ದರೂ ಇಲ್ಲಿಂದ ಕಾಣಿಸುತದೆ, ಶಿಲ್ಪಿ.

ಶಿಲ್ಪಿ ದಾವೂದ್—(ತುಟಿ ಕಚ್ಚಿ) ಹೌದೇ? ಅದು ಪರದೆಯ ಒಳಗಿರುವವರಿಗೇ ಗೊತ್ತು.

ಹಾನಿಮ್—(ಹೊರಕ್ಕೆ ಚೆನ್ನಾಗಿಯೇ ಕೇಳಿಸುವ ಧ್ವನಿಯಲ್ಲಿ) ಅಮೀನಾ, ನಿವೇಶನದ ಆಯ್ಕೆ ಉತ್ತಮವಾಗಿದೆ ಎಂದು ಶಿಲ್ಪಿಯವರಿಗೆ ಹೇಳು.

ಶಿಲ್ಪಿ ದಾವೂದ್—(ಪರಿಹಾಸ್ಯದ ರೀತಿಯಲ್ಲಿ ತುಸು ತಲೆ ಬಾಗಿಸಿ) ಅಮೀನಾ, ಸಮ್ರಾಜ್ಞಿಯವರ ಮೆಚ್ಚುಗೆಯ ಮಾತಿನಿಂದ ನಾನು ಉತ್ತೇಜಿತನಾಗಿದೇನೆ ಎಂದು ತಿಳಿಸು. ಅಡಿಪಾಯದ ಕೆಲಸ ಈ ದಿನ ಮುಗಿಯುತದೆ.

ಹಾನಿಮ್—ಎಲ್ಲ ಅನುಕೂಲತೆಗಳೂ ಇವೆಯೆಷ್ಟೆ?

ಶಿಲ್ಪಿ ದಾವೂದ್—ಸಂತೃಪ್ತ ಕಾರ್ಮಿಕ ಶ್ರದ್ಧೆಯಿಂದ ದುಡಿಯುತಾನೆ. ಎಲ್ಲ ಕೆಲಸಗಾರರೂ ಸಂತುಷ್ಟರಾಗಿದಾರೆ.

ಅಮೀನಾ—ಸಮ್ರಾಜ್ಞಿಯವರು ಕೇಳುತಿರುವುದು, ಶಿಲ್ಪಿಯವರಿಗೆ ಎಲ್ಲವೂ ಅನುಕೂಲವಷ್ಟೆ ಎಂದು.

ಶಿಲ್ಪಿ ದಾವೂದ್—(ಸಣ್ಣನೆ ನಕ್ಕು) ಇರುವವನು ಒಬ್ಬ. ಏನು ಅನುಕೂಲತೆ ತಾನೆ ನನಗೆ ಬೇಕು?

ಹಾನಿಮ್(ತುಸು ಅಸಹನೆಯ ಧ್ವನಿಯಲ್ಲಿ) ಏನಾದರೂ ಬೇಕಿದ್ದರೆ ನಮ್ಮನ್ನು ಬಂದು ನೋಡಬಹುದು ಎಂದು ಹೇಳು, ಅಮೀನಾ.

ಅಮೀನಾ—ಏನಾದರೂ ಬೇಕಿದ್ದರೆ ಅಂತಃಪುರಕ್ಕೆ–ಅಲ್ಲ, ಅರಮನೆಗೆ–ಬಂದು ಸಮ್ರಾಜ್ಞಿಯವರನ್ನು ಶಿಲ್ಪಿ ಕಾಣಬಹುದು.

ಶಿಲ್ಪಿ ದಾವೂದ್—ಅನುಗ್ರಹೀತ.

ಹಾನಿಮ್—(ತಗ್ಗಿದ ಧ್ವನಿಯಲ್ಲಿ) ಹೋಗೋಣ.

ಅಮೀನಾ—ಬೋವಿಗಳೇ ! ನಡೆಯಿರಿ.

(ಮೇನೆ ಅಂಗರಕ್ಷಕನನ್ನು ಹಿಂಬಾಲಿಸಿ, ಬಂದ ದಾರಿಯಲ್ಲೆ ಹಿಂತಿರುಗುವುದು. ದಾವೂದ್ ಒಂದು ಕ್ಷಣ, ಮೇನೆ ಹೋದ ದಾರಿಯನ್ನೇ ನೋಡುತ್ತ ಮೌನ ವಾಗಿ ನಿಲ್ಲುವನು.)

ಶಿಲ್ಪಿ ದಾವೂದ್—(ಸ್ವಗತ) ಮೇನೆಯ ತೆರೆಯನ್ನು ಇಷ್ಟು ಸರಿಸಬಾರದಾಗಿತ್ತೆ? ಈ ರೂಪರಾಶಿ ಎಚ್ಚರದಲ್ಲೂ ಇರುಳಿನಲ್ಲೂ ನನ್ನನ್ನು ಕಾಡುತಿದೆ ಯಲ್ಲ! ಮೊದಲ ಬಾರಿ ಕಂಡಾಗ ಬಾಗಿಲಿನ ಪರದೆ ಅಡ್ಡವಾಯಿತು. ಎರಡನೆಯ ಬಾರಿ ಸಂದರ್ಶನಕ್ಕೆ ಹೋದಾಗ ಕರಿಯ ತೆರೆ ಅಡ್ಡ ನಿಂತಿತು. ಈಗಲೂ—ಮೂರನೆಯ ಸಲವೂ—ಹೀಗೆ.... (ಅತ್ತಿತ್ತ ಚಲಿಸುತ್ತ) ಮನುಷ್ಯರುಂಡಗಳಿಂದ ಪಿರಮಿಡ್ಡು ಕಟ್ಟುವ ಆ ಕಾಡು ಮಾನವನ ಕೀರ್ತಿಗೆ ಸ್ಮಾರಕವಾಗಿ ನಿರ್ಮಿಸಲೆ ಈ ಮಂದಿರವನ್ನು ? ಕೊಲೆ ಸುಲಿಗೆ ಪಾತಕಗಳೇ ಧರ್ಮವಾಗಿರುವ ನರಾಧಮನ ನೆನಪಿಗಾಗಿ ಮುಡಿಪಿಡಲೆ ನನ್ನ ಕಮಾನು ಕಂಬಗಳನ್ನು ? (ರಂಗಮಧ್ಯದಲ್ಲಿ ನಿಂತು) ಇಲ್ಲ ! (ಹಿಂಬದಿಯ ತೆರೆಯತ್ತ ನೋಡಿ) ನನ್ನ ಪಾಲಿಗೆ ಇದು ಸೌಂದರ್ಯೋಪಾಸನೆ ! ನಾನು ಕಟ್ಟುವ ಸೌಧ ಈ ದೇವಿಗೇ ಅರ್ಪಿತ ! (ಬಂಡೆಯತ್ತ ಸಾಗಿ) ಶಿಲಾದೈತ್ಯ ! ಮಂದಿರದ ಪ್ರಾಂಗಣದಲ್ಲಿ ಮುಸುಡು ಮೆರೆಸುವ ಎದೆಗಾರಿಕೆಯೆ ನಿನಗೆ ? ನಿನ್ನನ್ನು ಸೀಳಿ, ಕೋಮಲ ಪಾದಗಳು ನಡೆಯಲು ಫಲಕಗಳಾಗಿ ಮಾಡೇನು ! (ಕೂಗಿ ಕರೆಯುತ್ತ) ರಫೀಖ್ ! ಯಾಕೂಬ್ !....

[ತೆರೆ]

ದೃಶ್ಯ ೨

[ದಿಲ್ಲಿಯ ಸುಲ್ತಾನ ಮಹಮ್ಮದ್ ಷಾನ ಅರಮನೆ. ರಂಗದ ಎಡ ಭಾಗದಲ್ಲಿ ಪ್ರವೇಶ ದ್ವಾರ. ಬಲಭಾಗದಲ್ಲಿ ಮಹಡಿ ಎಂಬ ಭ್ರಮೆ ಹುಟ್ಟಿಸುವಂತೆ ತುಸು ಎತ್ತರ

ದಲ್ಲಿರುವ ಅಟ್ಟಣಿಗೆಯಲ್ಲಿ, ಪೀಠಗಳ ಮೇಲೆ ಕುಳಿತು, ಅಮಾತ್ಯನೊಡನೆ ಸುಲ್ತಾನ ಆಪ್ತಾಲೋಚನೆ ನಡೆಸುತ್ತಿದ್ದಾನೆ.

ತೆರೆ ಸರಿದಾಗ ಶುಭ್ರ ಬೆಳಕು ದ್ವಾರದ ಮೇಲಷ್ಟೇ ಬಿದ್ದಿದೆ. ಉಳಿದ ಭಾಗವನ್ನು ನಸುಗತ್ತಲೆ ಆವರಿಸಿರುತ್ತದೆ.]

ಕಾವಲುಗಾರ—(ಆಯುಧಪಾಣಿಯಾಗಿ ಪ್ರತಿಮೆಯಂತೆ ನಿಂತವನು ಸರಕ್ಕನೆ ತಿರುಗಿ ಹೊರಕ್ಕೆ ನೋಡುತ್ತ) ಏಯ್! ಹಿಂದೂಸ್ಥಾನದ ಚಕ್ರವರ್ತಿ ದಿಲ್ಲೀ ಸುಲ್ತಾನ ಮಹಮ್ಮದ್ ಷಾರ ಅರಮನೆಯ ಎದುರು ನಿಂತ ಅಶ್ವಾರೋಹಿ! ಯಾರು ನೀನು? ಸಾಗು ಮುಂದಕ್ಕೆ!

ದೂತ—(ನೇಪಥ್ಯದಲ್ಲಿ) ಭಾಂಟನೀರದ ರಾಜಾ ಧೂಲ್‌ಚಂದರಿಂದ ಅವಸರದ ಓಲೆ ತಂದಿದೇನೆ, ಈಗಲೇ ಸುಲ್ತಾನರಿಗೆ ತಲುಪಿಸಬೇಕಲ್ಲ?

ಕಾವಲುಗಾರ—ಓಲೆಯೊ? ಇತ್ತಕೊಡು, (ಪಕ್ಕಕ್ಕೆ ಹೊರಳಿ, ನಿರ್ವಿಕಾರ ಧ್ವನಿಯಲ್ಲಿ) ಏ ಝುಲ್‌ಫಿಖರ್. ಅವಸರದ ಓಲೆ. ಓಡಿ ಬಾ. (ಬಲಭಾಗದ ನೇಪಥ್ಯದಿಂದ ಪರಿಚಾರಕನೊಬ್ಬ ಹೊರಬಿದ್ದು, ಸುಲ್ತಾನ ಹಾಗೂ ಅಮಾತ್ಯರಿಗೆ ಅಡ್ಡವಾಗದಂತೆ ಬಗ್ಗಿಕೊಂಡು ಕಾವಲುಗಾರನ ಬಳಿಗೆ ಧಾವಿಸಿ ಬರುವನು. ಕೈಚಾಚಿ ಹೊರಗೆ ದೂತನಿಂದ ಪಡೆದ ಪತ್ರವನ್ನು, ಝುಲ್‌ಫಿಖರನಿಗೆ ಕಾವಲುಗಾರ ಕೊಡುವನು) ಸನ್ನಿಧಾನಕ್ಕೆ ಮುಟ್ಟಿಸು! (ಸ್ವರ ತಗ್ಗಿಸಿ ಛೇಡಿಸುತ್ತ) ಅಪ್ಪಣೆ ಅನ್ನೋ, ಹಂದಿ. (ನೇಪಥ್ಯದಲ್ಲಿರುವ ದೂತನ ಕಡೆಗೆ ಮುಖ ತಿರುಗಿಸಿ, ಸ್ವರ ಬದಲಿಸಿ) ಅಮಾತ್ಯ ಮಲ್ಲೂ ಇಕ್ಬಾಲ್‌ಖಾನರ ಜೊತೆ ಸುಲ್ತಾನರ ಮಂತ್ರಾಲೋಚನೆ ನಡೀತಿದೆ. ಇದರ ಫಲವಾಗಿ ಯಾರ ತಲೆ ಹೋಗುತದೋ ಪರವರದಿಗಾರ್ ಬಲ್ಲ! (ಝುಲ್‌ಫಿಖರ್ ಪತ್ರದೊಡನೆ ಅಲ್ಲಿಯೇ ನಿಂತಿರುವನು.)

ದೂತ—(ನೇಪಥ್ಯದಲ್ಲಿ) ಉತ್ತರಕ್ಕಾಗಿ ಕಾಯಬೇಕು, ಎಲ್ಲಿ ತಂಗಲಿ?

ಕಾವಲುಗಾರ—ಇರಯ್ಯ ಇಲ್ಲೇ. ದಿಲ್ಲಿಯಲ್ಲಿ ವಸ್ತಿಮಾಡಲು ಸ್ಥಳಕ್ಕೊಂದು ಬರಗಾಲವೆ? ರಾಜ ಬೀದಿಯ ದೀಪದ ಕಂಬಕ್ಕೆ ಕಟ್ಟು ಕುದುರೇನ.

ಝುಲ್‌ಫಿಖರ್—ಈ ಪತ್ರ ಒಯ್ದು ಕೊಡಲಾ?

ಕಾವಲುಗಾರ—(ಆತನತ್ತ ತಿರುಗಿ) ಅರೇ ಹಂದೀ ಮಗನೇ! ಇನ್ನೂ ಇಲ್ಲೇ ಡೊರಕ್ ಡೊರಕ್ ಅಂತಿದೀಯೇನೋ? ನಾನು ಸುಲ್ತಾನನಾಗಿದ್ದಿ

ದ್ದರೆ ನಿನ್ನ ತಲೆ ಕಡಿದ್ಬಿಡ್ತಿದ್ದೆ. ಓಡು! ಅವಸರದ ಓಲೆ—ಅಷ್ಟು ಗೊತ್ತಾಗೋದಿಲ್ಲವೇ? (ಕಾವಲುಗಾರನನ್ನೂ ಪ್ರವೇಶ ದ್ವಾರವನ್ನೂ ಕತ್ತಲಲ್ಲಿ ಬಿಟ್ಟು ಬೆಳಕಿನ ವೃತ್ತ ಸೇವಕನೊಡನೆ ಅಟ್ಟಣಿಗೆಯತ್ತ ಚಲಿಸಿ ಸುಲ್ತಾನ ಹಾಗೂ ಆತನ ಅಮಾತ್ಯರಿರುವ ಕಡೆ ತಂಗುವುದು.)

ಮಹಮ್ಮದ್ ಷಾ—(ಕುರ್ನಿಸು ಮಾಡಿದ ಸೇವಕನಿಗೆ) ಅದೇನು? ತಾ ಇಲ್ಲಿ.

ಮಲ್ಲೂ—ಇಲ್ಲಿ ಕೊಡು (ತಾನು ಇಸಕೊಂಡು ಸುರುಳಿ ಬಿಚ್ಚಿ) ಆ್ಹ—ಭಾಂಟಿ ನೀರದ ಧೂಲ್‌ಚಂದನ ರಾಜಮುದ್ರೆ! ಸಹಾಯ ಯಾಚಿಸಿ ಬರೆದಿರ ಬೇಕು!

ಮಹಮ್ಮದ್ ಷಾ—ಓದಿ, ಮಲ್ಲೂ ಇಕ್ಬಲ್‌ಖಾನ್. ಕೇಳೋಣ.

ಮಲ್ಲೂ—(ಓದುತ್ತ) "ದಿಲ್ಲೀಶ್ವರರಾದ ಸುಲ್ತಾನ್ ಮಹಮ್ಮದ್ ಷಾರಿಗೆ"—ಎಂಥ ಅಹಂಕಾರ! ಹಿಂದೂಸ್ಥಾನದ ಬಾದಶಹರು ಎಂದು ತಮ್ಮನ್ನು ಒಪ್ಪಿಕೊಳ್ಳುವುದಿಲ್ಲ! . . . . "ಭಾಂಟನೀರದ ರಾಜಾ ಧೂಲ್‌ಚಂದ್ (ಮುಂದಿನ ಪದಗಳನ್ನು ಮನಸಿನಲ್ಲೇ ಓದುವವನಂತೆ ಗುಣುಗುಣಿಸುವನು. ಗಟ್ಟಿಯಾಗಿ,). . . . ಸಹಾಯಯಾಚನೆಮಾಡುವುದಕ್ಕೋಸ್ಕರ (ಸ್ವರ ತಗ್ಗಿಸಿ) ನಾನು ಬರೆಯುತ್ತಿಲ್ಲ...ಹಿಂದೂಸ್ಥಾನಕ್ಕೆ ಒದಗಿರುವ ಗಂಡಾಂತರವನ್ನು ಕಂಡು ವ್ಯಥಿತನಾಗಿ ನನ್ನ ಹೃದಯವನ್ನು ತಮ್ಮ ಮುಂದೆ ತೋಡಿಕೊಳ್ಳುತ್ತಿದ್ದೇನೆ. ಸಮ್ರಾಟ ಅಲ್ತಮುಷರ ಕಾಲಕ್ಕೆ ಚೆಂಗೀಸ್ ಖಾನನ ದಂಡು ಸಿಂಧೂನದಿಯ ದಡದವರೆಗೆ ಬಂದು ಹಿಂದಿರುಗಿ ಹೋದದ್ದನ್ನು ನಾವೆಲ್ಲ ಕೇಳಿ ಬಲ್ಲೆವು. ಈಗಲಾದರೋ ಆ ಖಾನರ ವಂಶದವನಾದ ತೈಮೂರನ ಒಂದು ಲಕ್ಷ ಸೈನ್ಯ ಸಿಂಧೂನದಿಯನ್ನು ದಾಟಿದೆ. ಸಮರ್ಕಂದದಿಂದ ಹೊರಟ ಆರೇ ತಿಂಗಳಲ್ಲಿ ಹಿಂದೂಸ್ಥಾನದ ಒಳಹೊಕ್ಕ ವೈರಿಗೆ ದಿಲ್ಲಿ ದೂರವಲ್ಲ. ಸಿಂಧೂನದಿಯಾಚೆಗಿನ ಎಲ್ಲ ಕೋಟೆಗಳು ನೆಲಸಮವಾಗಿವೆ. ಜನರನ್ನು ಸಾಮೂಹಿಕವಾಗಿ ವಧಿಸಲಾಗಿದೆ. ಅಘನಿ ಗುಡ್ಡಗಾಡು ಜನಾಂಗವನ್ನು ನಿರ್ಮೂಲಗೊಳಿಸಿದ್ದಾರೆ. ವೈರಿ ಸೈನ್ಯದ ಒಂದು ಭಾಗ ಸೇನಾನಿ ಪೀರ್ ಮಹಮ್ಮದನ ಕೈಕೆಳಗೆ ಮುಲ್ತಾನಿಗೆ ಸಾಗಿದೆ. ಸ್ವತಃ ತೈಮೂರ ತಾಲಂಬದತ್ತ ಹೊರಟಿದ್ದಾನೆ, ತಾಲಂಬವನ್ನು ಮಣಿಸಿ ತೈಮೂರನು

ಮುಲ್ತಾನಿಗೆ ಬರುವುದು ಖಂಡಿತ. ಅಲ್ಲಿಂದ ಅವರು ಎಲ್ಲಿಗೆ ಹೊರಡುವ ರೆಂದು ಊಹಿಸಿಕೊಳ್ಳಬಹುದು. ನಾವೇನೋ ಆತ್ಮರಕ್ಷಣೆಗೋಸ್ಕರ ರಾಷ್ಟ್ರರಕ್ಷಣೆಗೋಸ್ಕರ ಪ್ರಾಣ ಬಿಡುವುದಕ್ಕೂ ಸಿದ್ಧರಾಗಿದ್ದೇವೆ. ಬೇರೆ ದೇಶಗಳಲ್ಲಿ ತೈಮೂರ ನಡೆಸಿದ ನರಮೇಧದ ಪುನರಾವರ್ತನೆಯೇ ಈಗ ಹಿಂದೂಸ್ಥಾನದ ಪಟ್ಟಣಗಳಲ್ಲಿ ಆಗುತ್ತಿದೆ. ಹಿಂದೂಗಳು ಮುಸಲ್ಮಾನರು ಎಂಬ ಯಾವ ವ್ಯತ್ಯಾಸವನ್ನೂ ತೈಮೂರ ಮಾಡುತ್ತಿಲ್ಲ. . . ."

ಮಹಮ್ಮದ್ ಷಾ—ಯಾ ಅಲ್ಲಾ ! ಎಂಥ ದುರ್ಗತಿ ಪ್ರಾಪ್ತವಾಯ್ತು !

ಮಲ್ಲೂ—(ಓದುತ್ತ). . . . "ಈ ಘಳಿಗೆಯಲ್ಲಿ ನಮ್ಮ ನಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ನಾವೆಲ್ಲರೂ ಒಟ್ಟಾದರೆ ಮಾತ್ರ ಪರಕೀಯರ ಧಾಳಿಯಿಂದ ರಾಷ್ಟ್ರವನ್ನು ರಕ್ಷಿಸುವುದು ಸಾಧ್ಯವಾದೀತು. . . . ಎಲ್ಲರೂ ಒಂದಾಗಿ ಹೋರಾಡುವ ವಿಷಯದಲ್ಲಿ ತಾವು ಈಗಿಂದೀಗಲೇ ಕಾರ್ಯಪ್ರವೃತ್ತರಾಗಬೇಕೆಂದು ಮತ್ತೊಮ್ಮೆ ಪ್ರಾರ್ಥಿಸುತ್ತಿದ್ದೇನೆ— ಇತಿ, ತಮ್ಮ. . . ."

ಮಹಮ್ಮದ್ ಷಾ—ತೈಮೂರ ಇಷ್ಟೊಂದು ದೂರ ನಿಜವಾಗಿಯೂ ಮುಂದುವರಿದಿರಬಹುದು ಎನ್ನುತೀರಾ ಮಲ್ಲೂ ?

ಮಲ್ಲೂ—ನಿಜವೋ ಸುಳ್ಳೋ. . . . ಒಂದು ವಿಷಯ ಮಾತ್ರ ಖಚಿತ.

ಮಹಮ್ಮದ್ ಷಾ—(ಕಳವಳ ಬೆರೆತ ಉತ್ಸುಕತೆ) ಯಾವುದು ?

ಮಲ್ಲೂ—ಈ ರಜಪೂತ ಶುದ್ಧ ಹೇಡಿ. ಏನೇನೂ ಅನುಮಾನವಿಲ್ಲ. ಈತ ತೈಮೂರನ ಕೈಯಲ್ಲಿ ಹತನಾದರೆ ನನಗೇನೂ ದುಃಖವಾಗದು.

ಮಹಮ್ಮದ್ ಷಾ—ಮಾರೋಲೆಯನ್ನಂತೂ ಬರೆಯಲೇ ಬೇಕಲ್ಲ ? "ವಿಷಯ ಗಮನಿಸಿದ್ದೇವೆ. ರಕ್ಷಣೆಯ ಸಿದ್ಧತೆಯಲ್ಲಿದ್ದೇವೆ"—ಎನ್ನೋಣ ?

ಮಲ್ಲೂ—ಬರೆದರಾಯಿತು, ಮಾರೋಲೆ. ಅದಕ್ಕೂ ಮೊದಲು ನಿಜಸ್ಥಿತಿ ತಿಳಿಯುವುದಕ್ಕೆ ಆ ಕಡೆಗೆ ನಮ್ಮ ಬೇಹುಗಾರರನ್ನು ನಾವು ಕಳುಹಿಸಬೇಕು.

ಮಹಮ್ಮದ್ ಷಾ—ಹೌದು. ಒಳ್ಳೆಯ ಯೋಚನೆ.

ಮಲ್ಲೂ—(ಧ್ವನಿ ಏರಿಸಿ, ಸಮ್ರಾಟನತ್ತ ನೋಡಿ) ಏಯ್ ಯಾರಲ್ಲಿ ?

ಮಹಮ್ಮದ್ ಷಾ—(ತಾನೂ ಧ್ವನಿ ಏರಿಸಿ ದ್ವಾರದ ಕಡೆಗೆ ನೋಡಿ) ಏಯ್ ಯಾರಲ್ಲಿ ?

(ಬೆಳಕಿನ ವೃತ್ತ ಎಡಕ್ಕೆ ಚಲಿಸಿ ಕಾವಲುಗಾರನ ಮೇಲೆ ಬೀಳುವುದು.)

ಕಾವಲುಗಾರ—(ಹೊರಕ್ಕೆ ನೋಡಿ) ಏಯ್ ಯಾರಲ್ಲಿ ?

(ತೆರೆ)

ದೃಶ್ಯ ೩

[ತೆರೆ ಸರಿದಾಗ 'ಸಮ್ರಾಟ ತೈಮೂರ ಖಾನರಿಗೆ ಮುಲ್ತಾನದ ಸ್ವಾಗತ' ಎಂಬ ಘೋಷ ಹಿನ್ನೆಲೆಯ ಪರದೆಯ ಮೇಲೆ ಕಾಣುತ್ತದೆ. ರಂಗಸ್ಥಳದಲ್ಲಿ ಕೆಲವು ಪೀಠಗಳಿವೆ. ಗಾತ್ರ ದೇಹದ ಮುಸಲ್ಮಾನ ವರ್ತಕನೊಬ್ಬ ತನ್ನ ಇಬ್ಬರು ಮೂವರು ಸೇವಕರೊಡನೆ ಎದುರುಗಡೆ ನೇಪಥ್ಯದತ್ತ ನೋಡುತ್ತ ನಿಂತಿದ್ದಾನೆ. ಸೇವಕರು, ಮಖಮಲ್ಲಿನ ಬಟ್ಟೆ ಮುಚ್ಚಿದ ತಟ್ಟೆಗಳನ್ನು ಹೊತ್ತಿದ್ದಾರೆ. ಇವರ ಕಾವಲಿಗೆ ಒಬ್ಬ ಮಂಗೋಲ ಸೈನಿಕನಿದ್ದಾನೆ.]

ವರ್ತಕ (ಸೈನಿಕನೊಡನೆ) ಏನಪ್ಪ, ನಿಂತು ನಿಂತು ಸಾಕಾಯಿತು. ಸಮ್ರಾಟರು ಬರುವುದು ಇನ್ನೆಷ್ಟು ಹೊತ್ತೋ ಏನೋ, ಈ ಪೀಠದ ಮೇಲೆ ಸ್ವಲ್ಪ ಕುಳಿತುಕೊಳ್ಳಲೇನಪ್ಪ ?

ಸೈನಿಕ—ಖಬರ್‌ದಾರ್ ! ಹೊಟ್ಟೆಗೆ ಇರಿದು ಕರುಳು ಹೊರಗೆ ತೆಗೆದೇನು ! ಸಮ್ರಾಟರಿಗೆ ಅಂತ ಇಟ್ಟಿರುವ ಪೀಠಗಳ ಮೇಲೆ ನೀನು ಕುಳಿತು ಕೊಳ್ಳುತೀಯಾ ?

ವರ್ತಕ—ಅಪ್ಪ, ಸರದಾರ, ಈ ಪೀಠಗಳು ನನ್ನವೇ-ನಮ್ಮ ಮನೆಯವೇ ಕಣಪ್ಪ.

ಸೈನಿಕ—ನಿಮ್ಮ ಮನೆ? ಹಹ್ಹ ! ನಿನ್ನೆ ನೀನು ಲಕ್ಷಾಧಿಪತಿಯಾಗಿದ್ದಿರ ಬಹುದು, ಸೇಠ್. ಆದರೆ ಇವತ್ತು—ಪೀರ್ ಮಹಮ್ಮದರು ಈ ನಗರ ವನ್ನು ಗೆದ್ದು ಆದಮೇಲೆ—ನೀನು ಭಿಕ್ಷಾಧಿಪತಿ. ಮುಲ್ತಾನಿಗೆ ನಾವು ಅರಸರು. ಇಡಿಯ ಹಿಂದೂಸ್ಥಾನಕ್ಕೇ ನಾವು ಒಡೆಯರು. ಇವತ್ತು ರಾತ್ರೆ ನೀನು ಬದುಕಿರುತಿಯೋ ಇಲ್ಲವೋ ಅದು ಇಲ್ಲಿಗೆ ಆಗಮಿಸುವ ಸಮ್ರಾಟರನ್ನು ಅವಲಂಬಿಸಿದೆ.

ವರ್ತಕ—ಏನಪ್ಪ ಹೀಗೆ ಹೇಳುತೀಯ? ನೀನೇ ನೋಡು, ಎಷ್ಟೊಂದು ಕಪ್ಪ ಕಾಣಿಕೆ ಹೊತ್ತು ನಿಂತಿದಾರೆ ನನ್ನ ಸೇವಕರು!

ಸೈನಿಕ—ನಿನ್ನ ಸೇವಕರು ಅಂತೀಯಾ? ಮುರ್ಖ! ನೀವೆಲ್ಲರೂ ಮಂಗೋಲ್ ಸೈನ್ಯದ ಕೈದಿಗಳು.

ವರ್ತಕ—ಹಾಗೆ ಹೇಳಬೇಡವಪ್ಪ. ನೀನಿನ್ನೂ ಹುಡುಗ. ನಿನಗೆ ಬಂಗಾರದ ಉಡುಗೊರೆ ಕೊಡುತೇನೆ-ಉಡುಗೊರೆ-ಇನಾಮು!

ಸೈನಿಕ—ಶ್! ಅಗೋ ಸಮ್ರಾಟರು ಬರುತಿದಾರೆ. ತಾಲಂಬವನ್ನು ಮಣಿಸಿ, ಈ ನಗರವನ್ನು ಹೊಗುತಿದಾರೆ.

ವರ್ತಕ—(ಎದುರು ನೇಪಥ್ಯದಲ್ಲಿ ಕಲರವ ಕೇಳಿಸತೊಡಗಿದಂತೆ) ಅಪ್ಪ ಸೈನಿಕ, ನೀನು ನನ್ನ ಮಗನಿಗೆ ಸಮಾನ.

ಸೈನಿಕ—ಶ್! ಅಪ್ಪ ಸೈನಿಕ-ಎನ್ನುತೀಯಾ, ಮಗನಿಗೆ ಸಮಾನ ಅಂತಲೂ ಹೇಳುತೀಯಾ. ನಿನ್ನ ತಲೆ ಕೆಟ್ಟಿರಬೇಕು.

ವರ್ತಕ—ನಾನು ಒಳ್ಳೆಯವನೂಂತ ಬಾದಶಹರಿಗೆ ಹೇಳು, ಮಗೂ. ನಿನಗೆ ನೂರು ಹೊನ್ನು ಕೊಡುತೇನೆ, ಸಾವಿರ ಹೊನ್ನು ಕೊಡುತೇನೆ.

ಸೈನಿಕ—ಸುಮ್ಮನಿರು! ಅಗೋ ಸಮ್ರಾಟರು!

ಪೀರ್ ಮಹಮ್ಮದ್—(ನೇಪಥ್ಯದಲ್ಲಿ) ಇದೊಂದು ಮುಲ್ತಾನಿನ ಶ್ರೀಮಂತ ವರ್ತಕನ ಮನೆ. ಇಲ್ಲಿ ಇಳಿದು ತುಸು ವಿರಮಿಸಿ ಮುಂದೆ ಸಾಗೋಣ.

ತೈಮೂರ—(ನೇಪಥ್ಯದಲ್ಲಿ) ಹ್ಞ! ಷಾ ರುಖ್! ಹಾರು ಕೆಳಕ್ಕೆ!

(ತೈಮೂರ, ಮಗ್ಗುಲಲ್ಲಿ ಷಾ ರುಖ್, ಪೀರ್ ಮಹಮ್ಮದ್, ಖಿಜರ್‌ಖಾನ್, ಮೂವರು ನಾಲ್ವರು ಸೈನಿಕರು ಒಳಕ್ಕೆ ಬರುವರು. ವರ್ತಕ ಬಾಗಿ ಬಾಗಿ ನಮಿಸುವನು. ನಮಿಸುತ್ತ ದೇಹವನ್ನು ನೆಲದಮೇಲೆ ಚಾಚುವನು.)

ತೈಮೂರ—ಏನಿದು?

ಪೀರ್ ಮಹಮ್ಮದ್—ಇದು ಈ ದೇಶದಲ್ಲಿ ದೊಡ್ಡವರಿಗೆ ಗೌರವ ಸೂಚಿಸುವ ಪದ್ಧತಿ.

ತೈಮೂರ—(ನಿಷ್ಠುರವಾಗಿ) ಏಳು! (ವರ್ತಕ ಏಳದೆಯೇ ಇರುವುದನ್ನು ಕಂಡು) ಅರೇ ಏನಾಯಿತು ಇವನಿಗೆ?

(ವರ್ತಕ ಗಟ್ಟಿಯಾಗಿ ರೋದಿಸುತ್ತಾನೆ.)

ಪೀರ್ ಮಹಮ್ಮದ್—ಏಳು ಸೇಠ್.

ವರ್ತಕ—(ರೋದಿಸುತ್ತ) ಅಭಯ ದೊರೆತರೆ ಮಾತ್ರ ಏಳುತೇನೆ. . . .

ತೈಮೂರ— ಏನಂತೆ ?

ಪೀರ್ ಮಹಮ್ಮದ್—ಪ್ರಾಣದ ಭರವಸೆ ಕೊಡಬೇಕಂತೆ.

ತೈಮೂರ— ಏಳು, ಬದುಕಿಕೋ.

(ವರ್ತಕ ಏಳಲಾಗದೆ ಒದ್ದಾಡುತ್ತಾನೆ.)

ತೈಮೂರ—ಮತ್ತೇನಾಯಿತು ಇವನಿಗೆ ?

ಷಾ ರುಖ್— ಶರೀರದ ಭಾರದಿಂದ ತೊಳಲಾಡುತಿರಬೇಕು !

ತೈಮೂರ— ಹಹ್ಹ ! ಯಾರಾದರೂ ಅವನನ್ನು ಎಬ್ಬಿಸಿ !

(ಸೈನಿಕರು ಎತ್ತಿ ನಿಲ್ಲಿಸಲು ಮುಂದಾಗುವರು.) ಹಾಗಲ್ಲ, ಹೀಗೆ ! (ಖಡ್ಗದ ಚೂಪು ತುದಿಯಿಂದ ವರ್ತಕನ ಹಿಂಭಾಗವನ್ನು ಸೂಕ್ಷ್ಮವಾಗಿ ಮುಟ್ಟುವನು. ವರ್ತಕ 'ಅಯ್ಯೋ !' ಎನ್ನುತ್ತ ಚೀರಿಕೊಂಡು ಏಳುವನು.) ಹಹ್ಹ ! (ವರ್ತಕ ಥರಥರನೆ ನಡುಗುವನು.) ಪೀರ್ ಮಹಮ್ಮದ್ ! ಈ ನರಹುಳ ಏನು ಬೇಡುತಾನೆ ?

ಪೀರ್ ಮಹಮ್ಮದ್—ಹೇಳು, ಸೇಠ್.

ವರ್ತಕ—ತಾವು-ತ-ತಾವು ಆಸೀನರಾದರೆ ಮಾತ್ರ. . . .

ತೈಮೂರ—ಹೋ ! ಆಸನಗಳು ! (ತಾನು ಕುಳಿತುಕೊಂಡು, ಇಬ್ಬರು ಸೇನಾನಿಗಳಿಗೂ ರಾಜಕುಮಾರನಿಗೂ ಆಸೀನರಾಗಲು ಸನ್ನೆ ಮಾಡುವನು. ಅವರು ಕುಳಿತ ಬಳಿಕ) ಏನದು ? ಹೇಳು !

ವರ್ತಕ—(ಗೆದ್ದೆನೆಂಬ ಆತ್ಮವಿಶ್ವಾಸದಿಂದ, ಹೊತ್ತುಕೊಂಡಿರುವ ತಟ್ಟೆಗಳನ್ನು ಸಮ್ರಾಟರ ಮುಂದಿಡುವಂತೆ ಸೇವಕರಿಗೆ ಸನ್ನೆ ಮಾಡುವನು.) ಅಲ್ಪ ಕಾಣಿಕೆ ಸ್ವೀಕರಿಸಬೇಕು ! (ಸೇವಕರು ಮಖಮಲ್ಲಿನ ಹೊದಿಕೆಯನ್ನು ಎತ್ತುವರು. ಒಂದರಲ್ಲಿ ಫಲಪುಷ್ಪಗಳು, ಇನ್ನೊಂದರಲ್ಲಿ ಹೊಳೆಯುವ ಮುತ್ತು ರತ್ನಗಳು.)

ಖಿಜರ್‌ಖಾನ್—ಸೇಠ್ ! ಇಂಥದು ನಿನ್ನ ಭಂಡಾರದಲ್ಲಿ ಇನ್ನು ಎಷ್ಟಿದೆ ?

ವರ್ತಕ—ಇದ್ದುದೆಲ್ಲಾ ಇಷ್ಟೇ. ಖಾವಂದರಿಗೆ ಒಪ್ಪಿಸಿದೇನೆ.

ಪೀರ್ ಮಹಮ್ಮದ್— ನಮ್ಮ ದಂಡಿಗೆ ಆಹಾರ ಸರಬರಾಜುಮಾಡಲು ತನ್ನನ್ನು ನೇಮಿಸುವಂತೆ ಈ ವರ್ತಕ ಕೇಳುತಿದಾನೆ.

ವರ್ತಕ—ಯಾವ ದಂಡು ಬಂದರೂ ಸರಿಯೆ ಅದಕ್ಕೆ ಆಹಾರ ಪೂರೈಕೆ ಮಾಡುವುದು ನಮ್ಮ ಕಸಬು, ಬಾದಶಹ.

ತೈಮೂರ—ಒಂದು ಲಕ್ಷದಷ್ಟಿರುವ ನನ್ನ ಸೈನ್ಯಕ್ಕೆ ಬೇಕಾಗುವ ಆಹಾರಧಾನ್ಯ ಈತ ಸರಬರಾಜು ಮಾಡುತಾನೋ ?

ವರ್ತಕ—ಈ ಬಗ್ಗೆ ಸನ್ನಿಧಾನ ನಿಶ್ಚಿಂತೆಯಿಂದಿರಬಹುದು.

ಪೀರ್ ಮಹಮ್ಮದ್—ಒಂದೇ—ಹಣವನ್ನು ಝಣ ಝಣ ಎಣಿಸಿ ಈತನಿಗೆ ಕೊಡಬೇಕು !

ತೈಮೂರ—ಹೊಹ್ಹೋ ! ಹಾಗೋ ! ಈಗಿಂದೀಗ ಆಹಾರ ಧಾನ್ಯ ಒದಗಿಸ ಬಲ್ಲೆಯೊ ?

ವರ್ತಕ—ಆ ಬಗ್ಗೆ ಚಿಂತೆಯೇ ಬೇಡ, ಬಾದಶಹ.

ತೈಮೂರ—(ರೇಗಿ) ಕತ್ತೆ ! ನಾವು ಹಣ ಕೊಟ್ಟರೆ ನೀನು ಕಾಳು ಕೊಡು ತೀಯೊ ? ಕಟ್ಟಿಹಾಕಿ ಎಳೆದುಕೊಂಡು ಹೋಗಿ ಇವನನ್ನು ! ಈತ ಬಚ್ಚಿಟ್ಟಿರುವ ದವಸ ಧಾನ್ಯಗಳನ್ನೆಲ್ಲ ಹೊರತೆಗೆಯಿರಿ ! ಬಾಯಿಬಿಡದೆ ಕಣ್ಣು ಮುಚ್ಚಾಲೆಯಾಡಿದರೆ ತುಂಡು ತುಂಡಾಗಿ ಕತ್ತರಿಸಿ ಚೆಲ್ಲಿ !

ವರ್ತಕ—ಬಾದಶಹ ! ಬಾದಶಹ !

(ತೈಮೂರನ ಇಬ್ಬರು ಸೈನಿಕರು ಚೀರುತ್ತಿರುವ ವರ್ತಕನನ್ನು ಎಳೆದೊಯ್ಯು ವರು. ವರ್ತಕನ ಸೇವಕರು ಎದುರು ದಿಕ್ಕಿನಲ್ಲಿ ಓಡಿಹೋಗುವರು.)

ತೈಮೂರ—ಈ ತಟ್ಟಿಗಳನ್ನು ಆಚೆಗೆ ಒಯ್ಯಿರಿ ! (ತೈಮೂರನ ಸೈನಿಕನೊಬ್ಬ ತಟ್ಟಿಗಳನ್ನು ಒಯ್ಯುತ್ತಿರಲು) ಸೇನಾನಿಗಳೇ ! ನಮ್ಮ ಜೈತ್ರಯಾತ್ರೆಯ ಮೊದಲ ಹಂತವನ್ನು ದಾಟಿದ ಹಾಗಾಯಿತು. ಇನ್ನು ಉಳಿದಿರುವುದು ಎರಡನೆಯ ಹಂತ. ದಿಲ್ಲಿ ನಮ್ಮ ಸ್ವಾಧೀನವಾಯಿತೆಂದರೆ ಇಡಿಯ ಹಿಂದೂಸ್ಥಾನವೇ ಆ ವರ್ತಕ ಮಾಡಿದ ಹಾಗೆ ನಮ್ಮ ಕಾಲಿಗೆ ಬೀಳು ತದೆ. ಈಗ ಸೇನೆಯನ್ನು ಮತ್ತೊಮ್ಮೆ ಇಬ್ಭಾಗಿಸುತೇವೆ. ಒಂದು ಭಾಗ ಯುವರಾಜ ಷಾ ರುಖ್ ಹಾಗೂ ಖಿಜರ್ ಖಾನರ ನೇತೃತ್ವದಲ್ಲಿ ದೀಪಾಲ್‌ಪುರದ ಮಾರ್ಗವಾಗಿ ಮುಂದುವರಿಯುತದೆ. ಇನ್ನೊಂದು ಭಾಗ ನಮ್ಮ ನಾಯಕತ್ವದಲ್ಲಿ ಮುಂದೆ ಸಾಗುತದೆ. ಯಮುನಾ ತಟದಲ್ಲಿ ನಾವು ಒಟ್ಟುಗೂಡುತೇವೆ. ಕೇಳಿಸಿತೆ ರುಖ್ ?

ಷಾ ರುಖ್— ಅಪ್ಪಣೆ, ಅಬ್ಬಾಜಾನ್.

ತೈಮೂರ— ಪೀರ್, ಖಿಜರ್, ಸರಿಯೆ ಏರ್ಪಾಟು?

ಪೀರ್ ಮಹಮ್ಮದ್ ಖಿಜರ್‌ಖಾನ್—(ಒಟ್ಟಿಗೆ) ಯೋಗ್ಯವಾಗಿದೆ, ಬಾದಶಹ.

ತೈಮೂರ— ನಮ್ಮ ಸೈನಿಕರಿಗೆ ಮುಂದಟ್ಟು ಮಾಡಿಕೊಡಿ. ದಿಲ್ಲಿ ಕೈವಶವಾಗುವ ವರೆಗೂ ಒಬ್ಬನೇ ಒಬ್ಬನೂ ಮೈಮರೆಯಬಾರದು. ಜಾತಿ ಪಂಥ ಮತ ಧರ್ಮಗಳ ವ್ಯತ್ಯಾಸವಿಲ್ಲದೆ, ಕೈಗೆ ಸಿಕ್ಕ ಈ ನೆಲದ ಗಂಡು ಸಂತಾನವನ್ನೆಲ್ಲ ಸಂಹರಿಸಬೇಕು. ನಮ್ಮವರು ಒಟ್ಟಿದ ರುಂಡಗಳ ರಾಶಿ ಮಹಾ ಪರ್ವತವಾಗಬೇಕು. ಹೆಂಗಸರು ಮಕ್ಕಳಿಗೆಲ್ಲ ಬಂಧನ! ಹೊಲಗಳಿಗೆ ಕೊಳ್ಳಿ! ಎಲ್ಲ ಸಂಪತ್ತಿನ ಸೂರೆ! ನಮ್ಮ ಸೇನೆ ತುಳಿದ ನೆಲ ಸ್ಮಶಾನವಾಗಬೇಕು.

(ನೇಪಥ್ಯದಲ್ಲಿ 'ನಮ್ಮನ್ನು ಬಿಡಿರಿ! ಬಿಡಿರಿ!' ಎಂಬ ದರ್ಪದ ಆಕ್ರೋಶ. ಸೈನಿಕರು ಬೈರಾಗಿಯೊಬ್ಬನನ್ನು ಹಿಡಿದು ತರುತ್ತಾರೆ.)

ಏನಿದು? ಯಾರಿವನು?

ಸೈನಿಕ— ನಮ್ಮ ಸೈನ್ಯದ ಮಧ್ಯೆ ಸುಳಿದಾಡುತಿದ್ದ. ಗೂಢಚಾರನಿರಬಹುದು ಎಂಬ ಶಂಕೆ.

ಪೀರ್ ಮಹಮ್ಮದ್— ಏಯ್ ಫಕೀರ್! ಹಿಂದೂಸ್ಥಾನವನ್ನು ಮುಕ್ತಗೊಳಿಸುತ್ತಿರುವ ಮಹಾ ಮಂಗೋಲ ಸಮ್ರಾಟರಿಗೆ ವಂದಿಸು.

ಬೈರಾಗಿ—(ತ್ರಿಶೂಲದ ಝಣತ್ಕಾರದೊಡನೆ) ಜಯ ಭಗವತಿ!

ಖಿಜರ್ ಖಾನ್— ಕಿವುಡನೇನಯ್ಯ ನೀನು?

ಬೈರಾಗಿ— ನಾವು ವಂದಿಸುವುದೇ ಹೀಗೆ!

ತೈಮೂರ— ಕತ್ತೆ! ನಮ್ಮ ಶಿಬಿರದಲ್ಲಿ ಏನು ಮಾಡುತಿದ್ದೆ?

ಬೈರಾಗಿ— ನಾಳೆ ಏನಾಗುತದೆ ಎಂದು ತಿಳಿಯುವುದಕ್ಕೋಸ್ಕರ ಸಮ್ರಾಟ ತೈಮೂರ ಖಾನರನ್ನು ಹುಡುಕುತಿದ್ದೆವು.

ತೈಮೂರ— ಉದ್ಧಟ! ನಮ್ಮನ್ನು ಹುಡುಕಿಕೊಂಡು ಬಂದೆಯಾ?

ಬೈರಾಗಿ—

ಗಂಗೇ ಚ ಯಮುನೇ ಚೈವ
ಗೋದಾವರಿ ಸರಸ್ವತಿ
ನರ್ಮದೇ ಸಿಂಧು ಕಾವೇರಿ
ಜಲೇಸ್ಮಿನ್ ಸನ್ನಿಧಿಂ ಕುರು

ಖಿಜರ್ ಖಾನ್— ಏಯ್! ಅದೇನು ಬೊಗಳುತಿದೀಯಾ ?

ಬೈರಾಗಿ— ಹಿಂದೂಸ್ಥಾನದ ಎಲ್ಲ ಪವಿತ್ರ ನದಿಗಳಲ್ಲೂ ಮಿಂದು ಶುಚಿರ್ಭೂತರಾಗಿದೇವೆ. ಎಲ್ಲಿ, ಸಮ್ರಾಟರ ಅಂಗೈ! ಅದನ್ನ ನೋಡಿ, ನಾಳೆ ಆಗುವುದನ್ನು ಹೇಳುತೇವೆ.

ಶೇರ್ ಮಹಮ್ಮದ್— ನಿನ್ನ ತ್ರಿಶೂಲ ಇಲ್ಲಿ ಕೊಡು.

ಬೈರಾಗಿ— ಬೈರಾಗಿಯ ತ್ರಿಶೂಲ ಕಂಡರೆ ಸಮ್ರಾಟರಿಗೆ ಭಯವೇ ?

ಸಮ್ರಾಟ— ಅಂಗೈ ನೋಡಿ ಭವಿಷ್ಯ ಹೇಳುತಾನಂತೆ! (ತನ್ನ ಎಡ ಅಂಗೈಯನ್ನು ಮುಂದೆ ಚಾಚಿ) ನೋಡು!

ಬೈರಾಗಿ— ಇದಲ್ಲ, ಅದು. (ತೈಮೂರ ಬಲಗೈ ನೀಡಲು) ಜಯ ಭಗವತಿ!
(ಸಮೀಪ ಸರಿದು, ರೇಖೆಗಳನ್ನು ದಿಟ್ಟಿಸುತ್ತ)
ನಿಮ್ಮ ಯಶೋರೇಖೆಗೆ ಪರಿಮಿತಿಯೇ ಇಲ್ಲ.

ಸಮ್ರಾಟ— ದಿಲ್ಲಿ ನಮ್ಮ ವಶವಾಗುತದೋ ?

ಬೈರಾಗಿ—ಅದರಲ್ಲೇನು ಸಂದೇಹ?

ಸಮ್ರಾಟ— ಮತ್ತೇನು ಕಾಣುತದೆ ?

ಬೈರಾಗಿ—ಧನರೇಖೆ ಬಲವಾಗಿದೆ. ಲೋಕದ ಐಶ್ವರ್ಯವೆಲ್ಲ ನಿಮ್ಮ ರಾಜಧಾನಿಯಲ್ಲಿ ಹೆಪ್ಪುಗಟ್ಟಿದೆ.

ಸಮ್ರಾಟ—ಭವಿಷ್ಯದ್ದು ಹೇಳು.

ಬೈರಾಗಿ— ಹೃದಯ ರೇಖೆ ತುಸು ವಕ್ರವಾಗಿ ನಿಮ್ಮನ್ನು ಪರಿಹಾಸ್ಯ ಮಾಡುತಾ ಇದೆ.

ತೈಮೂರ—ಜೋಕೆ! ಯಾರ ಹತ್ತಿರ ಮಾತನಾಡುತಾ ಇದ್ದೀ ಅನ್ನುವುದು ನೆನಪಿರಲಿ!

ಬೈರಾಗಿ— ಈ ಜೀವಕ್ಕೆ ಯಾರ ಭಯವೂ ಇಲ್ಲ. (ಅಂಗೈ ನೋಡುತ್ತ) ನೀವು ಹಿಂದೆ ಬಿಟ್ಟು ಬಂದಿರುವ ಸಮರ್ಕಂದದಲ್ಲಿ ಶಿಲೆ ಬೆಂಕಿ ಕಾರುತದೆ. ಪರ್ವತ ಸಿಡಿಯುತದೆ. ಇನ್ನು ಆರೆಂಟು ತಿಂಗಳಲ್ಲಿ ಅಲ್ಲೋಲಕಲ್ಲೋಲವಾಗುತದೆ.

ತೈಮೂರ—(ಗಕ್ಕನೆದ್ದು) ಹಿಡಿಯಿರಿ ಇವನನ್ನು! (ಸೈನಿಕರು ಬೈರಾಗಿಯನ್ನು ಬಂಧಿಸುವರು, ರಾಜಕುಮಾರನೂ ಸೇನಾನಿಗಳೂ ಏಳುವರು.) ಈತ ಹುಚ್ಚನೇ

ಇರಲಿ, ಗೂಢಚಾರನೇ ಇರಲಿ, ಇದು ಅಯೋಗ್ಯ ಸಹವಾಸ. ಶಿಬಿರಕ್ಕೆ ಹೋಗೋಣ. ಎಲ್ಲಿ ಕುದುರೆಗಳು ?

ಪೀರ್ ಮುಹಮ್ಮದ್—ಈ ಕಡೆಗೆ ದಯಮಾಡಿಸಬೇಕು.

(ತೈಮೂರನೂ ರಾಜಕುಮಾರನೂ ಸೇನಾನಿಗಳು ಬಂದ ದಿಕ್ಕಿನತ್ತವೇ ಸಾಗುವರು.)

ಬೈರಾಗಿ—ಬಿಡಿರೋ ನನ್ನನ್ನು ! ಜಯ ಭಗವತಿ !

ಸೈನಿಕ—ಊಹೂಂ. ನಮ್ಮ ಅಂಗೈ ನೋಡಿ ಹೇಳುತೀಯಾ ?

(ಮೂವರು ಸೈನಿಕರೂ ಏಕಕಾಲದಲ್ಲೇ ಅಂಗೈಗಳನ್ನು ಚಾಚುವರು.)

ಬೈರಾಗಿ—ಸರಿ. ಆಗ್ರಹ ತೊಡವಿರಾದರೆ ನೋಡುತೇನೆ . . . . ಎಲ್ಲಿ, ಕಣ್ಣು ಮುಚ್ಚಿಕೊಂಡು ದೇವರ ಸ್ಮರಣೆ ಮಾಡಿ.

(ಸೈನಿಕರು ಕಣ್ಣು ಮುಚ್ಚಿಕೊಳ್ಳುವರು. ಬೈರಾಗಿ, 'ಜಯ ಭಗವತಿ!' 'ಜಯ ಭಗವತಿ!' ಎಂದು ತ್ರಿಶೂಲವನ್ನು ಝಳಪಿಸುತ್ತ ನೇಪಥ್ಯದತ್ತ ಓಡುವನು. ಸೈನಿಕರು ಕಣ್ಣು ತೆರೆದು 'ಫಕೀರ್ ! ನಿಲ್ಲು!' ಎನ್ನುತ್ತ ಅವನ ಹಿಂದೆ ಧಾವಿಸುವರು. ನೇಪಥ್ಯದಲ್ಲಿ ಬೈರಾಗಿಯ 'ಹಾಯ್' 'ಹಾಯ್' ಚೀತ್ಕಾರದೊಂದಿಗೆ ತೆರೆ ಸರಿಯುವುದು.)

ದೃಶ್ಯ ೪

[ಸಮರ್ಕಂದದಲ್ಲಿ ಅಂತಃಪುರ. ಹಿಂದೂಸ್ಥಾನದಿಂದ ಬಂದಿರುವ ತೈಮೂರನ ಓಲೆಕಾರ ಸಮ್ರಾಜ್ಞಿಯ ಸಮ್ಮುಖದಲ್ಲಿ ನಿಂತಿದ್ದಾನೆ. ಪ್ರಾರ್ಥನಾಮಂದಿರದ ಹಾಗೂ ಕಮಾನು ಕಂಬಗಳ ಮಾದರಿಯನ್ನು ಎದುರಿಗಿಟ್ಟುಕೊಂಡು ಹಾನಿಮ್ ಕುಳಿತಿದ್ದಾಳೆ. ಅಮಿನಾ ಜಾಲಂದ್ರಕ್ಕೆ ಬೆನ್ನುಮಾಡಿ ನಿಂತಿದ್ದಾಳೆ.]

ಹಾನಿಮ್—(ಓಲೆಕಾರನೊಡನೆ) ಶುಭವಾರ್ತೆಗಳನ್ನು ತಂದಿದೀಯೇ, ಓಲೆಕಾರ. ನಾವು ಸಂತುಷ್ಟರಾಗಿದೇವೆ.

ಓಲೆಕಾರ—ನಮ್ಮ ದಂಡು ಸಿಂಧೂನದಿಯನ್ನು ದಾಟಿದ ಮೇಲೆ ನಾನು ಈಚೆಗೆ ಬಂದೆ. ಬಾದಶಹರೂ ರಾಜಕುಮಾರರೂ ದೋಣಿ ಹತ್ತುತಾ ಇದ್ದರು. ಆಗ ನನ್ನನ್ನು ಬಾದಶಹರು ಕರೆದು, ದಂಡೆಯಾತ್ರೆ ಅತ್ಯಂತ ಸುಗಮವಾಗಿ ಸಾಗುತಾ ಇದೆ-ಅಂತ ಸಮ್ರಾಜ್ಞಿಗೆ ತಿಳಿಸು, ಎಂದರು.

ಹಾನಿಮ್—(ನಿರ್ವಿಕಾರ ಧ್ವನಿಯಲ್ಲಿ) ರಾಜಕುಮಾರ ಮರಳಿ ಬಂದಾಗ ಆತನ ಗುರುತು ನನಗೆ ಖಂಡಿತ ಸಿಗಲಾರದು. ಮಗ ತಂದೆಯ ಪ್ರತಿರೂಪ ವಾಗುತಾನೆ.

ಅಮಿನಾ—ದಾರಿಯಲ್ಲಿ ನಮ್ಮವರಿಗೆ ಯಾವ ತೊಂದರೆಯೂ ಆಗಲಿಲ್ಲವೆ ?

ಓಲೆಕಾರ—(ಅಮಿನಾ ಸೇವಕಿ ಎಂಬ ಕಾರಣದಿಂದ ಪ್ರಶ್ನೆಗೆ ಮಹತ್ವ ನೀಡದೆ, ಆ ಕಡೆಗೆ ನೋಡದೆ, ಚುಟುಕಾಗಿ) ಇಲ್ಲ.

ಹಾನಿಮ್—ಯಾವ ತೊಂದರೆ ? ರಕ್ತದ ಕಾಲಿವೆ ಹರಿಸುತಾರೆ ; ಅದರಲ್ಲಿ ತೇಲಿ ಈಸಿ ಮುಂದೆ ಹೋಗುತಾರೆ. ನದಿಗಳಲ್ಲಿ ಮಿಾಯುತಾರೆ ; ಉರಿಬಿಸಿಲಲ್ಲೋ ಊರುಗಳಿಗೆ ಹಚ್ಚಿದ ಬೆಂಕಿಯಲ್ಲೋ ಮೈ ಕಾಯಿಸಿ ಕೊಳ್ಳುತಾರೆ. ವೈರಿಯ ರುಂಡಗಳು ಇವರ ಕಾಲ್ಚೆಂಡುಗಳಾಗುತವೆ. ಇಡಿಯ ದೇಶವೇ ಆಟದ ಬಯಲಾಗುತದೆ. ಅಲ್ಲವೇನಪ್ಪ ?

ಓಲೆಕಾರ—ಹೌದು, ಸಮ್ರಾಜ್ಞಿ.

ಹಾನಿಮ್—ನೀನು ಹೋಗಿನ್ನು. ನಾನು ಹೇಳಿದೆ ಎಂದು ಅರಮನೆಯ ಅಧಿ ಕಾರಿಗೆ ತಿಳಿಸಿ, ನೂರು ಹೊನ್ನು, ದವಸ ಧಾನ್ಯ, ಬಟ್ಟೆ ಬರೆ ಪಡೆದು ಕೊಂಡು ಹೋಗು.

ಓಲೆಕಾರ—(ಸಂತೃಪ್ತನಾಗಿ) ಅಪ್ಪಣೆ (ನಿಷ್ಕ್ರಮಣ).

ಅಮಿನಾ—(ಸಮ್ರಾಜ್ಞಿಯನ್ನು ಸಮಿಾಪಿಸಿ) ಎಷ್ಟೊಂದು ಶಾಂತವಾಗಿದೀರಿ ! ಹಿಂದೆ ಯುದ್ಧಭೂಮಿಯಿಂದ ಓಲೆಕಾರರು ಬಂದಾಗ ಹೇಗಿರುತಿದ್ದಿರಿ ! ಅಲ್ಲದೆ, ಆಗ ಓಲೆಕಾರನಿಗೆ ಕೊಡುತಿದ್ದುದು ಹತ್ತೇ ಹೊನ್ನು ಎಂದು ನೆನವು.

ಹಾನಿಮ್—ಅಮಿನಾ, ನೀನು ಹೇಳುವುದು ನಿಜ. ಹಿಂದೆ ಸಮ್ರಾಟರು ಹೋದಾಗಲೆಲ್ಲ ಒಮ್ಮೊಮ್ಮೆ ವಿನಾಕಾರಣ ಹೃದಯ ಹೊಡೆದು ಕೊಳ್ಳುತಿತ್ತು. ಈ ಸಲವಂತೂ ರಾಜಕುಮಾರನೂ ತಂದೆಯ ಜೊತೆ ಹೋಗಿದಾನೆ. ಆದರೂ ನನಗೆ ಯಾವ ಕಳವಳವೂ ಇಲ್ಲ.

ಅಮಿನಾ—ಇದು ಯಾಕೆ ಹೀಗೆ ಅಂತ ನಾನು ಬಲ್ಲೆ.

ಹಾನಿಮ್—ಹೌದೆ ? ಯಾಕೆ, ಹೇಳು.

ಅಮಿನಾ—ಈ ಸಲ ನಿಮ್ಮ ಮನಸ್ಸು ತಲ್ಲೀನವಾಗಿದೆ.

ಹಾನಿಮ್—ಯಾವುದರಲ್ಲಿ ?

ಅಮೀನಾ—ಪ್ರಾರ್ಥನಾ ಮಂದಿರದ ನಿರ್ಮಾಣ ಕಾರ್ಯದಲ್ಲಿ.

ಹಾನಿಮ್— ನಿಜವೆನ್ನು.

ಅಮೀನಾ— ಅಲ್ಲದೆ, ಆ ಶಿಲ್ಪಿ—

ಹಾನಿಮ್—(ಬೆಚ್ಚಿ) ಏನೆಂದೆ ?

ಅಮೀನಾ—(ತುಂಟನಗೆಯನ್ನು ಹತ್ತಿಕ್ಕಿ) ಆ ಶಿಲ್ಪಿ ನಿಜವಾಗಿಯೂ ದಕ್ಷ.

ಹಾನಿಮ್— ಸಂಶಯವಿಲ್ಲ.

ಅಮೀನಾ—ಎಂಥ ಸ್ಫುರದ್ರೂಪಿ ! ಎಂಥ ಬಲಿಷ್ಠ, ನೀಳ, ಬಾಹುಗಳು ! ಎಷ್ಟೊಂದು ಎತ್ತರದ ನಿಲುವು !

ಹಾನಿಮ್—ಆದರೆ ಸ್ವಲ್ಪಮಟ್ಟಿಗೆ ಅಹಂಕಾರಿ.

ಅಮೀನಾ—ಸ್ವತಃ ತಾನೇ ಸಮ್ರಾಟನೇನೋ ಎನ್ನುವ ಹಾಗಿರುತಾನಪ್ಪ !

ಹಾನಿಮ್—(ರೇಗುತ್ತ) ಅಮೀನಾ ! ಉದ್ದ ಬೆಳೆಯಿತು ನಿನ್ನ ನಾಲಿಗೆ !

ಅಮೀನಾ—ನಾನು ಹೇಳಿದ್ದರಲ್ಲಿ ಅನೃತವುಂಟೆ, ಸಮ್ರಾಜ್ಞಿ ?

ಹಾನಿಮ್—(ಮತ್ತಷ್ಟು ರೇಗಿ) ಅಮೀನಾ ! ನಿಲ್ಲಿಸು ! ಮಾತು ನಿಲ್ಲಿಸು !

ಅಮೀನಾ—(ಧ್ವನಿ ಕುಗ್ಗಿಸಿ) ತಪ್ಪಾಯಿತು. ಕ್ಷಮಿಸಿ !

ಹಾನಿಮ್—(ಒಲವು ತುಂಬಿದ ಧ್ವನಿಯಲ್ಲಿ) ಅಮೀನಾ, ಇಗೋ ನೋಡು ! ಶಿಲ್ಪಿ ಕಳುಹಿಸಿರುವ ಈ ಮಾದರಿ ಎಷ್ಟು ಮೋಹಕವಾಗಿದೆ ! ಗಗನ ಚುಂಬಿ ಸ್ತಂಭಗಳು. ಮೇಲೆ ನೀಲಿ ಆಕಾಶ. ಸುತ್ತಲೂ ದೃಷ್ಟಿ ಹರಿಯುವವರೆಗೂ ಹಸುರು. ಈ ಕಡೆಗೆ ಆಳ ಅರಿಯದ ಕಣಿವೆ. ಜಗತ್ತಿನಲ್ಲಿ ಇಂಥದು ಇನ್ನೊಂದು ಇರುತದೆಯೆ, ಅಮೀನಾ ?

ಅಮೀನಾ—ಇಲ್ಲ, ಒಡತಿ. ಇದು ನಿಮ್ಮ ಸ್ವಪ್ನ ಮಂದಿರ. ಬೆಳಕಾದಾಗ ಇಡಿಯ ಲೋಕವೇ ತಲೆದೂಗುತದೆ.

ಹಾನಿಮ್—ಅಮೀನಾ, ನನ್ನ ಹೃದಯದ ಅಂತರಾಳದ ಒಂದು ಆಸೆ, ಹೇಳಲೆ ? ಈ ಮಹಾನ್ ಮಂದಿರವನ್ನು ನೋಡಿದ ಮೇಲೆ ಸಮ್ರಾಟರು, ಇನ್ನು ಬೇಡ ದಂಡಯಾತ್ರೆ, ಭೂಮಿಯ ಮೇಲಣ ಈ ಸ್ವಪ್ನನಗರದಲ್ಲೇ ದಿನ ಕಳೆಯೋಣ—ಎನ್ನುವ ಹಾಗಾಗಬೇಕು. ರಾಜಕುಮಾರ ಸೂತ್ರಗಳನ್ನು ವಹಿಸಿಕೊಂಡು, ಪ್ರಜಾಕೋಟಿಯನ್ನು

ಸುಖದಲ್ಲಿರಿಸಿ, ರಾಜ್ಯಭಾರ ಮಾಡುವಂತಾಗಬೇಕು.

ಅಮೀನಾ—ನಿಮ್ಮ ಆಸೆ ಈಡೇರಲಿ ಎನ್ನುವುದೊಂದೇ ನನ್ನ ಪ್ರಾರ್ಥನೆ, ಸಮ್ರಾಜ್ಞಿ.

(ಹಾನಿಮ್ ತಲ್ಲೀನತೆಯಿಂದ ಶಿಲ್ಪಮಾದರಿಯನ್ನು ನೋಡುತ್ತ ಇರುವಂತೆಯೇ ತೆರೆ.)

ದೃಶ್ಯ ೫

[ಎರಡನೆಯ ದೃಶ್ಯದಲ್ಲಿದ್ದಂತೆಯೇ ರಂಗಸಜ್ಜಿಕೆ. ಪ್ರವೇಶದ್ವಾರದಲ್ಲಷ್ಟೇ ಬೆಳಕು. ಶಸ್ತ್ರಪಾಣಿಯಾಗಿ ಪ್ರತಿಮೆಯಂತೆ ನಿಂತುಕೊಂಡಿರುವ ಕಾವಲುಗಾರ. ಇತ್ತ ಎತ್ತರದ ಮೇಲೆ ಹೊರಗೆ ನೋಡುತ್ತ ನಿಂತಿರುವ, ಸುಲ್ತಾನ ಹಾಗೂ ಅಮಾತ್ಯ.

ತೆರೆ ಸರಿದಂತೆ ಪ್ರವೇಶದ್ವಾರದಲ್ಲಿ ಕುದುರೆಗಳ ಕೆನೆದಾಟ.]

ಕಾವಲುಗಾರ—(ಗದರುತ್ತ) ಏಯ್! ಯಾರೋ ಅದು? ಏನಯ್ಯ ಗದ್ದಲ?

(ಏದುಸಿರು ಬಿಡುತ್ತಿರುವ ಬೇಹುಗಾರ ಕಾಣಿಸಿಕೊಳ್ಳುವನು.)

ಬೇಹುಗಾರ—ಒಳಕ್ಕೆ ಬಿಡು! ಸುಲ್ತಾನರು–ಅಮಾತ್ಯರು....

ಕಾವಲುಗಾರ—ಇಲ್ಲೇ ಇದಾರೆ. ಏನು ಸಮಾಚಾರ?

ಬೇಹುಗಾರ—(ಇನ್ನೂ ಏದುಸಿರು) ಬಿಡು! ಒಳಗೆ ಬಿಡು!

ಕಾವಲುಗಾರ—ಇದೇನು ಧರ್ಮಛತ್ರ ಕೆಟ್ಟು ಹೋಯ್ತು? ನೀನು ಯಾರು ಅಂತ ಮೊದಲು ಹೇಳು.

ಬೇಹುಗಾರ—ಬೇಹುಗಾರ. ಬಿಡಪ್ಪ, ಒಳಕ್ಕೆ.

ಕಾವಲುಗಾರ—ಬೇಹುಗಾರ! ನಮ್ಮ ರಾಜ್ಯಯಂತ್ರದ ಕೀಲಿ. (ಬದಿಗೆ ಸರಿದು) ಹೋಗು ಒಳಕ್ಕೆ, ಅಲ್ಲಿದ್ದಾರೆ.

ಬೇಹುಗಾರ—(ಒಳಕ್ಕೆ ಧಾವಿಸಿದವನು ಎತ್ತರವನ್ನು ಹತ್ತಲಾರದೆ ಕುಸಿದು ಬೀಳುವನು.) ಯಾ ಅಲ್ಲಾ!

ಕಾವಲುಗಾರ—(ಯಾವ ಭಾವೋದ್ವೇಗವೂ ಇಲ್ಲದೆ) ಏಯ್ ಝುಲ್‌ಫಿಖರ್, ಬೇಹುಗಾರ ಮೂರ್ಛೆ ಹೋಗಿದಾನೆ. ನೀರು ತಾ.

ಮಲ್ಲೂ—(ಎತ್ತರದ ಮೇಲಿಂದ ಕೆಳಕ್ಕೆ ನೋಡಿ) ಗೂಢಚಾರ ಬಂದಿದಾನೆ ಅಂತ ಕಾಣುತ್ತದೆ.

ಮಹಮ್ಮದ್ ಷಾ—ಹೋಗಿ ನೋಡೋಣವೆ ?

ಮಲ್ಲೂ—ನಡೆಯಿರಿ.

(ಝುಲ್‌ಫಿಖರ್ ನೀರಿನೊಡನೆ ಧಾವಿಸಿ ಬಂದು, ಸುಮ್ಮನೆ ನಿಲ್ಲುತ್ತಾನೆ.)

ಮಲ್ಲೂ—ನೋಡುತಾ ನಿಂತಿದೀಯಲ್ಲ. ಅವನ ಮುಖಕ್ಕೆ ಎರಚು.

(ಝುಲ್‌ಫಿಖರ್ ಬೇಹುಗಾರನ ಮುಖಕ್ಕೆ ನೀರು ಎರಚುವನು. ಆತ ಕಣ್ಣು ತೆರೆದು ಮತ್ತೆ ಏದುಸಿರು ಬಿಡುತ್ತ "ನೀರು, ನೀರು" ಎನ್ನುವನು. ಕಾವಲುಗಾರ ಇತ್ತಕಡೆಗೆ ನೋಡುವುದೇ ಇಲ್ಲ. ಆತ ಪ್ರತಿಮೆಯಂತೆ ಶಸ್ತ್ರಪಾಣಿಯಾಗಿ ಹೊರಕ್ಕೆ ದಿಟ್ಟಿಸುತ್ತಿರುತ್ತಾನೆ.)

ಮಲ್ಲೂ—(ಬಾದಶಹನೊಡನೆ ಕೆಳಕ್ಕೆ ಬಂದು ಬೇಹುಗಾರನನ್ನು ಸಮೀಪಿಸಿ) ನೀರು ಕೊಡು ಅವನಿಗೆ.

(ಝುಲ್‌ಫಿಖರ್ ಬಾಯಿಯ ಬಳಿ ಹಿಡಿದ ಪಾತ್ರೆಯಿಂದ ಬೇಹುಗಾರ ಎರಡು ಗುಟುಕು ಕುಡಿದು, ಏಳಲು ಯತ್ನಿಸಿ, ವಿಫಲನಾಗಿ ಮಂಡಿಯೂರಿ ಹಾಗೆಯೇ ಇರುವನು.)

ಬೇಹುಗಾರ—(ಥರಥರನೆ ನಡುಗುತ್ತ) ಬಾದಶಹರು ಮನ್ನಿಸಬೇಕು.

ಮಲ್ಲೂ—ಇರಲಿ, ಬಿಡೋ. ಹಿಂದೂಸ್ಥಾನದ ಬಾದಶಹರು ಮನ್ನಿಸುತಾರೆ. ಬೊಗಳು !

ಮಹಮ್ಮದ್ ಷಾ—ಹ್ಞಾ. ಮನ್ನಿಸುತೇವೆ. ಹೇಳು.

ಬೇಹುಗಾರ—(ಮಾತಿನ ನಡುವೆ ಆಗಾಗ್ಗೆ ಮೇಲುಸಿರು ನಿಟ್ಟುಸಿರು ಬಿಡುತ್ತ) ಛಾಂಟನೀರ್ ಉರಿದು ಭಸ್ಮವಾಯ್ತು. ರಾಜಾ ಧೂಲ್‌ಚಂದನನ್ನು ವೈರಿಗಳು ಹಿಡಿದರು. ಅತ್ಯಂತ ಕರಾಳ ರೀತಿಯಲ್ಲಿ ಅವರ ಅಂಗಾಂಗಗಳನ್ನು ಕತ್ತರಿಸಿ ಕತ್ತರಿಸಿ ಕೊಂದರು.

ಮಲ್ಲೂ—ಹಿಂದೂಸ್ಥಾನದಲ್ಲಿ ಒಬ್ಬ ರಜಪೂತ ಹೇಡಿ ಕಡಮೆಯಾದ.

ಮಹಮ್ಮದ್ ಷಾ—ಯುದ್ಧ ಆಗಲೇ ಇಲ್ಲವೋ ?

ಬೇಹುಗಾರ—ಘನಘೋರ ಯುದ್ಧ.

ಮಹಮ್ಮದ್ ಷಾ—ನೀನು ಕಂಡೆಯಾ ?

ಬೇಹುಗಾರ—ಹ್ಞ, ಬಾದಶಹ. ರಜಪೂತ ಸೈನ್ಯ ವೀರಾವೇಶದಿಂದ ಹೋರಾಡಿತು. ಆದರೆ ಆಕಾಶ ಬೀಳುತ್ತಿರುವಾಗ ಅಂಗೈಯಿಂದ ತಡೆಯುವು

ದುಂಟೆ? ಒಂದೇ ಘಳಿಗೆಯ ಅವಧಿಯಲ್ಲಿ ವೈರಿಗಳು ಹತ್ತು ಸಾವಿರ ಜನರ ತಲೆ ತುಂಡರಿಸಿದ್ದನ್ನು ಕಣ್ಣಾರೆ ಕಂಡೆ.

ಮಲ್ಲೂ—ಹೆದರಿಕೊಂಡೆಯೇನೊ ಹುಚ್ಚ?

ಬೇಹುಗಾರ—(ತನ್ನ ಮಾತಿನ ಜಾಡಿನಲ್ಲೇ ಮುಂದುವರಿಯುತ್ತ) ಎಲ್ಲ ಸ್ತ್ರೀಯರೂ ಕೋಟೆಯೊಳಗೆ ಬೆಂಕಿಗೆ ಹಾರಿದರು. ಎಷ್ಟೋ ವರ್ಷಗಳಿಂದ ಕೂಡಿಟ್ಟ ದವಸಧಾನ್ಯ ಸೂರೆಯಾಯ್ತು. ಎಲ್ಲ ಸಂಪತ್ತನ್ನೂ ಅವರು ದೋಚಿದರು.

ಮಹಮ್ಮದ್ ಷಾ—ಸೈತಾನನ ಸಂತಾನವೇ ಇರಬೇಕು ಈ ತೈಮೂರ!

ಬೇಹುಗಾರ—(ಮಾತು ಮುಂದುವರಿಸುತ್ತ) ವೈರಿ ಸೈನ್ಯ—

ಮಲ್ಲೂ—(ಅರ್ಧಕ್ಕೇ ತಡೆದು) ಎಚ್ಚರಾಗು! ಈಗ ಅವರೆಲ್ಲಿದಾರೆ?

ಬೇಹುಗಾರ—ಅದನ್ನೇ ಹೇಳಹೊರಟೆದ್ದೆ. ಸರಸ್ವತೀ ನಗರವನ್ನು ವೈರಿ ಸೈನ್ಯ ಹಿಡಿಯಿತು. ಸಮಾನ ಪಟ್ಟಣದ ಹತ್ತಿರ ತೈಮೂರನ ದಂಡೂ ಅವರ ಯುವರಾಜನ ದಂಡೂ ಒಟ್ಟಾದುವು.

ಮಹಮ್ಮದ್ ಷಾ—ಮುಂದೆ?

ಬೇಹುಗಾರ—ಈಗ ಪಾಣಿಪತ್ತಿನ ದಾರಿಯಾಗಿ ದಿಲ್ಲಿಯ ಕಡೆಗೆ—

ಮಹಮ್ಮದ್ ಷಾ—(ಗಾಬರಿಗೊಂಡು) ದಿಲ್ಲಿಯ ಕಡೆಗೆ!?

ಬೇಹುಗಾರ—ಅವರ ಮಹಾ ಸೈನ್ಯ ಬರುತಾ ಇದೆ.

ಮಹಮ್ಮದ್ ಷಾ—ಯಾ ಅಲ್ಲಾ!

ಮಲ್ಲೂ—ಇನ್ನೂ ಏನಾದರೂ ಹೇಳುವುದಕ್ಕಿದೆಯೊ?

ಬೇಹುಗಾರ—ಇಲ್ಲ....(ಇಷ್ಟು ನುಡಿದು, ಕತ್ತು ಜೋತು, ಅವನು ಕುಸಿದು ಬೀಳುವನು. ಝುಲ್‌ಫಿಖರ್ ಅವನಿಗೆ ನೀರು ಕುಡಿಸಲು ನೋಡುವನು. ಬೇಹುಗಾರ ಜೀವದಿಂದಿಲ್ಲ ಎಂಬುದು ಮನವರಿಕೆಯಾದೊಡನೆಯೇ ಝುಲ್‌ಫಿಖರ್ "ಸತ್ತ! ಸತ್ತೇ ಹೋದ!" ಎಂದು ಕಿರಿಚುತ್ತ ನೇಪಥ್ಯದತ್ತ ಧಾವಿಸುವನು.)

(ಮಹಮ್ಮದ್ ಷಾ ಎದೆಯ ಮೇಲೆ ಕೈ ಇಟ್ಟು ಆಕಾಶದತ್ತ ನೋಡುವನು.)

(ಬಾಗಿಲಲ್ಲಿರುವ ಕಾವಲುಗಾರ ಈಗಲೂ ಚಲಿಸುವುದಿಲ್ಲ.)

ಮಲ್ಲೂ—ಬಾದಶಹ! ಇನ್ನು ಯೋಚಿಸುವುದಕ್ಕೆ ಸಮಯವಿಲ್ಲ. ಸುತ್ತು ಮುತ್ತಲ ರಾಜ್ಯಗಳಿಗೆ ತಕ್ಷಣವೇ ನಾವು ದೂತರನ್ನು ಅಟ್ಟಬೇಕು.

ಹತ್ತು ದಿಕ್ಕುಗಳಿಂದ ನೆರವು ಪಡೆಯಬೇಕು. ತೈಮೂರನ ಪಡೆಗೆ ಮರಣಾಂತಿಕ ಪೆಟ್ಟುಕೊಟ್ಟು ದಿಲ್ಲಿಯ ಮೇಲೆ ಮಾತ್ರವಲ್ಲ; ಉಳಿದೆಲ್ಲ ರಾಜ್ಯಗಳ ಮೇಲೂ ನಮ್ಮ ಪ್ರಭುತ್ವವನ್ನು ಭದ್ರಗೊಳಿಸಬೇಕು.

ಮಹಮ್ಮದ್ ಷಾ—ನೀವು ನನ್ನಲ್ಲಿ ಧೈರ್ಯ ತುಂಬುತಿದೀರಿ, ಮಲ್ಲೂ ಇಕ್ಬಾಲ್ ಖಾನ್.

ಮಲ್ಲೂ—ನಾವು ಎಲ್ಲರಲ್ಲೂ ಧೈರ್ಯ ತುಂಬಬೇಕು, ಖಾವಂದರೇ.

ಮಹಮ್ಮದ್ ಷಾ—ನಿಜ, ಮಲ್ಲೂ.

ಮಲ್ಲೂ—ಬೇಹುಗಾರನನ್ನು ಕರೆಸೋಣ....ಏಯ್, ಯಾರಲ್ಲಿ ?

ಮಹಮ್ಮದ್ ಷಾ—ಹ್ಷ. ಏಯ್, ಯಾರಲ್ಲಿ ?

(ಬೆಳಕು ಪ್ರವೇಶದ್ವಾರದ ಮೇಲೆ ಬೀಳುವುದು.)

ಕಾವಲುಗಾರ—(ಹೊರಗೆ ನೋಡುತ್ತ) ಏಯ್, ಯಾರಲ್ಲಿ ?

[ತೆರೆ]

ದೃಶ್ಯ ೬

[ತೆರೆ ಸರಿದಾಗ ರಂಗಸ್ಥಲದ ಬಲ ಮೂಲೆಯ ಎದುರಲ್ಲಿ ಶಿಲ್ಪಿ ದಾವೂದ್ ಒರಗಿಸಿದ ಶಿಲಾಸ್ತಂಭವೊಂದರಲ್ಲಿ ಲಾಂದ್ರದ ಬೆಳಕಿನಲ್ಲಿ ಕುಸುರಿನ ಕೆತ್ತನೆಯ ಕೆಲಸ ಮಾಡುತ್ತಿದ್ದಾನೆ. ಹಿನ್ನೆಲೆಯ ಪರದೆ ಪ್ರಾರ್ಥನಾ ಮಂದಿರದ ಹಾಗೂ ಅದರ ಎದುರಿನ ಕಮಾನು ಕಂಬಗಳ ಕೆಲಸ ಅರ್ಧ ಮುಗಿದಿರುವುದನ್ನು ಪ್ರತಿಬಿಂಬಿಸುತ್ತದೆ. ಹಾಲು ಚೆಲ್ಲಿದಂತೆ ಬೆಳದಿಂಗಳು!

ಮೇನೆಯೊಂದು ಎಡಬದಿಯಿಂದ ಒಳಕ್ಕೆ ಪ್ರವೇಶಿಸುತ್ತದೆ. ಅದನ್ನು ನೋಡಿಯೂ ನೋಡದಂತೆ ಶಿಲ್ಪಿ ಕಾರ್ಯಮಗ್ನನಾಗುತ್ತಾನೆ.]

ಶಿಲ್ಪಿ ದಾವೂದ್—(ಇಳಿ ದನಿಯಲ್ಲಿ ಸ್ವಗತ) ಮತ್ತೆ ಮೇನೆ! ಬೆಳದಿಂಗಳ ರಾತ್ರಿಯಲ್ಲಿ ಇಲ್ಲಿ ಈಕೆ! (ಕೆಲಸ ನಿಲ್ಲಿಸಿ, ಪುನಃ ಅವಸರ ಅವಸರವಾಗಿ ಮುಂದುವರಿಸುವನು.)

ಅಮಿನಾ—(ಮೇನೆಯೊಳಗಿಂದ ಅಂಗರಕ್ಷಕನಿಗೆ) ಸುಲೇಮಾನ್, ಹೋಗಿ ಶಿಲ್ಪಿಯನ್ನು ಕರೆ.

ಅಂಗರಕ್ಷಕ—(ಎದುರುಗಡೆಗೆ ಸಾಗಿ ಶಿಲ್ಪಿಯ ಬಳಿ ನಿಲ್ಲುವನು.) ಶಿಲ್ಪಿವರ್ಯ ! (ಶಿಲ್ಪಿ ದಾವೂದ್ ಉತ್ತರಿಸುವುದಿಲ್ಲ.) ಶಿಲ್ಪಿವರ್ಯ !

ಶಿಲ್ಪಿ ದಾವೂದ್—ಯಾರಪ್ಪ ?

ಅಂಗರಕ್ಷಕ—ಮೇನೆ ಬಂದಿದೆ.

ಶಿಲ್ಪಿ ದಾವೂದ್—ಆಗಲೇ ನೋಡಿದೆನಲ್ಲ....(ಪುನಃ ಕೆಲಸದತ್ತ ಗಮನ)

ಅಂಗರಕ್ಷಕ—(ಆಶ್ಚರ್ಯಚಕಿತನಾಗಿ) ಸಮ್ರಾಜ್ಞಿಯವರ ಮೇನೆ !

ಶಿಲ್ಪಿ ದಾವೂದ್—(ಪರಿಹಾಸ್ಯದ ಧ್ವನಿಯಲ್ಲಿ) ಅಷ್ಟೂ ತಿಳಿಯದೆ ನನಗೆ ?

ಅಂಗರಕ್ಷಕ—(ಸಂಕೋಚಪಡುತ್ತ) ಮೇನೆಯ ಹತ್ತಿರಕ್ಕೆ ನೀವು ಬರಬೇಕಲ್ಲ ?

ಶಿಲ್ಪಿ ದಾವೂದ್—(ನಸುನಕ್ಕು) ಹಾಗೋ ? ಬರಲೇಬೇಕೋ ? ನಡಿ ! (ಉಪಕರಣಗಳನ್ನು ಕೆಳಗಿರಿಸಿ ರಂಗದ ಇನ್ನೊಂದು ಪಾರ್ಶ್ವಕ್ಕೆ ಮೇನೆಯತ್ತ ಅಂಗರಕ್ಷಕನನ್ನು ಹಿಂಬಾಲಿಸುವನು.)

ಅಂಗರಕ್ಷಕ—(ಮೇನೆಯ ಬಳಿ ನಿಂತು) ಶಿಲ್ಪಿಯವರು ಬಂದಿದಾರೆ.

ಶಿಲ್ಪಿ ದಾವೂದ್—(ನಮಿಸಿಯೂ ನಮಿಸದಂತೆ ತಲೆಯನ್ನಿಷ್ಟು ಆಡಿಸಿ) ಕರೆಸೋಣ ವಾಯಿತಂತೆ.

ಅಮೀನಾ—ಶಿಲ್ಪಿ ! ಸಮ್ರಾಜ್ಞಿಯವರು ನಿಮ್ಮ ಮೇಲೆ ಮುನಿದಿದಾರೆ.

ಶಿಲ್ಪಿ ದಾವೂದ್—ಮುನಿಸು ! ನನ್ನ ಮೇಲೆ ! ನಿಜವಾಗಿ ? (ಸರಕ್ಕನೆ ಮುಂದೆ ಹೆಜ್ಜೆ ಇಟ್ಟು ಪರದೆ ಸರಿಸುವನು. ಸುಲೇಮಾನ್ ಖಡ್ಗವನ್ನು ಒರೆಯಿಂದ ಸ್ವಲ್ಪ ಹಿರಿಯುತ್ತಾನೆ. ಆದರೆ ಶಿಲ್ಪಿಯನ್ನು ತಡೆಯುವುದಿಲ್ಲ.) ಎಲ್ಲಿ, ನೋಡೋಣ.

ಅಮೀನಾ—ಅಬ್ಬಾ ! ಪರದೆ ಸರಿಸಿದಿರಲ್ಲ ! ಏನು ಧೈರ್ಯ ! ನೋಡಿ ಆಯಿತೇನು ? (ನಕ್ಕು) ಇರುವವಳು ನಾನೊಬ್ಬಳೇ !

ಶಿಲ್ಪಿ ದಾವೂದ್—(ನಿರಾಸೆಗೊಂಡು) ದಾಸನ ಜೊತೆ ಮಾತನಾಡುವುದಕ್ಕೆ ದಾಸಿ ಸಾಕು ಎಂದು ಸಮ್ರಾಜ್ಞಿ ನಿನ್ನನ್ನೊಬ್ಬಳನ್ನೇ ಕಳುಹಿದರೋ ?

ಅಮೀನಾ—(ಮೃದು ಸ್ವರದಲ್ಲಿ) ಹಾಗಲ್ಲ. (ಧ್ವನಿ ತಗ್ಗಿಸಿ) ಪದೇ ಪದೇ ತಾವು ಮೇನೆಯಲ್ಲಿ ಇಲ್ಲಿಗೆ ಬರುವುದು ಸರಿಯಲ್ಲ ಅಂತ—

ಶಿಲ್ಪಿ ದಾವೂದ್—ಜನ ಏನನ್ನಾದರೂ ಆಡಬಹುದು ಎಂಬ ಭಯ, ಅಲ್ಲವೆ ?

ಅಮೀನಾ—ಛೆ ! ಛೆ !

ಶಿಲ್ಪಿ ದಾವೂದ್—ಏಳೆಂಟು ಸಾರಿ ಮೇನೆ ಬಂದುದನ್ನು, ಸಮ್ರಾಜ್ಞಿ ದೂರ ದಿಂದಲೇ ಕೆಲಸ ನೋಡಿ ಹೋದುದನ್ನು, ನಾನು ಕಂಡಿಲ್ಲ ಎಂದೆ ?

ಅಮಿನಾ—(ಮೋಹಕ ಕಂಠದಿಂದ) ಶಿಲ್ಪಿವರ್ಯ! ನಿಮ್ಮ ವಿಷಯದಲ್ಲಿ ಸಮ್ರಾಜ್ಞಿ ಎಷ್ಟೊಂದು ಆದರ ಭಾವನೆ ತಳೆದಿದಾರೆ ಎಂಬುದು ನಿಮಗೆ ತಿಳಿದಿದ್ದರೆ....

ಶಿಲ್ಪಿ ದಾವೂದ್—ಅಂತಹ ಭಾವನೆ ಕಟ್ಟಿಕೊಂಡು ನಾನೇನು ಮಾಡಲಿ ? ಲೋಕದ ದೃಷ್ಟಿಯಲ್ಲಿ ನಾನೊಬ್ಬ ದುಡಿಯಲು ಬಂದ ಪರದೇಶಿ.

ಅಮಿನಾ—ಉಂಟೆ ಎಲ್ಲಾದರೂ ? ಮಂಗೋಲ ಸಾಮ್ರಾಜ್ಯದಲ್ಲಿ ನೀವು ರಾಜ ಅತಿಥಿ. ಸ್ವತಃ ಸಮ್ರಾಜ್ಞಿಯವರು—

ಶಿಲ್ಪಿ ದಾವೂದ್—ಸಾಕು, ಸಾಕು ಹಗಲು ಎನ್ನದೆ ಇರುಳು ಎನ್ನದೆ ನಾನು ದುಡಿಯುತ್ತ ಇದ್ದರೂ ನನ್ನನ್ನು ಮಾತನಾಡಿಸಿದವರುಂಟೆ ?

ಅಮಿನಾ—ಇದು ಮಿಥ್ಯಾರೋಪ, ಶಿಲ್ಪಿವರ್ಯ. ನೀವು ನಿರ್ಮಿಸಿಕೊಟ್ಟ ಮಾದರಿಯ ಕೃತಿಯ ಮುಂದೆಯೇ ಸಮ್ರಾಜ್ಞಿ ಸದಾಕಾಲ ಕುಳಿತಿರುತಾರೆ ಎಂಬುದು ನಿಮಗೆ ಅರಿತಿದ್ದರೆ—

ಶಿಲ್ಪಿ ದಾವೂದ್—ದಾಸಿಯೊಬ್ಬಳ ಮುಖದಿಂದ ಇಂತಹ ಮಾತು ಕೇಳಿ ನನ್ನ ಬೆನ್ನು ನಾನೇ ತಟ್ಟಿಕೊಳ್ಳಬೇಕು, ಅಲ್ಲವೆ ?

ಅಮಿನಾ—ಏನಾದರೂ ಬೇಕೆ, ಕೇಳಿಕೊಂಡು ಬಾ—ಎಂದರು.

ಶಿಲ್ಪಿ ದಾವೂದ್—ಬೇಕಾಗದೆ ಉಂಟೆ ? ಅತ್ಯಗತ್ಯವೆನಿಸಿದಾಗ ಖಂಡಿತ ಬಂದು ಕೇಳುತೇನೆ.

ಅಮಿನಾ—ಸಂತೋಷ. ಸಮ್ರಾಟರೀಗ ಹಿಂದೂಸ್ಥಾನದಲ್ಲಿದಾರೆ. ಅವರು ವಾಪಸಾಗುವುದಕ್ಕೆ ಮುನ್ನ—

ಶಿಲ್ಪಿ ದಾವೂದ್—ಕಟ್ಟಡದ ನಿರ್ಮಾಣಕಾರ್ಯ ಮುಗಿಯಬೇಕು, ಅಲ್ಲವೆ ?

ಅಮಿನಾ—ಬಲ್ಲವರಿಗೆ ಹೆಚ್ಚು ಹೇಳಬೇಕೆ ?

ಶಿಲ್ಪಿ ದಾವೂದ್—ಇಂಥ ಸೌಧ ನಿರ್ಮಾಣದ ಕೆಲಸ, ರುಂಡಗಳ ಪಿರಮಿಡ್ಡು ಕಟ್ಟುವಷ್ಟು ಸುಲಭ ಅಂದುಕೊಂಡೆಯಾ ?

ಅಮಿನಾ—(ಕಸಿವಿಸಿಗೊಂಡು) ಸಮ್ರಾಟರ ವಿಷಯದಲ್ಲಿ ನೀವು ಹಾಗೆ ಮಾತಾಡಬಾರದು.

ಶಿಲ್ಪಿ ದಾವೂದ್—ಮಾತನಾಡುವುದಕ್ಕೂ ಇಲ್ಲಿ ನಿರ್ಬಂಧವೆಂದಾದರೆ ಈ ಮಂದಿರ ಪೂರ್ಣವಾದಂತೆಯೇ !

ಅಮೀನಾ—ಕಲ್ಲಿನಲ್ಲಿ ಕವಿತೆ ಬರೆಯುವ ಶಿಲ್ಪಿವರ್ಯ ! ಈ ದಾಸಿಯ ಪ್ರಾರ್ಥನೆ ಇಷ್ಟೆ : ಸಮ್ರಾಜ್ಞಿಯ ಮನಸ್ಸನ್ನು ನೋಯಿಸಬೇಡಿ.

ಶಿಲ್ಪಿ ದಾವೂದ್—ಅವರ ಮನಸ್ಸನ್ನು ನೋಯಿಸಬಾರದು ; ನಮ್ಮ ಮನಸ್ಸು ಮಾತ್ರ ನೋಯಬಹುದು, ಬೇಯಬಹುದು, ಅಲ್ಲ ?

ಅಮೀನಾ—(ಬೇಸರದ ಧ್ವನಿಯಲ್ಲಿ) ತಡವಾಯಿತು. ಹೋಗಿಬರಲೆ ?

ಶಿಲ್ಪಿ ದಾವೂದ್—(ರೇಗಿ) ಬುದ್ಧಿವಂತೆ ! ಹೋಗು ! ಮತ್ತೆ ನೀನು ಬರದಿದ್ದರೂ ಯಾರೂ ಇಲ್ಲಿ ಅಳುವುದಿಲ್ಲ.

(ಅಮೀನಾ 'ಬೋವಿಗಳೇ ! ಹೊರಡಿ !' ಎಂದು ಅವಸರ ಧ್ವನಿಯಲ್ಲಿ ಸೂಚನೆ ನೀಡುವಳು. ಅಂಗರಕ್ಷಕ ಒರೆಯೊಳಕ್ಕೆ ಖಡ್ಗವನ್ನು ಪೂರ್ತಿಯಾಗಿ ತಳ್ಳಿ, ಕೆಂಗಣ್ಣಿನಿಂದ ಶಿಲ್ಪಿಯನ್ನೊಮ್ಮೆ ನೋಡಿ, ಮುಂದಾಗುವನು.)

ಶಿಲ್ಪಿ ದಾವೂದ್—(ಧ್ವನಿ ಏರಿಸಿ) ಶಿಲ್ಪಿ ದಾವೂದ್ ನಿಮ್ಮ ಮೇಲೆ ಮುನಿದಿದ್ದಾನೆ—ಎಂದು ನಿನ್ನ ಸಮ್ರಾಜ್ಞಿಗೆ ಹೇಳು. ಆತ ಕಂದೀಲಿನ ಬೆಳಕಿನಲ್ಲಿ ನಡುರಾತ್ರಿಯೂ ದುಡಿಯುತಿದಾನೆ—ಎಂದು ತಿಳಿಸು. ಇಷ್ಟರ ಮೇಲೂ ಮಂದಿರ ಅಪೂರ್ಣವಾದರೆ ಶಿಲ್ಪಿ ಕಾರಣನಲ್ಲ, ಕೇಳಿಸಿತೆ ?

(ಭಾರದ ಹೆಜ್ಜೆಗಳನ್ನಿಡುತ್ತ ಕಲ್ಲಿನ ಕಂಬದ ಬಳಿಗೆ ಮರಳಿ, ಉಪಕರಣಗಳನ್ನೆತ್ತಿಕೊಂಡು, ಒಮ್ಮೆಲೆ ಆವೇಶದಿಂದ ಕಾರ್ಯೋನ್ಮುಖನಾಗುವನು. ಒಂದು ಕ್ಷಣದಲ್ಲೇ ಕೆಲಸ ನಿಲ್ಲಿಸಿ, ಉಪಕರಣಗಳನ್ನು ಎಸೆದು, ಕೈ ಕಟ್ಟಿಕೊಂಡು ನಿಲ್ಲುವನು.)

(ತೆರೆ)

ದೃಶ್ಯ ೭

[ದಂಡಿನ ಕಲರವದ ಹಿನ್ನೆಲೆಯಲ್ಲಿ ತೆರೆ ಸರಿಯುವುದು. ಕಾಣಿಸುತ್ತಿರುವುದು, ಕರಿಯ ಪರದೆ. ರಂಗಸ್ಥಲ, ನಿರ್ಜನ. ರಂಗದ ಒಂದು ಮೂಲೆಯಿಂದ—ಹಿನ್ನೆಲೆಯಿಂದ ಘೀಳಿಡುವ ಆನೆಗಳ, ಕೆನೆಯುವ ಕುದುರೆಗಳ, ಸುಂಯ್‌ಗುಡುವ ಬಾಣಗಳ ಸದ್ದು. ಘೋಷಗಳು : 'ದಿಲ್ಲೀ ಸುಲ್ತಾನ್ ಜಿಂದಾಬಾದ್ !' 'ಸುಲ್ತಾನ್ ಮಹಮ್ಮದ್ ಷಾ—

ಜಿಂದಾಬಾದ್ !' ಆದೇಶಗಳು: 'ಬಿಡಿರಿ ಬಾಣ !' 'ಎಸೆಯಿರಿ ಬೆಂಕಿಯುಂಡೆ !' ಉದ್ಗಾರಗಳು: 'ಥ್ಥ ! ಒಂದು ದೋಣಿ ಮುಳುಗಿತು !' 'ಒಂದು ಕುದುರೆ ಸತ್ತಿತು !' ರಣ ನಿನಾದದ ಕ್ಷೀಣ ಹಿನ್ನೆಲೆಯಲ್ಲಿ ಮುಹಮ್ಮದ್ ಷಾನ ಧ್ವನಿ ಕೇಳಿಸುವುದು.]

ಮುಹಮ್ಮದ್ ಷಾ—(ತೆರೆಯ ಮರೆಯಲ್ಲಿ) ಬಹಾದ್ದುರರೇ ! ಹಿಂದೂಸ್ಥಾನದ ವೀರರೇ ! ನಮ್ಮ ಪಾಲಿಗೆ ಇದು ಅಳಿವು ಉಳಿವಿನ ಹೋರಾಟ. ಕುಹಕಿ ತೈಮೂರನ ಧೂರ್ತ ದಂಡು ಯಮುನಾ ನದಿಯನ್ನು ದಾಟುತಿದೆ. ದಿಲ್ಲಿಯ ಕೋಟೆಗೆ ಮುತ್ತಿಗೆ ಹಾಕಲು ಬರುತಿರುವ ಕುಂಟ ತೈಮೂರನನ್ನು ನಾವು ಸೋಲಿಸಬೇಕು. ಸೂರ್ಯಾಸ್ತದೊಳಗೆ ಹಿಂದೂಸ್ಥಾನದ ಪೂರ್ವ ಪಶ್ಚಿಮ ದಕ್ಷಿಣ ಭಾಗಗಳ ಅರಸರೆಲ್ಲ ನಮ್ಮ ಬೆಂಬಲಕ್ಕೆ ಬರುತಾರೆ. ಆ ಐಕ್ಯ ಶಕ್ತಿ ಆಕ್ರಮಣಕಾರನ ಸೇನೆಯನ್ನು ಮುರಿದಿಕ್ಕುತದೆ. ಬಹಾದ್ದುರರೇ ! ಹಿಂದೂಸ್ಥಾನದ ವೀರರೇ !....

(ಧ್ವನಿ ಕ್ಷೀಣವಾಗಿ ಹಿನ್ನೆಲೆಗೆ ಸರಿದಂತೆ ಸುಲ್ತಾನನ ಕೆಲ ಸೈನಿಕರು ಒಬ್ಬೊಬ್ಬರಾಗಿ ರಂಗಸ್ಥಲವನ್ನು ಪ್ರವೇಶಿಸಿ, ಎದುರು ದಿಕ್ಕಿಗೆ ಧಾವಿಸುವರು. ಕೈಯಲ್ಲಿ ಹಿರಿದ ಖಡ್ಗ. ಕಾತರ ಭೀತಿ ತುಂಬಿದ ಮುಖ.)

(ಕೆದರಿದ ಕೂದಲ ಹೆದರಿದ ಕಣ್ಣುಗಳ ಮುಸಲ್ಮಾನ ಸ್ತ್ರೀಯೊಬ್ಬಳ ಪ್ರವೇಶ.)

ಫಾತಿಮಾ—ಯಾ ಅಲ್ಲಾ ! (ಅತ್ತಿತ್ತ ಧಾವಿಸುತ್ತ) ಏನು ಮಾಡಲಿ ? ಈಗೇನು ಮಾಡಲಿ ? (ಎದುರುಗಡೆ ನೇಪಥ್ಯದತ್ತ ನೋಡುತ್ತ) ಅಹಲ್ಯಾ ! ಏ ಅಹಲ್ಯಾ ! ಅಹಲ್ಯಾ ಬಹೆನ್ !

(ನೇಪಥ್ಯದಿಂದ ಕಾತರದ ಧ್ವನಿ: 'ಬಂದೆ ಫಾತಿಮಾ !' ಹಿಂದೂ ಸ್ತ್ರೀ ಒಳಬರುತ್ತಾಳೆ.)

ಅಹಲ್ಯಾ—(ಒಳಗಿನ ದುಗುಡವನ್ನು ಹತ್ತಿಕ್ಕುತ್ತ) ಫಾತಿಮಾ !

(ಫಾತಿಮಾ ಅಹಲ್ಯೆಯನ್ನು ತಬ್ಬಿಕೊಳ್ಳುವಳು. ಇಬ್ಬರೂ ಒಂದೆರಡು ಕ್ಷಣ ಅಳುವರು.)

ಫಾತಿಮಾ—ಈಗೇನು ಮಾಡೋಣ, ಅಕ್ಕ ?

ಅಹಲ್ಯಾ—(ತಾನು ಅಳುತ್ತ) ಅಳಬಾರದು, ಫಾತಿಮಾ.

ಫಾತಿಮಾ—(ಬಾಹುಗಳನ್ನು ಇಳಿಬಿಟ್ಟು) ಇಲ್ಲ, ಇಲ್ಲ! (ಕಣ್ಣುಗಳನ್ನು ಒರೆಸಿಕೊಳ್ಳುತ್ತ) ನಾನೆಲ್ಲಿ ಅಳುತ್ತಿದೇನೆ ?

ಅಹಲ್ಯಾ—ಇದು ಇಡೀ ದೇಶಕ್ಕೆ ಒದಗಿರುವ ಆಪತ್ತು. ಎಲ್ಲರಿಗೆ ಆದ ಹಾಗೆ ನಮಗೂ ಆಗುತದೆ.

ಫಾತಿಮಾ—ಇಂಥ ದುರ್ದಿನ ನನ್ನ ಜೀವನದಲ್ಲಿ ಬರಬಹುದೂಂತ ನಾನು ಕನಸಿನಲ್ಲಿಯೂ ನೆನೆಸಿರಲಿಲ್ಲ, ಅಹಲ್ಯಾ.

ಅಹಲ್ಯಾ—ಹೆಣ್ಣಾಗಿ ಹುಟ್ಟಿದಾಗ ಇಂಥದನ್ನು ಪಡೆದುಕೊಂಡೇ ಈ ಭೂಮಿಗೆ ಬಂದಿದೇವೆ, ತಂಗಿ.

(ಪುನಃ ಹಿನ್ನೆಲೆಯಲ್ಲಿ ಸೇನೆಯ ಕಲರವ. ಅವೇ ಆದೇಶಗಳು: 'ಬಾಣಬಿಡಿ!' 'ಬೆಂಕಿಯುಂಡೆ ಎಸೆಯಿರಿ!' ಎಚ್ಚರಿಕೆಯ ಮಾತುಗಳು: 'ಪ್ರತಿ ಧಾಳಿ ಮಾಡುತಿದಾರೆ, ಹುಷಾರ್!' ಆರ್ತನಾದ: 'ಹಾಯ್!' 'ಅಯ್ಯೋ! ದಡ ತಲಪಿದರು!' 'ವೀರರೇ! ಧೃತಿಗೆಡಬೇಡಿ!')

ಫಾತಿಮಾ—ಈ ಯುದ್ಧದಲ್ಲಿ ನಾವು ಸೋತರೆ ಏನಾಗುತದೆ, ಅಕ್ಕ?

ಅಹಲ್ಯಾ—ಈ ದೇಶಕ್ಕೆ ಗ್ರಹಣ ಹಿಡಿಯುತದೆ, ಫಾತಿಮಾ.

ಫಾತಿಮಾ—ಆಗ, ಆಗ ನಮಗೇನು ಗತಿ?

ಅಹಲ್ಯಾ—ವೀರಸ್ವರ್ಗ!

ಫಾತಿಮಾ—ಒಗಟು ಒಗಟಾಗಿ ಮಾತಾಡುತೀಯಾ, ಅಕ್ಕ. ನನಗೊಂದೂ ಅರ್ಥವಾಗುವುದಿಲ್ಲವಲ್ಲೇ....

ಅಹಲ್ಯಾ—ಹುಚ್ಚಮ್ಮ! ಇಲ್ಲಿ ಕೇಳು. ಸೂರ್ಯ ಮುಳುಗುವುದಕ್ಕೆ ಮುಂಚೆ ನಮ್ಮ ಸಹಾಯಕ್ಕೆ ಸೈನ್ಯಗಳು ಬರದಿದ್ದರೆ, ನಾವು ಸೋತುಹೋಗುತೇವೆ. ತೈಮೂರನ ದಂಡು ಪ್ರಳಯದಂತೆ ದಿಲ್ಲಿಯನ್ನು ನುಗ್ಗುತದೆ.

ಫಾತಿಮಾ—ನಾವು ಜೋಹರ್ ಮಾಡುವುದು ಯಾವಾಗ, ಅಹಲ್ಯಾ?

ಅಹಲ್ಯಾ—ವೈರಿ ಕೋಟೆಯೊಳಗೆ ನುಗ್ಗುವುದಕ್ಕೆ ಮುಂಚೆ ಅರಮನೆಯ ಹಿಂದಣ ಕಂದಕದಲ್ಲಿ ಚಿತಾಗ್ನಿ ಕಾಣಿಸಿಕೊಳ್ಳುತದೆ. ಆಗ ಸ್ತ್ರೀಯರ ಮಕ್ಕಳ ಆತ್ಮಾರ್ಪಣ....

ಫಾತಿಮಾ—ನಮ್ಮ ಗಂಡಸರ ಗತಿ ಏನೆ ಆಗ?

ಅಹಲ್ಯಾ—ಅವರು ಹೋರಾಡುತ್ತ ಮಡಿಯುತಾರೆ, ಫಾತಿಮಾ.

ಫಾತಿಮಾ—ನನಗೆ ಭಯವಾಗುತಿದೆ, ಅಕ್ಕ !

ಅಹಲ್ಯಾ—ಇಡಿ ಮುಳುಗಿದ ಮೇಲೆ ಚಳಿ ಯಾತರದು ?

ಫಾತಿಮಾ—(ಬಿಕ್ಕುತ್ತ) ಈ ಗಂಡಸರೆಂಥ ಸ್ವಾರ್ಥಿಗಳು ! ಈ ಮೊದಲೇ ಎಲ್ಲರೂ ಒಂದುಗೂಡಿ ದಂಡು ನೆರೆಸಿದ್ದರೆ ಹೀಗಾಗುತಿತ್ತೆ ?

ಅಹಲ್ಯಾ—ನಾನು ಬಲ್ಲೆ, ಫಾತಿಮಾ ! ಮನೆಗೆ ಬೆಂಕಿ ಬಿದ್ದ ಮೇಲೆ ಬಾವಿ ಅಗೆಯಲು ಯತ್ನಿಸುತಿದಾರೆ.

(ಹಿನ್ನೆಲೆಯಲ್ಲಿ ಗದ್ದಲ : 'ಹೊಡೆಯಿರಿ !' 'ಕಡಿಯಿರಿ !' 'ಮುಹಮ್ಮದ್ ಷಾ—ಜಿಂದಾಬಾದ್ !' 'ತೈಮೂರ್ ಖಾನ್–ಜಿಂದಾಬಾದ್ !')

ಫಾತಿಮಾ—ಏನು ಇದರ ಅರ್ಥ ? ಅವರು ಬಂದೇ ಬಿಟ್ಟರೆ ? ಅಯ್ಯೋ !

(ಹಿನ್ನೆಲೆಯಿಂದ ಧ್ವನಿ : 'ಕೋಟೆಯ ಮಹಾದ್ವಾರದಲ್ಲಿ ಇನ್ನು ಯುದ್ಧ ! ಹೆದರಬೇಡಿ ! ಹಿಮ್ಮೆಟ್ಟಬೇಡಿ !')

ಅಹಲ್ಯಾ—ಅಗೋ ! ಚಿತೆ ! (ಹಿನ್ನೆಲೆಯ ಪರದೆಯಾಚೆ ಬೆಂಕಿ ಭುಗಿಲ್ ಭುಗಿಲೆನ್ನುತ್ತದೆ.) ಫಾತಿಮಾ, ಬಾ ತಂಗಿ ! ಪರಕೀಯ ಕೈಗಳು ನಮ್ಮನ್ನು ಮುಟ್ಟುವುದಕ್ಕೆ ಮೊದಲೇ ಪ್ರಾಣಾರ್ಪಣ ಮಾಡೋಣ ! ನಮ್ಮ ಗಂಡಸರು ರಾಷ್ಟ್ರರಕ್ಷಣೆಯನ್ನು ಮಾಡಲಾರದೇ ಹೋದರು. ನಾವು ಮಾನರಕ್ಷಣೆಯನ್ನಾದರೂ ಮಾಡಿಕೊಳ್ಳೋಣ !

ಫಾತಿಮಾ—(ಯಾಚಿಸುತ್ತ) ಹೊರಡುವುದಕ್ಕೆ ಮುಂಚೆ ಒಂದು ಕೋರಿಕೆ ನಡೆಸಿಕೊಡು, ಅಹಲ್ಯಾ. ಕೊನೆಯ ಘಳಿಗೆಯಲ್ಲಿ ನಾವು ಪರಸ್ಪರ ಕೈ ಹಿಡಿದುಕೊಂಡು ಒಟ್ಟಿಗೇ ಇರೋಣ.

ಅಹಲ್ಯಾ—ಹುಂ ತಂಗಿ. ಇಬ್ಬರೂ ಒಟ್ಟಾಗಿಯೇ ಚಿತೆಗೆ ಹಾರೋಣ !

(ಫಾತಿಮಾಳ ಕೈ ಹಿಡಿದುಕೊಂಡು ಎದುರು ದಿಕ್ಕಿಗೆ ಧಾವಿಸುವಳು.)

(ರಣ ಕೋಲಾಹಲ. ಘೀಳಿಡುವ ಆನೆಗಳು. ಕೆನೆಯುವ ಕುದುರೆಗಳು. ತೆರೆಯಾಚೆಗೆ ಕೈಗೆ ಕೈ. "ಬೆಂಕಿ !" "ಬೆಂಕಿ !" "ದೀನ್, ದೀನ್ !" "ಅಲ್ಲಾ ಹೋ ಅಕ್ಬರ್ !" ಎರಡು ಕ್ಷಣಗಳ ಆ ಗದ್ದಲ ಕ್ಷೀಣವಾದಂತೆ ನಾಲ್ಕಾರು ಸ್ತ್ರೀ ಕಂಠಗಳು, ಧ್ವನಿ ಏರಿಸಿ : "ಬನ್ನಿ ! ಜೋಹರ್‌ಗೆ ಬನ್ನಿ ! ಹಿಂದೂಸ್ಥಾನದ ಯಾವ ಸೋದರಿಯೂ ಪರಕೀಯರ ವಶವಾಗಲಾರಳು ! ವೀರಸ್ವರ್ಗ ನಮಗಾಗಿ ಕಾದಿದೆ ! ಬನ್ನಿ ! ಜೋಹರ್‌ಗೆ ಬನ್ನಿ !")

(ನೇಪಥ್ಯದಲ್ಲಿ ಬೇರೆ ಸ್ವರಗಳು; "ದಿಲ್ಲಿ ಸುಲ್ತಾನ ಸೋತುಹೋದ!" "ಮಂಗೋಲ ವೀರರೆ—ಕೋಟೆಯೊಳಕ್ಕೆ ನುಗ್ಗಿ!" "ಮಂಗೋಲ ಸಮ್ರಾಟ ತೈಮೂರ್‌ಖಾನ್—ಜಿಂದಾಬಾದ್!")

(ತೈಮೂರ್‌ಖಾನ್ ಜಯಘೋಷ ಮತ್ತೆ ಮತ್ತೆ ಕೇಳಿಸುತ್ತಿರುವಂತೆಯೇ, ತೆರೆ.)

ದೃಶ್ಯ ೮

[ಸಮರ್ಕಂದದಲ್ಲಿ ಅಂತಃಪುರ, ಸಮ್ರಾಜ್ಞಿ ಹಾನಿಮ್ ಅಗಲ ಪೀಠದ ಮೇಲೆ ಕಾತರಳಾಗಿ ಕುಳಿತಿದ್ದಾಳೆ. ಆಕೆಯ ಪಾದಗಳ ಬಳಿ ನೆಲದ ಮೇಲೆ, ಅಮಿನಾ.]

ಹಾನಿಮ್—ಅಮಿನಾ, ನನ್ನ ಎದೆ ಗುಂಡಿಗೆಯನ್ನು ಒಮ್ಮೆ ಮುಟ್ಟಿ ನೋಡು.

(ಬಾಗಿ ಅಮಿನಾಳ ಕೈಯನ್ನೆತ್ತಿಕೊಳ್ಳುವಳು.)

ಅಮಿನಾ—ಗಾಬರಿಯಾಗಬೇಡಿ, ಬೇಗಂ. ಒಬ್ಬ ಸಾಮಾನ್ಯ ಶಿಲ್ಪಿಗೆ ಮಂಗೋಲ ಸಾಮ್ರಾಜ್ಯದ ಒಡತಿ ಅಂಜಬೇಕೆ?

ಹಾನಿಮ್—(ಅಮಿನಾಳ ಕೈಯನ್ನು ಬಿಟ್ಟು, ತನ್ನೆರಡೂ ಅಂಗೈಗಳನ್ನು ಎದೆಗೊತ್ತಿಕೊಂಡು) ಸ್ಮಾರಕ ಮಂದಿರವನ್ನು ಪೂರ್ತಿಗೊಳಿಸದೆ ನನ್ನನ್ನು ಸಂಕಟಕ್ಕೆ ಗುರಿ ಮಾಡಿರುವ ಈತ ಖಂಡಿತ ಮನುಷ್ಯನಲ್ಲ. ತನಗೆ ಏನು ಬೇಕು ಎಂದು ಇವನು ಕೇಳಬಾರದೆ? ಮಂಗೋಲ ಸಾಮ್ರಾಜ್ಯದ ಭಂಡಾರವನ್ನೇ ಶಿಲ್ಪಿಗೆ ಅರ್ಪಿಸುವುದಕ್ಕೂ ನಾನು ಸಿದ್ಧ. ಧನಕನಕ ವಸ್ತು ಒಡವೆ ಎಷ್ಟು ಬೇಕಾದರೂ ಈತನಿಗೆ ಕೊಡಬಹುದು. ಸಮ್ರಾಟರು ಹಿಂದೂಸ್ಥಾನದಿಂದ ಹಿಂತಿರುಗುವುದಕ್ಕೆ ಮುಂಚೆ ಮಂದಿರವನ್ನೊಮ್ಮೆ ಈತ ಕಟ್ಟಿ ಮುಗಿಸಬಾರದೆ?

ಅಮಿನಾ—ನಾನು ಸಮ್ರಾಜ್ಞಿಯಾಗಿದ್ದಿದ್ದರೆ—

ಹಾನಿಮ್—ಹೇಳು, ಏನು ಮಾಡುತ್ತಿದ್ದೆ? (ಅಮಿನಾ ಉತ್ತರವೀಯದೆ ಸುಮ್ಮನಿರಲು) ಹೇಳೇ, ಏನು ಮಾಡುತ್ತಿದ್ದೆ ನೀನು ಸಮ್ರಾಜ್ಞಿಯಾಗಿದ್ದಿದ್ದರೆ?

ಅಮಿನಾ—(ಉಗುಳು ನುಂಗಿ) ಅವನನ್ನು ಗಲ್ಲಿಗೇರಿಸುತ್ತಿದ್ದೆ.

ಹಾನಿಮ್—ಹಾಗೆ ಆಡುವುದು ಸುಲಭ.

ಅಮಿನಾ—(ನಿಟ್ಟುಸಿರು ಬಿಟ್ಟು) ನಿಜ. ಇದು ಅರ್ಥವಿಲ್ಲದ ಮಾತು.

ಹಾನಿಮ್—ಏನೇ ಇರಲಿ, ಸಮ್ರಾಟರು ಹಿಂದೂಸ್ಥಾನದಿಂದ ಮರಳುವ ಹೊತ್ತಿಗೆ ಸ್ಮಾರಕ ಮಂದಿರವನ್ನು ಈತ ಪೂರ್ತಿಗೊಳಿಸುವನೋ ಇಲ್ಲವೋ ಎಂಬುದರ ಇತ್ಯರ್ಥ ಈ ದಿನ ಆಗಲೇಬೇಕು.

ಅಮೀನಾ—ಹೌದು ಸಮ್ರಾಜ್ಞಿ. ಕರೆಕಳುಹಿಸಿ ಇಷ್ಟು ಹೊತ್ತಾದರೂ ಬಂದಿಲ್ಲ ವಲ್ಲ ಮಹಾನುಭಾವ !

ಹಾನಿಮ್—ಎಷ್ಟೊಂದು ಬೆಳಕು ! ಆ ಒಂದು ಗವಾಕ್ಷವನ್ನು ಮುಚ್ಚು, ಅಮೀನಾ.

ಅಮೀನಾ—ಅಪ್ಪಣೆ, ಒಡತಿ. (ಭಾರವಾದ ಹೃದಯದೊಡನೆ ಎದ್ದು, ಜಾಲಂದ್ರದ ಬಳಿ ಇರುವ ಕಿಟಕಿಯನ್ನು ಮುಚ್ಚುವಳು.)

ಹಾನಿಮ್—ನೀನು ಬಾಗಿಲ ಬಳಿ ಇರು. ಆತ ಬಂದೊಡನೆ ಒಳಗೆ ಕಳುಹಿಸು.

ಅಮೀನಾ—ಅರ್ಥವಾಯ್ತು.

ಹಾನಿಮ್—(ಮಾತು ಕುಟುಕಿತೆನ್ನುವಂತೆ) ಏನು ?

ಅಮೀನಾ—ಅಪ್ಪಣೆ, ಅಂದೆ.

(ನೇಪಥ್ಯದಲ್ಲಿ ಶಿಲ್ಪಿ ದಾವೂದ್ : "ಒಳಗೆ ಬಿಡು !")

ಹಾನಿಮ್—ಅಗೋ, ಹೊರಗೆ ಮಾತು !

ಅಮೀನಾ—(ಹೋಗುತ್ತ) ಆತನೇ ಇರಬೇಕು.

(ಹಾನಿಮ್ ಥಟ್ಟನೆದ್ದು ಬಾಗಿಲನ್ನು ದಾಟಿ ತೆಳು ಪರದೆಯ ಹಿಂದೆ ನಿಲ್ಲುವಳು.)

(ಶಿಲ್ಪಿ ದಾವೂದ್ ತಲೆ ಎತ್ತಿ ಎದೆ ಸೆಟೆದು ನಡೆಯುತ್ತ ಒಳಕ್ಕೆ ಬಂದು ಬರಿದು ಪೀಠವನ್ನು ನೋಡುವನು. ಬಳಿಕ ಬಾಗಿಲ ಕಡೆಗೆ ದೃಷ್ಟಿ ಬೀರುವನು.)

ಶಿಲ್ಪಿ ದಾವೂದ್—ಓ ! ಇನ್ನೂ ಪರದೆಯ ಹಿಂದೆಯೇ ಇದೀರಿ. ನಮಿಸ ಬಹುದೆ ಸಮ್ರಾಜ್ಞಿ ?

ಹಾನಿಮ್—(ಸ್ಥಿರವಾದ ಧ್ವನಿಯಲ್ಲಿ ಮಾತನಾಡಲು ಯತ್ನಿಸುತ್ತ) ಸಮ್ರಾಜ್ಞಿಗೆ ವಂದಿಸುವುದು ಶಿಷ್ಟಾಚಾರ.

ಶಿಲ್ಪಿ ದಾವೂದ್—ಸೌಂದರ್ಯದ ಅಧಿದೇವತೆಯ ಮುಂದೆ ಈ ಉಪಾಸಕ ಕುರ್ನಿಸು ಮಾಡುತಾನೆ. (ಬಾಗಿ ನಮಿಸುವನು.)

ಹಾನಿಮ್—ಸಲಿಗೆ ಹೆಚ್ಚಾಯಿತು.

ಶಿಲ್ಪಿ ದಾವೂದ್—ಸಲಿಗೆಯಲ್ಲ, ಕಾಠಿನ್ಯ.

ಹಾನಿಮ್—ಯಾರು ಕಠಿನರು ?

ಶಿಲ್ಪಿ ದಾವೂದ್—ನೀವು. ಪರದೆಯ ಹೊರಗೆ ನನ್ನ ದೇವಿಯನ್ನು ನಾನು ನೋಡಲೇ ಬಾರದೆ ? (ಒಮ್ಮೆಲೆ ಹಾನಿಮ್ ಪರದೆ ಸರಿಸಿ, ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ, ರಂಗಸ್ಥಲದಲ್ಲಿ ತುಸು ಮುಂದಕ್ಕೆ ಬರುವಳು. ಶಿಲ್ಪಿ ಬಾಯಿ ತೆರೆದು ಬೆಕ್ಕಸ ಬೆರಗಾಗಿ ನಿಲ್ಲುವನು.) ಆಃ ! ಇದು ಕನಸೋ ? ನೆನಸೋ ?

ಹಾನಿಮ್—(ಧ್ವನಿ ಏರಿಸಿ ಕಂಪನವನ್ನು ಹತ್ತಿಕ್ಕುತ್ತ) ಹೇಳು ಶಿಲ್ಪಿ ! ಮಸೀದಿಯ ನಿರ್ಮಾಣಕಾರ್ಯ ನಿಂತಿದೆ ಯಾಕೆ ?

ಶಿಲ್ಪಿ ದಾವೂದ್—(ಭಾವೋದ್ವೇಗದಿಂದ) ನನ್ನ ಮನಸ್ಸಿಗೆ ನೆಮ್ಮದಿ ಇಲ್ಲ.

ಹಾನಿಮ್—ಯಾಕೆ ನೆಮ್ಮದಿಯಿಲ್ಲ ?

ಶಿಲ್ಪಿ ದಾವೂದ್—ನನಗೆ ಸೌಂದರ್ಯದ ಸಾಕ್ಷಾತ್ಕಾರವಾಗಬೇಕು.

ಹಾನಿಮ್—(ತುಟಿ ಕಚ್ಚಿ) ಅದು ಇನತ್ತು ಆಗಿಲ್ಲವೆ ?

ಶಿಲ್ಪಿ ದಾವೂದ್—(ಉತ್ಸುಕ) ಹೌದೆ ? ಆಗಿದೆಯೆ ?

ಹಾನಿಮ್—ಓಹ್ ! ಈ ಮಾತಿಗೆ ಕೊನೆಯೇ ಇಲ್ಲವಲ್ಲ ! (ತುಸು ಧ್ವನಿ ಏರಿಸಿ) ಇನ್ನು ಆರು ತಿಂಗಳಲ್ಲಿ ಮಂದಿರ ಪೂರ್ತಿಯಾಗುವುದಕ್ಕೆ ನಿನಗೇನು ಕೊಡಬೇಕು ?

ಶಿಲ್ಪಿ ದಾವೂದ್—ಕೊಡಬೇಕಾದುದಿಲ್ಲ ; ಪಡೆಯಲು ಸಮ್ಮತಿ ಇತ್ತರಾಯಿತು.

ಹಾನಿಮ್—ಏನು ಅದು ?

ಶಿಲ್ಪಿ ದಾವೂದ್—ಒಂದು ಚುಂಬನ !

ಹಾನಿಮ್—ಹ್ಹಾ ! (ಬವಳಿ ಬಂದು ಬೀಳುವಂತಾಗಲು)

ಶಿಲ್ಪಿ ದಾವೂದ್—ಇದೇನು ? ಬವಳಿ ಬಂತೆ ! (ಧಾವಿಸಿ ತೋಳಿನಿಂದ ಬಳಸಿ ಆಸರೆಯಾಗುವನು.) ಆಹ್ಹಾ ! ಅರೆತೆರೆದ ಕಣ್ಣುಗಳಲ್ಲಿ ಆಹ್ವಾನ ! (ನಡುಗುವ ಧ್ವನಿ) ಬಿಳುಪೇರಿದ ತುಟಿಗಳಿಗಿಂತ ಕೆಂಪಡರಿದ ಕೆನ್ನೆ ಲೇಸು—ಆಃ ! (ಅರ್ಧ ಪ್ರಜ್ಞೆಯಲ್ಲಿದ್ದ ಸಮ್ರಾಜ್ಞಿಯ ಕೆನ್ನೆಯನ್ನು ತನ್ನ ಮುಖದಿಂದ ಮರೆ ಮಾಡುವನು.)

ಹಾನಿಮ್—(ಎಚ್ಚರುತ್ತ) ನಾನು ಎಲ್ಲಿದೇನೆ ?

ಶಿಲ್ಪಿ ದಾವೂದ್—ಸುಖದ ಹೊಸ್ತಿಲಲ್ಲಿ. ಶಿಲ್ಪಿ ಕೃತಾರ್ಥ. ಅಪ್ಪಣೆಯಾಗಲಿ.

ಅಪೂರ್ಣವಾಗಿರುವ ಕಾವ್ಯವನ್ನು ನಾನಿನ್ನು ರಚಿಸಿ ಮುಗಿಸಬೇಕು.

ಹಾನಿವ್—(ಹಿಡಿತದಿಂದ ಬೇರೆಯಾಗಿ ತಾನೇ ನಿಂತುಕೊಳ್ಳುತ್ತ, ಯಾಂತ್ರಿಕ ಸ್ವರ ದಲ್ಲಿ) ಹೋಗು, ಶಿಲ್ಪಿ. ನಿನ್ನ ಶಿಲೆಯು ಕಾವ್ಯವನ್ನು ಪೂರ್ಣಗೊಳಿಸು.

(ದಾವೂದ್ ವಿಜೇತನಂತೆ ಹಗುರ ಹೆಜ್ಜೆಗಳನ್ನಿಟ್ಟು ಹೊರಕ್ಕೆ ಸಾಗುವನು. ಸಮ್ರಾಜ್ಞಿ ಪೀಠದಲ್ಲಿ ಕುಸಿದು ಬೀಳುವಳು.)

(ಅಮೀನಾ ಒಳಕ್ಕೆ ಧಾವಿಸಿ ಬರುವಳು. ಗಾಬರಿಗೊಂಡು, ಪೀಠದ ಮೇಲೆ ಬಿದ್ದಿರುವ ಸಮ್ರಾಜ್ಞಿಯ ಮೈ ಕುಲುಕುವಳು.)

ಅಮೀನಾ—(ಕಾತರ ತುಂಬಿದ ಕಂಠದಲ್ಲಿ, ಒಡತಿಯನ್ನು ಎಚ್ಚರಿಸುವವಳಂತೆ) ಸಮ್ರಾಜ್ಞೀ! ಸಮ್ರಾಜ್ಞೀ....

ಅಂಕದ ಪರದೆ

ತೃತೀಯಾಂಕ

ದೃಶ್ಯ ೧

[ದಿಲ್ಲಿಯಲ್ಲಿ ತೈಮೂರನ ನಿವಾಸ. ಇದು ಮಹಮ್ಮದ್‌ಷಾ ವಾಸಿಸುತ್ತಿದ್ದ ಅರಮನೆಯಲ್ಲ. ರಂಗ ಮಧ್ಯದಲ್ಲಿ ಬಾದಶಹನಿಗೆ ಒಪ್ಪುವಂತಹ ಪೀಠ. ಆ ಕಡೆಗೂ ಈ ಕಡೆಗೂ ಬೇರೆ ಎರಡೆರಡು ಪೀಠಗಳು. ಹಿಂದಣ ಪರದೆಯಲ್ಲಿ ದೊಡ್ಡ ಕಿಟಕಿ.

ತೆರೆ ಸರಿಯುವಾಗ, ಕಿಟಕಿಯ ಬಳಿ ನಿಂತು ತೈಮೂರ್‌ಖಾನ್ ಉತ್ತರ ದಿಕ್ಕಿಗೆ ದೂರಕ್ಕೆ ನೋಡುತ್ತಿದ್ದಾನೆ. ಆತನ ಮುಖ ಪ್ರೇಕ್ಷಕರಿಗೆ ಕಾಣಿಸುವುದಿಲ್ಲ.]

ತೈಮೂರ—(ಎರಡು ಕ್ಷಣ ರಂಗಸ್ಥಲದಲ್ಲಿ ನೀರವತೆ. ಪ್ರತಿಮೆಯಂತೆ ನಿಂತಿದ್ದ ತೈಮೂರ ಮುಷ್ಟಿಯಿಂದ ಕಿಟಕಿಯ ದಂಡೆಗೆ ಗುದ್ದಿ, ತಲೆಯಲುಗಿಸಿ ಸುಮ್ಮನಿದ್ದು, ನಿಟ್ಟುಸಿರು ಬಿಟ್ಟು, ಮೆಲ್ಲನೆ ಪ್ರೇಕ್ಷಕರತ್ತ ತಿರುಗುತ್ತಾನೆ.) ಏನಾಶ್ಚರ್ಯ! ನಮ್ಮ ಪೂರ್ವಜರಾದ ಚೆಂಗೀಸ್‌ಖಾನರು ಪೂರೈಸದೆ ಉಳಿಸಿದ ಕಾರ್ಯವನ್ನು ನಾವು ಮಾಡಿ ಮುಗಿಸಿದರೂ, ನಮಗೆ ನೆಮ್ಮದಿ ಇಲ್ಲ! ಬಿರುಗಾಳಿಯಂತೆ ಬಂದು, ಜಯದ ಮೇಲೆ ಜಯವನ್ನು ಗಳಿಸಿ, ದಿಲ್ಲಿಯನ್ನು ವಶಪಡಿಸಿಕೊಂಡರೂ ಮನಸ್ಸಿಗೆ ಶಾಂತಿ ಇಲ್ಲ! (ಅತ್ತಿತ್ತ ಚಲಿಸುತ್ತ) ಹೃದಯ ರೇಖೆ ತುಸು ವಕ್ರವಾಗಿ ನಿಮ್ಮನ್ನು ಪರಿಹಾಸ್ಯ ಮಾಡುತಾ ಇದೆ ಎಂದನಲ್ಲ ಆ ಬೈರಾಗಿ? ಮೂರ್ಖ! (ಸ್ಮರಿಸಿಕೊಳ್ಳುತ್ತ) ನೀವು ಬಿಟ್ಟು ಬಂದಿರುವ ಸಮರ್ಕಂದದಲ್ಲಿ ಶಿಲೆ ಬೆಂಕಿ ಕಾರುತದೆ; ಪರ್ವತ ಸಿಡಿಯುತದೆ; ಇನ್ನು ಆರೆಂಟು ತಿಂಗಳಲ್ಲಿ ಅಲ್ಲೋಲ ಕಲ್ಲೋಲವಾಗುತದೆ....ಏನು ಇದರ ಅರ್ಥ? (ಮತ್ತೆ ಕಿಟಕಿಯ ಬಳಿ ಹೊರ ನೋಡುತ್ತ ಒಂದು ಕ್ಷಣ ಮೌನವಾಗಿ ನಿಲ್ಲುವನು. ಅಲ್ಲಿಂದ ಪುನಃ ಪ್ರೇಕ್ಷಕರಿಗೆ ಮುಖ ಮಾಡಿ) ಯಾವ ಅರ್ಥವೂ ಇಲ್ಲ! ಯಾವನೋ ಬೈರಾಗಿ ಏನನ್ನೋ ಹೇಳಿದನೆಂದು ಕಾತರಗೊಳ್ಳಲೆ ನಾನು? ನಾನು? ಮಂಗೋಲ ಸಮ್ರಾಟ? ಜಗತ್ತನ್ನೇ ಗೆದ್ದಿರುವ ವೀರಾಗ್ರಣಿ? ತೈಮೂರ್‌ಖಾನ? (ನಡೆಯತೊಡಗುತ್ತ, ವಿಷಣ್ಣನಾಗಿ) ಒಮ್ಮೊಮ್ಮೆ ಮನಸ್ಸು ಚಂಚಲವಾಗುತದೆ. ಈ ಐಶ್ವರ್ಯ ಸಂಪತ್ತು ಸೈನ್ಯ

ಸರಂಜಾಮು ಎಲ್ಲವನ್ನೂ ಬಿಟ್ಟು ಗಿಡುಗನಂತೆ ಸಮರ್ಕಂದಕ್ಕೆ ಹಾರಿ ಹೋಗಲೆ ಎನಿಸುತದೆ. ಇದೆಂಥ ಬಯಕೆ? ವಯಸ್ಸಾಗಿಯೆ ಬಿಟ್ಟಿತೆ ನನಗೆ? ವೃದ್ಧಾಪ್ಯದ ಅರುಳು ಮರುಳೆ ಇದು? ಛಿ! (ಕಿಟಕಿಯ ಬಳಿ ನಿಂತು ಮತ್ತೊಮ್ಮೆ ಹೊರಕ್ಕೆ ನೋಡುವನು. ಒಂದು ಕ್ಷಣದ ಬಳಿಕ ಈ ಕಡೆಗೆ ತಿರುಗಿ, ಧ್ವನಿ ಏರಿಸಿ) ಸಾಧ್ಯವಿಲ್ಲ! ತೈಮೂರನೆಂದೂ ಕರ್ತವ್ಯವಿಮುಖ ನಾಗಲಾರ! ಸಮರದಲ್ಲಿ ಪರಾಜಿತನಾಗದವನು ಶಾಂತಿಯಲ್ಲಿ ಸೋಲು ತಾನೆಯೆ? ನೈಜ ವಿಪತ್ತುಗಳಿಗೆ ಅಳುಕದವನು ಕಲ್ಪನೆಯ ಭ್ರಮೆ ಗಳಿಂದ ಭೀತಿಗೊಳ್ಳಲಿ? ಇಲ್ಲ! ಎಂದಿಗೂ ಇಲ್ಲ!

(ಪ್ರೇಕ್ಷಕರನ್ನು ಬಿರುಗಣ್ಣಿನಿಂದ ನೋಡುತ್ತ ತೈಮೂರ ನಿಶ್ಚಲವಾಗಿ ನಿಲ್ಲುವನು. ಸೇವಕ ನೇಪಥ್ಯದಿಂದ ಅಳುಕುತ್ತ ಹಣಿಕಿ ನೋಡಿ, ಧೈರ್ಯ ತಳೆದು ಪ್ರವೇಶಿಸಿ, ವಂದಿಸಿ ನಿಲ್ಲುವನು.)

ಸೇವಕ—(ತೈಮೂರ ಯಾಂತ್ರಿಕವಾಗಿ ತನ್ನ ಕಡೆಗೆ ನೋಡಲು) ಬಾದಶಹರ ಅಪೇಕ್ಷೆಯಂತೆ ರಾಜಕುಮಾರರು ಸಂದರ್ಶನಕ್ಕೆ ಬಂದಿದಾರೆ.

ತೈಮೂರ—(ತಗ್ಗಿದ ದನಿಯಲ್ಲಿ) ಬರಹೇಳು.

ಷಾ ರುಖ್—(ತಕ್ಕಮಟ್ಟಿನ ಆತ್ಮವಿಶ್ವಾಸದಿಂದ ನಡೆದು ಬಂದು, ನಮಿಸಲೆಂದು ಬಾಗುವನು. ಅಷ್ಟರಲ್ಲೆ ತೈಮೂರ ಅವನನ್ನು ತಡೆದು, ತಬ್ಬಿಕೊಳ್ಳುವನು. ಇದೇನು ಭಾವಾತಿರೇಕ ಎಂದು ಅರ್ಥವಾಗದೆ ಷಾ ರುಖ್ ಕಕ್ಕಾವಿಕ್ಕಿಯಾಗು ವನು. ತೈಮೂರನು ಆಲಿಂಗನದಿಂದ ಬಿಡುಗಡೆ ಮಾಡಿದ ಮೇಲೆ,)

ಷಾ ರುಖ್—ನಾನಾಗಿಯೇ ಬರಬೇಕೆಂದಿದ್ದೆ, ಅಬ್ಬಾಜಾನ್. ಅಷ್ಟರಲ್ಲಿಯೇ ನಿಮ್ಮಿಂದ ಕರೆ ಬಂತು.

ತೈಮೂರ—ಯಾಕೆ? ಬೆಳಗ್ಗೆ ಎದ್ದೊಡನೆಯೇ, ಹೆತ್ತ ತಂದೆಯನ್ನು ನೋಡುವ ಆಸೆ ಹುಟ್ಟಿಕೊ? (ಷಾ ರುಖ್ ಉತ್ತರ ನೀಡದೆ ಲಜ್ಜೆಯಿಂದ ಮುಗುಳು ನಗುವನು.) ರಾತ್ರಿ ಕನಸು ಗಿನಸು ಏನಾದರೂ ಕಂಡೆಯೊ?

ಷಾ ರುಖ್—ಹೌದು, ಅಬ್ಬಾಜಾನ್. ನಾನು—

ತೈಮೂರ—ಹೇಳು ರುಖ್.

ಷಾ ರುಖ್—ನಾನು ಕುದುರೆಯ ಮೇಲೆ ಕುಳಿತಿದ್ದೆ. ಎಷ್ಟು ಕಡಿವಾಣ

ಜಗ್ಗಿದರೂ ಕೇಳದೆ ಅದು ಬೆಟ್ಟದಿಂದ ಬೆಟ್ಟಕ್ಕೆ ಕೋಡುಗಲ್ಲಿನಿಂದ ಕೋಡುಗಲ್ಲಿಗೆ ಹಾರುತ್ತಿತ್ತು.

ತೈಮೂರ—ಹೆದರಿದೆಯಾ ?

ಷಾ ರುಖ್—ಇಲ್ಲ. ಆದರೆ, ಅದು ನಿಮ್ಮ ಕುದುರೆ, ಅಬ್ಬಾ ಜಾನ್. ಶ್ವೇತಾಶ್ವ. ನೀವೆಲ್ಲೋ ಮುಂದೆ ಬಹಳ ಮುಂದೆ ದೂರ ಹೋದ ಹಾಗಿತ್ತು. ಆ ದಿಕ್ಕಿಗೇ ಕುದುರೆಯನ್ನು ಓಡಿಸುವುದಕ್ಕೆ ಪ್ರಯತ್ನಪಟ್ಟೆ. ದಾರಿಯಲ್ಲಿ, ಎತ್ತರದಲ್ಲಿ ಒಂದು ಕಡೆ, ಅಮ್ಮಾ ಜಾನ್ ಬಿಳಿಯ ಉಡುಪು ತೊಟ್ಟು ನಿಂತಿದ್ದಳು. ಹತ್ತಿರ ಬಂದ ನಾನು, ಅವಳ ಕಣ್ಣುಗಳಿಂದ ನೀರು ಹರಿಯುತಿದ್ದುದನ್ನು ಕಂಡೆ.

ತೈಮೂರ—ನಿಮ್ಮಮ್ಮ ಯಾವಾಗಲೂ ಹಾಗೆಯೇ, ರುಖ್. ಅದು ಸಂತೋಷದ ಕಣ್ಣೀರು. ಆಕೆಯೇ ಹೇಳುವ ಹಾಗೆ, ಅದು ಆನಂದಾಶ್ರು.

ಷಾ ರುಖ್—ನಾನು ಕುದುರೆಯಿಂದ ಧುಮುಕಬೇಕು ಎನ್ನುವಷ್ಟರಲ್ಲಿ ಎಚ್ಚರವಾಯಿತು.

ತೈಮೂರ—(ತಲೆಯಲ್ಲಾಡಿಸಿ) ಊರಿನ ಯೋಚನೆ, ರುಖ್. ಇದು ತಾಯ್ನಾಡನ್ನು ನೋಡುವ ಹಂಬಲ.

ಷಾ ರುಖ್—ಸಮರ್ಕಂದಕ್ಕೆ ವಾಪಸು ಹೋಗೋಣವೆ, ಅಬ್ಬಾ ಜಾನ್ ?

ತೈಮೂರ—(ಧ್ವನಿಯನ್ನು ತುಸು ಕಠಿನಗೊಳಿಸಿ) ಒಂದು ದೇಶವನ್ನು ಗೆದ್ದರೆ ಸಾಲದು, ರುಖ್. ಅಲ್ಲಿ ನಮ್ಮ ಪ್ರಭುತ್ವವನ್ನು ಭದ್ರಗೊಳಿಸಬೇಕು. ಆಗ ಮಾತ್ರ ಜೈತ್ರಯಾತ್ರೆ ಪೂರ್ಣವಾಗುತದೆ.

ಷಾ ರುಖ್—(ನಿರಾಸೆಯಾದರೂ ತಕ್ಷಣವೇ ತಂದೆಯ ಮಾತನ್ನು ಒಪ್ಪಿಕೊಳ್ಳುತ್ತ) ಹೌದು, ಅಬ್ಬಾ ಜಾನ್.

ತೈಮೂರ—(ಕಿಟಕಿಯತ್ತ ನಡೆಯುತ್ತ) ಬೆಳಗ್ಗೆ ಎದ್ದಾಗ, ನಿನ್ನನ್ನು ನೋಡಬೇಕು ಎಂಬ ಅಪೇಕ್ಷೆಯಾಯಿತು. ರುಖ್, ಇಲ್ಲಿ ಬಾ.

(ತೈಮೂರ ಕಿಟಕಿಯ ಬಳಿ ಹೊರಕ್ಕೆ ನೋಡುತ್ತ ನಿಲ್ಲುವನು. ಷಾ ರುಖ್ ತಂದೆಯನ್ನು ಸಮಿಾಪಿಸಿ ತಾನೂ ನಿಲ್ಲುವನು.)

ತೈಮೂರ—ಇಲ್ಲಿಂದ ನಿನಗೇನು ಕಾಣಿಸುತಿದೆ, ರುಖ್ ?

ಷಾ ರುಖ್—ದಿಲ್ಲಿ, ಮಹಾನ್ ಸಾಮ್ರಾಜ್ಯಗಳ ರಾಜಧಾನಿಯಾಗಿದ್ದ ದಿಲ್ಲಿ. ನಮ್ಮ ಆಕ್ರಮಣಕ್ಕೆ ತುತ್ತಾಗಿ ಹಾಳು ಸುರಿದಿದೆ. ನಾವು ಇಟ್ಟ ಕೊಳ್ಳಿಯಿಂದ ಹತ್ತಿಕೊಂಡ ಬೆಂಕಿ ಅನೇಕ ಕಡೆ ಇನ್ನೂ ಉರಿಯುತಿದೆ.

ತೈಮೂರ—ದಿಲ್ಲಿ! ಅದರಾಚೆಗೆ ಏನು ಕಾಣುತಿದೀಯಾ?

ಷಾ ರುಖ್—ಆಚೆಗೆ?... ಏನೂ ಇಲ್ಲವಲ್ಲ, ಅಬ್ಬಾಜಾನ್....

ತೈಮೂರ—ಹಿಮಾಲಯದ ಪರ್ವತಶ್ರೇಣಿಯ ತನಕ ಚಾಚಿರುವ ಹಿಂದೂಸ್ಥಾನ. ಅಲ್ಲಿನ್ನೂ ಹತ್ತಾರು ಪುಡಿ ಅರಸರಿದಾರೆ. ಮಂಗೋಲ ಧ್ವಜ ಇಲ್ಲಿ ಹಾರಾಡುತಿರುವುದನ್ನು ಕಂಡು ಗದಗದ ನಡುಗುತಿದಾರೆ. ಆ ಪರ್ವತದಾಚೆಗೆ ಈ ಕಡೆ ನಮ್ಮ ಸಮರ್ಕಂದ್. ಮಧ್ಯೆ, ಬಡಾ ಖಾನರು ಹಿಂದೆ ಜಯಿಸಿದ ತಿಬೆಟ್. ಈ ದಿಕ್ಕಿಗೆ ಕುಬಲಾಯಿ ಖಾನರು ಆಳಿದ ಚೀಣಾ. ಈ ವಿಸ್ತಾರವೆಲ್ಲ ನಮ್ಮದೇ, ರುಖ್. ಮಂಗೋಲರ ದಂಡು ಈ ನೆಲದಲ್ಲೆಲ್ಲ ಓಡಾಡಬೇಕು. (ಪ್ರೇಕ್ಷಕರತ್ತ ಮುಖ ಮಾಡಿ) ಮರುಭೂಮಿಯಲ್ಲಿನ ಬಿರುಗಾಳಿಯ ಹಾಗೆ ಬೀಸಬೇಕು.... ಆ ಚಂಡಮಾರುತಕ್ಕೆ ಇಡಿಯ ಲೋಕವೇ ತತ್ತರಿಸಿ ನಮಗೆ ಪರಾಕು ನುಡಿಯಬೇಕು. (ಮಗನತ್ತ ನೋಡಿ) ಏನನ್ನುತೀಯಾ?

ಷಾ ರುಖ್—(ಅನುಮಾನಿಸುತ್ತ) ಒಂದು ಪ್ರಶ್ನೆ ಕೇಳಬಹುದೆ, ಅಬ್ಬಾಜಾನ್?

ತೈಮೂರ—ಏನದು?

ಷಾ ರುಖ್—ಪ್ರಜಾಕೋಟಿಗೆ ಶಾಂತಿ ನೆಮ್ಮದಿ ಬೇಡವೆ?

ತೈಮೂರ—(ಅಸಹನೆಯಿಂದ) ಈ ಮಾತೆಲ್ಲ ನಿನಗೆ ದೊರೆತ ಅರ್ಥಹೀನ ಶಿಕ್ಷಣದ ಫಲ. ಅಲ್ಲ ರುಖ್, ಮಂಗೋಲ ಹುಟ್ಟುವುದು ಯಾತಕ್ಕೆ? ಇತರರನ್ನು ಆಳುವುದಕ್ಕೆ! ಲೋಕವನ್ನೇ ಗೆದ್ದು ಅದರ ಗಂಡನಾಗುವುದಕ್ಕೆ! ಶಾಂತಿ ನೆಮ್ಮದಿ ಎಂದು ತೆಪ್ಪಗೆ ಕುಳಿತರೆ, ಹೆಚ್ಚು ಬಲಾಢ್ಯನಾದ ಇನ್ನೊಬ್ಬ ಬಂದು ನಿನ್ನ ರಾಜ್ಯವನ್ನೇ ಕಸಿದುಕೊಳ್ಳುತಾನೆ. ನೆನಪಿಟ್ಟುಕೋ! ಇದು ಲೋಕದ ನಿಯಮ. ನಮ್ಮ ತೋಳುಗಳಲ್ಲಿ ಅಪಾರ ಬಲವಿದೆ ಎಂದು ಅರಿತಾಗ ಮಾತ್ರ, ಇತರರು ನಮಗೆ ಶರಣಾಗುತಾರೆ.

ಷಾ ರುಖ್—(ಆ ಮಾತು ನಿಜವೆಂದು ಮನಗಂಡವನಂತೆ) ಹೌದು, ಅಬ್ಬಾ ಜಾನ್.

ಸೇವಕ—(ಪ್ರವೇಶಿಸಿ, ವಂದಿಸಿ) ಸೇನಾನಿಗಳು ಆಗಮಿಸಿದಾರೆ.

ತೈಮೂರ—ಹುಂ. ಒಳಗೆ ಕಳುಹಿಸು.

(ಪೀರ್ ಮಹಮ್ಮದ್, ಖಿಜರ್ ಖಾನ್ ಪ್ರವೇಶಿಸಿ, ವಂದಿಸುವರು.)

ತೈಮೂರ—(ವಂದನೆ ಸ್ವೀಕರಿಸಿ) ಪೀರ್, ಖಿಜರ್! ಒಳ್ಳೆಯ ಹೊತ್ತಿನಲ್ಲಿ ಬಂದಿರಿ. (ಪೀಠದತ್ತ ನಡೆಯುತ್ತ) ನಮ್ಮ ಜೈತ್ರಯಾತ್ರೆಯ ವಿಷಯ ಯುವರಾಜರೊಡನೆ ಮಾತನಾಡುತಾ ಇದ್ದೆವು. (ತಾನು ಕುಳಿತು, ಸೇನಾನಿಗಳಿಗೆ ಆಸೀನರಾಗುವಂತೆ ಸನ್ನೆ ಮಾಡುವನು. ಅವರು ಕುಳಿತ ಬಳಿಕ) ದಿಲ್ಲಿಯನ್ನು ನಾವು ಆಕ್ರಮಿಸಿ ಹದಿನೈದು ದಿನಗಳಾದರೂ ನಮ್ಮ ಸೈನಿಕರ ಸುಲಿಗೆಯಾಟ ಇನ್ನೂ ಮುಗಿದಿಲ್ಲವೊ ?

ಪೀರ್ ಮಹಮ್ಮದ್—ಲೂಟಿಯ ವಿನೋದದಲ್ಲಿ ಯುದ್ಧದ ದಣಿವನ್ನು ಮರೆಯುತಿದಾರೆ. ದಿಲ್ಲಿಯನ್ನು ನಾವು ಹಿಡಿದ ದಿನ ಹಿಂದೂ ಮುಸಲ್ಮಾನ ಸ್ತ್ರೀಯರೆಲ್ಲ ಒಂದೇ ಚಿತೆಯಲ್ಲಿ ಪ್ರಾಣಬಿಟ್ಟರು. ಅದೊಂದೇ ಕೊರತೆ ನಮ್ಮವರಿಗೆ !

ತೈಮೂರ—ಅದೊಂದೇ ಕೊರತೆ. . . .(ನಿಷ್ಠುರವಾಗಿ) ಇನ್ನು ಸಾಕು ! ಇಷ್ಟಕ್ಕೇ ನಿಲ್ಲಿಸಲಿ !

ಖಿಜರ್ ಖಾನ್—ಸಮ್ರಾಟರು ಏನೋ ತೀರ್ಮಾನಿಸಿದಂತಿದೆ.

ತೈಮೂರ—(ನೇರ ಉತ್ತರ ನೀಡದೆ) ಯುದ್ಧಭೂಮಿಯಿಂದ ಕೈಗೆ ಸಿಗದೆ ಓಡಿಹೋದ ಮಹಮ್ಮದ್ ಷಾ, ಮಲ್ಲೂಖಾನರದೇನಾದರೂ ಸುದ್ದಿ ಇದೆಯೊ ?

ಪೀರ್ ಮಹಮ್ಮದ್—ದಕ್ಷಿಣ ದಿಕ್ಕಿಗೆ ವಿಂಧ್ಯಪರ್ವತದ ಕಡೆಗೆ ಹೋದರು ಎಂದು ಬೇಹುಗಾರರು ವರದಿಮಾಡಿದಾರೆ.

ತೈಮೂರ— ಇರಲಿ. ದೊಡ್ಡದಲ್ಲ. ಹಿಂದೂಖುಷ್ ಪರ್ವತದಿಂದ ದಿಲ್ಲಿಯತನಕ ನಾವು ಗೆದ್ದಿರುವ ಭೂಭಾಗಕ್ಕೆಲ್ಲ, ನಾಳೆ ನಮಗೆ ಮುಜುರೆ ಸಲ್ಲಿಸುವ ಇತರ ಪ್ರದೇಶಕ್ಕೆಲ್ಲ, ಒಬ್ಬ ಪ್ರತಿನಿಧಿಯನ್ನು ಈಗ ನೇಮಿಸಬೇಕು. ತಿಳಿಯಿತೆ ಖಿಜರ್ ಖಾನ್ ?

ಖಿಜರ್ ಖಾನ್—ತಿಳಿಯಿತು, ಬಾದಶಹ.

ತೈಮೂರ—ನೀವೇ ಆ ಪ್ರತಿನಿಧಿ.

ಖಿಜರ್ ಖಾನ್—(ತಬ್ಬಿಬ್ಬಾಗಿ) ನಾನು !. . .

ತೈಮೂರ—ಹ್ಞಾ. ನನಗೆ ಇನ್ನೊಬ್ಬ ಮಗ ಇದ್ದಿದ್ದರೆ ಅವನಿಗೇ ಇಲ್ಲಿ ಪಟ್ಟ ಕಟ್ಟುತ್ತಿದ್ದೆವು. ಈಗ ನಿಮ್ಮನ್ನೇ ನಮ್ಮ ಕಿರಿಯ ಸೋದರ ಎಂದು ಭಾವಿಸುತೇವೆ.

ಖಿಜರ್ ಖಾನ್—ಕೃತಜ್ಞ, ಜಹಾಪನ.

ತೈಮೂರ—ಇಷ್ಟಾದ ಮೇಲೆ ಇನ್ನು ಊರಿಗೆ ಪಯಣ, ಎಂದುಕೊಂಡಿರೋ ಪೀರ್ ಮಹಮ್ಮದ್ ?

ಪೀರ್ ಮಹಮ್ಮದ್—(ಕಕ್ಕಾವಿಕ್ಕಿಯಾಗಿ) ನಾನು—ಸಮ್ರಾಟರು. . . .

ತೈಮೂರ—ನೀವು ಸಮ್ರಾಟರಲ್ಲ, ಮಂಗೋಲ ಸೈನ್ಯದ ಮಹಾದಂಡ ನಾಯಕರು ! ಇಪ್ಪತ್ತು ಸಹಸ್ರ ಸೈನಿಕರನ್ನು ಖಿಜರ್ ಖಾನರ ಬಳಿ ಬಿಟ್ಟು, ಉಳಿದ ದಂಡಿನೊಡನೆ ಉತ್ತರದ ದಾರಿ ಹಿಡಿದು, ಇನ್ನು ಮೂರು ತಿಂಗಳ ಕಾಲ, ಅಳಿದುಳಿದ ರಾಜ್ಯಗಳನ್ನು ಸುಟ್ಟು ತಿಂದು, ಸಿಂಧೂ ನದಿಯಲ್ಲಿ ಮಿಂದು, ಕಾಶ್ಮೀರವನ್ನು ದೋಚಿ, ಅಲ್ಲಿಂದ ಹುಟ್ಟೂರಿಗೆ ! (ರಾಜಕುಮಾರನತ್ತ ನೋಡುವನು. ಆತ ಸಂತೃಪ್ತಿಯಿಂದ ತಲೆ ಆಡಿಸುವನು.)

ಪೀರ್ ಮಹಮ್ಮದ್—ಅಪ್ಪಣೆ, ಜಹಾಪನ.

ತೈಮೂರ—ಸಮ್ರಾಟ ಪ್ರತಿನಿಧಿ ಖಿಜರ್ ಖಾನರೇ ! ಏನೆನ್ನುತೀರಿ ?

ಖಿಜರ್ ಖಾನ್—ಬಾದಶಹರ ಬಯಕೆ ಈ ಗುಲಾಮನ ಪಾಲಿಗೆ ಕಟ್ಟಾಜ್ಞೆ.

ತೈಮೂರ—ಒಳ್ಳೇದು. (ಧ್ವನಿ ಬದಲಿಸಿ) ನೀವಿಬ್ಬರೂ ಉಪಾಹಾರ ಸ್ವೀಕರಿಸಿದಿರೊ ?

ಪೀರ್ ಮಹಮ್ಮದ್

ಖಿಜರ್ ಖಾನ್—(ಜೊತೆಯಾಗಿ) ಹೌದು.

ತೈಮೂರ—(ಏಳುತ್ತ, ಮುಗುಳು ನಗುತ್ತ) ನಾವು ಸ್ವೀಕರಿಸಿಲ್ಲ. ನಮಗೆ ಅಪ್ಪಣೆ ಕೊಡಿ ! (ಪೀರ್ ಮಹಮ್ಮದ್—ಖಿಜರ್ ಖಾನರಿಬ್ಬರೂ ಗಡಬಡಿಸಿ ಎದ್ದು, ಸಮ್ರಾಟನಿಗೆ ವಂದಿಸುವರು.)

(ತೆರೆ)

ದೃಶ್ಯ ೨

[ಸಮರ್ಕಂದದಲ್ಲಿ ಅಂತಃಪುರ. ಪ್ರೇಕ್ಷಕರಿಗೆ ಪರಿಚಿತವಾದ ರಂಗಸಜ್ಜಿಕೆ. ತೆರೆ ಸರಿದಾಗ ಸಮ್ರಾಜ್ಞಿ ಹಾನಿಮ್ ಅಗಲ ಪೀಠದ ಮೇಲೆ ತುಸು ಮೈಮುದುಡಿಕೊಂಡು ಮ್ಲಾನವದನೆಯಾಗಿ ಕುಳಿತಿದಾಳೆ. ಸರಿದ ತೆರೆಯೊಡನೆ ಹಿನ್ನೆಲೆಯಿಂದ ಉತ್ಸಾಹೀ ಜನಸಮುದಾಯದ ಕಲರವ, ಕೊಂಬು ತಮಟೆಗಳ ಸದ್ದು ಕೇಳಿ ಬರುತ್ತಿವೆ. ಅದು ಹಿಂದೂಸ್ಥಾನದ ಮೇಲಣ ದಂಡಯಾತ್ರೆಯಿಂದ ಮರಳಿ ಬರುತ್ತಿರುವ ತೈಮೂರನಿಗೂ ಷಾರುಖ್‌ನಿಗೂ ಸಮರ್ಕಂದ ನೀಡುತ್ತಿರುವ ಸ್ವಾಗತ. ಜನತೆ ಜಯಘೋಷ ಮಾಡುತ್ತಿದೆ. "ಮಂಗೋಲ ಮಹಾಪ್ರಭು ತೈಮೂರ್‌ಖಾನ್–ಜಿಂದಾಬಾದ್!" "ಹಿಂದೂಸ್ಥಾನ ವಿಜೇತ ತೈಮೂರ್‌ಖಾನ್–ಜಿಂದಾಬಾದ್ !" "ಮಂಗೋಲ ಯುವರಾಜ ಷಾ ರುಖ್–ಜಿಂದಾಬಾದ್ !"

ಅಮಿಾನಾ ಬಿಳಿಯ ಪಾರಿವಾಳವನ್ನು ಹಿಡಿದುಕೊಂಡು ಜಾಲಂದ್ರದ ಬಳಿ ಹೊರಕ್ಕೆ ನೋಡುತ್ತ ನಿಂತಿದ್ದಾಳೆ.]

ಅಮಿಾನಾ—ಕೇಳಿದಿರಾ, ಸಮ್ರಾಜ್ಞಿ ? ಪ್ರಜೆಗಳು ರಾಜಕುಮಾರರಿಗೂ ಜಯಕಾರ ಮಾಡುತಿದಾರೆ !

ಹಾನಿಮ್—ಹುಂ.

ಅಮಿಾನಾ—ಈ ಸಲದ್ದು ಅಭೂತಪೂರ್ವ ಸ್ವಾಗತ !

ಹಾನಿಮ್—ಮೆರವಣಿಗೆ ಕಾಣಿಸುತಿದೆಯೆ ?

ಅಮಿಾನಾ—ಹ್ಞ ! ಸಮ್ರಾಜ್ಞಿ. ಅರಮನೆಯ ಬೀದಿಗೆ ಬಂತು. ಅವ್ವಯ್ಯಾ ! ಸಂಭ್ರಮ-ಸಡಗರ ಎಂದರೆ ಇದು ! (ಈಗ ಮತ್ತಷ್ಟು ಸ್ಪಷ್ಟವಾದ ಕಲರವ) ಶ್ವೇತಾಶ್ವದ ಮೇಲೆ ಸಮ್ರಾಟರು ! ಕಂದು ಕುದುರೆಯ ಮೇಲೆ ಷಾ ರುಖ್ ! ಸೇನಾನಿಗಳು, ಸೈನಿಕರು ಹೆಜ್ಜೆ ಹೆಜ್ಜೆಗೂ ಮುಜುರೆ ಸಲ್ಲಿಸುತ್ತಿರುವ ಪ್ರಜಾಕೋಟಿ ! ಎಷ್ಟೊಂದು ಬಣ್ಣಗಳು ! ಎಂಥೆಂಥ ಉಡುಪುಗಳು !

ಹಾನಿಮ್—ಸಾಕು, ಅಮಿಾನಾ. ಪ್ರತಿ ಸಲವೂ ಒಂದೇ ಹಾಡು ನಿನ್ನದು.

ಅಮಿಾನಾ—ಸಮ್ರಾಟರು ಬರುತ್ತ ದಾರಿಯಲ್ಲೇ ಕೀರ್ತಿಮಂದಿರವನ್ನು ಕಂಡಿರಬೇಕು, ಸಂತುಷ್ಟರಾಗಿರಬೇಕು. . . . ಆ ಕಡೆಗೂ ಈ ಕಡೆಗೂ ಅದೆಂಥ

ಠೀವಿಯಿಂದ ಕತ್ತುಕೊಂಕಿಸುತ್ತ ಪ್ರಜೆಗಳ ವಂದನೆಗಳನ್ನು ಸ್ವೀಕರಿಸುತಿದಾರೆ! ಬಂದು ನೋಡುವುದಿಲ್ಲವೆ, ಸಮ್ರಾಜ್ಞಿ?

ಹಾನಿಮ್—ಯಾವ ಮುಖದಿಂದ ನೋಡಲಿ?

ಅಮೀನಾ—(ದುಗುಡದಿಂದ) ರಾಜಕುಮಾರ ಮೊದಲ ಬಾರಿ ಜೈತ್ರಯಾತ್ರೆಯಿಂದ ಬರುತಿದಾರೆ. ಅವರನ್ನು ನೋಡುವುದಕ್ಕಾದರೂ ಬನ್ನಿ.

ಹಾನಿಮ್—ಹೇಗೂ ಇಲ್ಲಿಗೆ ಬರುತಾನಲ್ಲ, ಅಮೀನಾ.

ಅಮೀನಾ—ನಿಮ್ಮಿಷ್ಟ. ಸಮ್ರಾಟರೂ ರಾಜಕುಮಾರರೂ ಕುದುರೆಗಳಿಂದ ಇಳಿಯುತಿದಾರೆ, ಪಾರಿವಾಳವನ್ನು ಹಾರಿಸಿಬಿಡಲೆ?

ಹಾನಿಮ್—ಹುಂ.

ಅಮೀನಾ—(ಅಳುತಳುತ, ಹಕ್ಕಿಗೆ) ಕುಟುರ್ ಕುಟುರ್, ಹಾರಿ ಹೋಗಿ ಸಮ್ರಾಟರಿಗೂ ರಾಜಕುಮಾರರಿಗೂ ಉಮ್ಮ ಕೊಡು. (ಪಾರಿವಾಳ ರೆಕ್ಕೆ ಬಡಿಯುತ್ತ ಜಾಲಂದ್ರದಿಂದ ಹೊರಹೋಗುವುದು.)

ಹಾನಿಮ್—(ನೋವು ಅನುಭವಿಸುತ್ತ ನರಳುವಂತೆ) ಯಾ ಅಲ್ಲಾ. . . .

ಅಮೀನಾ—(ಸಮ್ರಾಜ್ಞಿಯ ಬಳಿಗೆ ಧಾವಿಸಿ, ನೆಲದ ಮೇಲೆ ಆಕೆಯ ಪಾದಗಳ ಬಳಿ ಕುಸಿಕುಳಿತು, ಯಾಚಿಸುವ ಧ್ವನಿಯಲ್ಲಿ) ಒಡತಿ, (ಗದ್ಗದ ಕಂಠದಿಂದ) ನನ್ನದೊಂದು ಮಾತು ನಡೆಸಿಕೊಡಿ . . . .ಖುದಾನ ಆಣೆ! ಹೀಗಿರಬೇಡಿ! ಒಂದಿಷ್ಟು ಲವಲವಿಕೆ ತೋರಿಸಿ! ಕಣ್ಣುಗಳಲ್ಲಿ ಕಾಂತಿ ತುಂಬಿಕೊಳ್ಳಿ! ಇಷ್ಟು ದಿನಗಳಿಂದ ನಾನು ಹೇಳುತ್ತ ಬಂದಿಲ್ಲವೆ, ಸಮ್ರಾಜ್ಞಿ? ಇಲ್ಲಿ ಏನೂ ನಡೆದಿಲ್ಲ! ಅದೊಂದು ಕನಸು. ಕೆಟ್ಟ ಕನಸು. ಅಷ್ಟೆ! ಎಲ್ಲಿ, ಇಲ್ಲಿ ನೋಡಿ!

ಹಾನಿಮ್—ಅಮೀನಾ, ಸಾವು ಬರಬಾರದಿತ್ತೆ ನನಗೆ?

ಅಮೀನಾ—ಆಡಬಾರದು ಅಂಥ ಮಾತು. . . .ಮರೆಯಬೇಡಿ, ಒಡತಿ. ಸಮ್ರಾಟರು ಇಲ್ಲದ ವೇಳೆಯಲ್ಲಿ, ನಿಜವಾದ ಸಮ್ರಾಜ್ಞಿಯಂತೆ ನೀವು ನಡೆದುಕೊಂಡಿರಿ. ಗುರುತರ ಹೊಣೆಯನ್ನು ನಿರ್ವಹಿಸಿದಿರಿ. ಜಗತ್ತಿನಲ್ಲಿ ಬೇರೆಲ್ಲೂ ಕಾಣಸಿಗದ ಅಪ್ರತಿಮವಾದ ಕೀರ್ತಿ ಮಂದಿರವನ್ನು ಕಟ್ಟಿಸಿ ಪೂರೈಸಿದಿರಿ. ಸಮ್ರಾಟರು ಸಂಪ್ರೀತರಾಗುತಾರೆ. ನಿಮ್ಮ ಬದುಕಿನಲ್ಲಿ ಇಂಥ ಸುದಿನ ಬೇರೊಂದು ಬರಲಾರದು.

ಹಾನಿಮ್—(ಅಳುತ್ತ) ನನ್ನ ಬದುಕಿನಲ್ಲಿ ಇಂಥ ದುರ್ದಿನ ಬೇರೊಂದು ಬರುವುದಿಲ್ಲ, ಅಮಿನಾ!

ಅಮಿನಾ—ಅಯ್ಯೋ! ಎಂಥ ಮಾತಾಡುತೀರಿ!

(ಕೊಂಬು ತಮಟೆಗಳ ಸದ್ದು ಒಂದು ಕ್ಷಣ ತೀವ್ರಗೊಂಡು, ನಿಂತು ಹೋಗುತ್ತದೆ. ಜನರ ಗುಜು ಕಡಮೆಯಾಗುತ್ತ ನೀರವತೆ ನೆಲೆಸುತ್ತದೆ.)

(ಅಮಿನಾ ಗಡಬಡಿಸಿ ಏಳುವಳು. ತನ್ನ ಉಡುಪಿನ ಅಂಚಿನಿಂದ ಸಮ್ರಾಜ್ಞಿಯ ಕಣ್ಣುಗಳನ್ನು ಒರೆಸುವಳು.)

ಹಾನಿಮ್—ಹೊರಟುಹೋಗಬೇಡ ಅಮಿನಾ, ಇಲ್ಲೇ ಇರು.

ಅಮಿನಾ—ಹೂಂ, ಒಡತಿ. (ನೇಪಥ್ಯದಲ್ಲಿ ಸ್ತುತಿಪಾಠಕರ ಧ್ವನಿ ಕೇಳಿಸುವುದು.) ಏಳಿ ಸಮ್ರಾಜ್ಞಿ, ಇನ್ನು ಏಳಿ.

(ಹಾನಿಮ್ ಮೆಲ್ಲನೆ ಎದ್ದು ನಿಲ್ಲುವಳು. ಮೂಲೆಗೆ ಸರಿದು ನಿಂತ ಅಮಿನಾಳನ್ನು ಆರ್ತನೋಟದಿಂದ ನೋಡುವಳು. ಸ್ತುತಿಪಠನ ಕೇಳತೊಡಗಿದಂತೆ, ಸುಧಾರಿಸಿಕೊಳ್ಳಲು ಯತ್ನಿಸುತ್ತ ದೃಷ್ಟಿಯನ್ನು ನೇಪಥ್ಯದತ್ತ ಹೊರಳಿಸುವಳು)

ಸ್ತುತಿಪಾಠಕರು—(ನೇಪಥ್ಯದಲ್ಲಿ) ದಿಲ್ಲಿಯ ಸುಲ್ತಾನನನ್ನು ಸದೆಬಡಿದು ಹಿಂದೂಸ್ಥಾನವನ್ನು ಗೆದ್ದ ವೀರಾಧಿವೀರ, ರಣ ಕೇಸರಿ ಚೆಂಗೀಸಖಾನರ ವಂಶಜ, ಮಂಗೋಲ ಸಮ್ರಾಟ, ವೈರಿಕುಲ ಕುಠಾರ, ಬಾದಶಹ ತೈಮೂರಖಾನರು ಯುವರಾಜರೊಡಗೂಡಿ ಅಂತಃಪುರಕ್ಕೆ ದಯೆ ಮಾಡಿಸುತ್ತಿದಾರೆ—ಹೋಷಿಯಾರ್! ಹೋಷಿಯಾರ್!

(ಅಮಿನಾ, ಎದೆಯ ಮೇಲೆ ಅಂಗೈಗಳನ್ನಿಟ್ಟುಕೊಂಡು ನಿಂತವಳು, ಕೈಗಳನ್ನು ಕೆಳಕ್ಕೆ ಬಿಡುವಳು.)

(ಕುಂಟ ತೈಮೂರನ ಕ್ಲಾಂಗ್ ಕ್ಲಾಂಗ್‌ನಡಿಗೆ. ರಂಗಸ್ಥಲವನ್ನು ಪ್ರವೇಶಿಸಿ ಬಾಗಿಲ ಬಳಿಯಲ್ಲೆ ನಿಲ್ಲುವನು. ಆತನ ಹಿಂದೆ ಷಾ ರುಖ್.)

ತೈಮೂರ—(ಎರಡೂ ಕೈಗಳನ್ನು ಮುಂದಕ್ಕೆ ಚಾಚಿ, ತುಸು ಮೇಲಕ್ಕೆ ಎತ್ತಿ, ಹರ್ಷ ವಿಸ್ಮಯಗಳ ಧ್ವನಿಯಲ್ಲಿ) ಏನದ್ಭುತ! ಮನುಷ್ಯ ಮಾತ್ರನಿಂದ ಇಂತಹ ಸುಂದರ ಮಂದಿರ ನಿರ್ಮಾಣ ಸಾಧ್ಯ ಎಂದರೇನು? ನಮ್ಮ

ವಿಜಯಗಳ ಸ್ಮಾರಕವಾಗಿ ಒಬ್ಬ ಶಿಲ್ಪಿ ಅದನ್ನು ಕಟ್ಟಿದ ಅಂದರೇನು? (ಸಮ್ರಾಜ್ಞಿಯತ್ತ ಒಮ್ಮೆ ನೋಡಿ) ಬೇಗಂ ಸಾಹೀಬಾ! ಬೀಬಿ ಹಾನಿಮ್! ನೀವೆಂಥ ಜಾದೂ ಮಾಡಿಬಿಟ್ಟಿರಿ! ಲೋಕದ ಸೊಬಗನ್ನೆಲ್ಲ ತಂದು ಹಿಂಡಿಮಾಡಿದ ರಸಘಟ್ಟ! ಮೈನವಿರೆಬ್ಬಿಸುವ ಆ ಕಮಾನು ಸ್ತಂಭಗಳೋ–ಗಗನಚುಂಬಿ, ಗಗನಚುಂಬಿ! (ಮಾತಿನ ಓಘದಲ್ಲಿ ಮೈಮರೆತವನು ಒಮ್ಮೆಲೆ ಪತ್ನಿಯನ್ನು ದಿಟ್ಟಿಸಿ, ಎಚ್ಚೆತ್ತು) ನಮಗೂ ಗಗನವನ್ನೇ ತಬ್ಬಿಕೊಂಡು ಚುಂಬಿಸಬೇಕು, ಎನಿಸುತಿದೆ!. . . .ಅರೇ! ಈ ಸಲವೂ ಕಣ್ಣೀರು! ಹ್ಞ. (ನೆನಪಾದವನಂತೆ) ಆನಂದಾಶ್ರು, ಆನಂದಾಶ್ರು! ಅಲ್ಲ? (ಹಾನಿಮ್ ಮಾತನಾಡಲೆಂದು ತುಟಿಗಳನ್ನು ಅರೆತೆರೆಯುವಳು. ಮಾತು ಹೊರಡುವುದಿಲ್ಲ, ಮುಖ ಬಿಳಿಚಿಕೊಳ್ಳುವುದು. ಶರೀರ ಕಂಪಿಸುವುದು. ಬವಳಿ ಬಂದಂತೆ ಅನಿಸಿದರೂ ಪ್ರಯತ್ನ ಪೂರ್ವಕವಾಗಿ ನಿಂತೇ ಇರುವಳು.) (ಅರ್ಧ ತನ್ನಷ್ಟಕ್ಕೆ) ಇದು ಹೊಸದು, ಯಾವತ್ತೂ ಹೀಗೆ ಇದ್ದವರಲ್ಲ, ಬೇಗಂ.

ಅಮೀನಾ—(ಮೂಲೆಯಿಂದ ಧಾವಿಸಿ ಬಂದು, ತೈಮೂರನೆದುರು ಅವಸರವಾಗಿ ಕುರ್ನಿಸು ಮಾಡುವಳು. 'ನೀನು ಇಲ್ಲಿ ಯಾಕಿದೀಯಾ?' ಎನ್ನುವಂತೆ ತೈಮೂರ ಅಸಹನೆಯಿಂದ ಆಕೆಯನ್ನು ನೋಡುವನು.) ಸಮ್ರಾಜ್ಞಿಯವರಿಗೆ ದೇಹಾಲಸ್ಯ, ಬಾದಶಹ. (ಹಿಂದಕ್ಕೆ ಸರಿದು ನಿಲ್ಲುವಳು.)

ತೈಮೂರ—(ಎರಡು ಹೆಜ್ಜೆ ಮುಂದುವರಿದು) ದೇಹಾಲಸ್ಯ? ಅದೆಂಥಹ ಕಾಹಿಲೆ?

ಅಮೀನಾ— ಇಂಥದೇ ಎಂದು ಹೇಳುವ ಹಾಗಿಲ್ಲ.

ತೈಮೂರ—(ನಿಷ್ಠುರವಾಗಿ) ಅರಮನೆಯ ವೈದ್ಯರು ಏನೆಂದರು?

ಅಮೀನಾ—(ಭಯಪಡುತ್ತ) ಅವರಿಗಿನ್ನೂ ತೋರಿಸಿಲ್ಲ.

ತೈಮೂರ—(ಹಾನಿಮಳ ಬಳಿ ಸಾರಿ, ಅವಳೆದುರು ನಿಂತು, ಧ್ವನಿಯನ್ನು ಮೃದುಗೊಳಿಸಲು ಯತ್ನಿಸುತ್ತ)ಮಾತನಾಡಲು ಆಗುವುದಿಲ್ಲವೆ, ಸಮ್ರಾಜ್ಞಿ? (ಹಾನಿಮ್ ತಲೆ ತಗ್ಗಿಸಿ ನಿಲ್ಲುವಳು)

ಅಮೀನಾ—ಗಂಟಲು ನೋವು.

ತೈಮೂರ—(ಅಮೀನಾ ಹೇಳಿದುದನ್ನು ಗಣನೆಗೆ ತೆಗೆದುಕೊಳ್ಳದೆ, ಹಾನಿಮಳ ಗಲ್ಲವನ್ನು ತನ್ನ ಬೆರಳುಗಳಿಂದ ಹಿಡಿದು, ಮೇಲಕ್ಕೆತ್ತಿ) ಎಲ್ಲಿ, ನನ್ನನ್ನು ನೋಡಿ.

. . . . (ಕ್ಷಣ ಮೌನ)ಯಾವುದೂ ಮೊದಲಿನಂತೆ ಇಲ್ಲವೇ ಇಲ್ಲ. ಕಣ್ಣು, ಮೂಗು, ಕೆನ್ನೆ. . . . (ವಿಸ್ಮಯದಿಂದ) ಏನು ಈ ಗುರುತು ? (ತಗ್ಗಿದ ಧ್ವನಿಯಲ್ಲಿ) ಈ . . . . ಗು–ರು–ತು. . . . (ಒಂದು ಕ್ಷಣ ಸ್ಮಶಾನ ಮೌನ. ಒಮ್ಮೆಲೆ ಗಾಯಗೊಂಡ ಕಾಡುಪ್ರಾಣಿಯಂತೆ ತೈಮೂರ ಚೀರುವನು.) ಆ ! ! ! (ಮತ್ತೆ ಮೌನ) (ರೋಷಾವೇಶದಿಂದ ಕಂಪಿಸುವ ಧ್ವನಿ) ನನ್ನ ವಿಜಯಗಳ ಸ್ಮಾರಕವಾಗಿ ಆ ಮಂದಿರವನ್ನು ಆತ ನಿರ್ಮಿಸಲಿಲ್ಲ ! ನನ್ನ ಕೀರ್ತಿಗೆ ಕನ್ನಡಿಯಾಗಿ ಅದನ್ನು ಆತ ಕಟ್ಟಲಿಲ್ಲ !

(ಷಾ ರುಖ್ ಹಿಂಬದಿಗೆ ಮೂಲೆಗೆ ಸರಿದು ತಲೆ ತಗ್ಗಿಸಿ ನಿಲ್ಲುವನು.)

ಹಾನಿಮ್—(ಪ್ರಯಾಸದಿಂದ ಧ್ವನಿ ಹೊರಡಿಸಿ, ಬಿಕ್ಕುತ್ತ) ಜಹಾಪನ, ನಾನು ನಿರಪರಾಧಿ !

ತೈಮೂರ—(ಆಕೆ ಮಾತನಾಡಿದುದೇ ಅನಿರೀಕ್ಷಿತವಾಗಿತ್ತು ಎಂಬಂತೆ ಬೆಚ್ಚಿ ಬಿದ್ದು) ಮುಚ್ಚು ಬಾಯಿ ! ಕುಲಟೆ ! (ವ್ಯಂಗ್ಯವಾಗಿ) ನಿನಗೆ ಗಂಟಲು ನೋವು. ನೀನು ಮಾತಾಡಬಾರದು. (ಧ್ವನಿ ಏರಿಸಿ) ಮತ್ತೆ ತುಟಿ ತೆರೆದೆಯೋ ಖಡ್ಗದಿಂದ ನಾಲಿಗೆ ಸೀಳೇನು ! (ಧ್ವನಿ ತಗ್ಗಿಸಿ) ನನ್ನ ವಿಜಯಗಳ ಸ್ಮಾರಕವಾಗಿ ಅದನ್ನು ಆತ ರಚಿಸಲಿಲ್ಲ. (ಬಿಕ್ಕುವ ಸಂಕಟದ ಧ್ವನಿ) ನನ್ನ ವಿಜಯಗಳ ಸ್ಮಾರಕವಾಗಿ ಅದನ್ನು ಆತ ರಚಿಸಲಿಲ್ಲ. . . (ಚೀತ್ಕಾರ) ಔ ! ! ! ಎಲ್ಲಿ ನನ್ನ ಕುದುರೆ ? (ಕುಂಟುತ್ತ ನೇಪಥ್ಯದತ್ತ ಓಡತೊಡಗುತ್ತ) ಎಲ್ಲಿ ಆತ ? ಆತ ಎಲ್ಲಿ ? (ಕೂಗಿ ಕರೆಯುತ್ತ) ಶಿಲ್ಪಿ ದಾವೂದ್ ! ಶಿಲ್ಪಿ ದಾವೂದ್ ! (ನಿರ್ಗಮನ)

ಹಾನಿಮ್—ಅಮೀನಾ ! (ಕೆಳಕ್ಕುರುಳುವಳು).

ಅಮೀನಾ—ಸಮ್ರಾಜ್ಞಿಯ ಬಳಿಗೆ ಧಾವಿಸುತ್ತ) ಒಡತೀ ! ಒಡತೀ !. . .

ಷಾ ರುಖ್—(ನಿಂತಲ್ಲಿಂದ ತಾಯಿಯ ಬಳಿಗೆ ಓಡಿ ಬರುತ್ತ, ಶೋಕದ ಧ್ವನಿಯಲ್ಲಿ) ಅಮ್ಮಾಜಾನ್ ! ಅಮ್ಮಾಜಾನ್ !

(ತೆರೆ)

ದೃಶ್ಯ ೩

[ತೆರೆ ಸರಿದಾಗ, ಹಿನ್ನೆಲೆಯ ಪರದೆ ತೋರಿಸುವುದು ದೂರದಲ್ಲಿ ಭವ್ಯವಾಗಿ ನಿಂತಿರುವ ಪ್ರಾರ್ಥನಾ ಮಂದಿರ ಹಾಗೂ ಕಮಾನು ಕಂಬಗಳನ್ನು.

ರಂಗಸ್ಥಲದ ಹಿಂಭಾಗದ ಅಂಚಿನಲ್ಲಿ ಪ್ರಾರ್ಥನಾ ಮಂದಿರದತ್ತ ಮುಖಮಾಡಿ ಮಂಡಿಯೂರಿ ಶಿಲ್ಪಿ ದಾವೂದ್ ಪ್ರಾರ್ಥಿಸುತ್ತಿದ್ದಾನೆ. ಪ್ರಾರ್ಥನೆಯ ಕೊನೆಯ ಹಂತ.

ಎದ್ದವನೇ ಅತ್ತಿತ್ತ ತಿರುಗಿ, ಪ್ರೇಕ್ಷಕರ ಕಡೆಗೂ ಒಮ್ಮೆ ನೋಡಿ, ನೇಪಥ್ಯದತ್ತ ಹೊರಳಿ, ಸಹಾಯಕರಿಬ್ಬರನ್ನು ಹೆಸರು ಹಿಡಿದು ಕರೆಯುವನು.]

ಶಿಲ್ಪಿ ದಾವೂದ್— ಯಾಕೂಬ್ ! ರಫೀಖ್ ! . . . ಯಾ-ಕೂಬ್ ! ರಫೀಖ್!

(ಇಬ್ಬರು ಸಹಾಯಕ ಶಿಲ್ಪಿಗಳೂ ಪ್ರವೇಶಿಸುವರು. ಯಾಕೂಬ್ ವೃದ್ಧ, ರಫೀಖ್ ಯುವಕ.)

ರಫೀಖ್— ಕರೆದಿರಾ ಶಿಲ್ಪಿವರ್ಯ ?

ಶಿಲ್ಪಿ ದಾವೂದ್— ಹ್ಞ, ರಫೀಖ್. ಇಲ್ಲಿ ಇನ್ನು ನನಗೆ ಕೆಲಸವಿಲ್ಲ. ನಾನು ನನ್ನ ತಾಯ್ನಾಡಿಗೆ ಹೊರಡುತೇನೆ.

ರಫೀಖ್— ನಾನೂ ಬರಬಹುದೆ, ಶಿಲ್ಪಿವರ್ಯ ?

ಶಿಲ್ಪಿ ದಾವೂದ್— ಬರುತೀಯಾ ? ಯಾಕಾಗಬಾರದು ? ನಿನಗಿಷ್ಟವಿರುವವರೆಗೆ ಈ ಒಂಟಿ ಜೀವಕ್ಕೆ ನೀನೊಬ್ಬ ಸಂಗಡಿಗನಾಗು.

ಯಾಕೂಬ್— ಹುಚ್ಚು ! ಬರೇ ಹುಚ್ಚು ! ರಫೀಖನಿಗೆ ಮದುವೆ ಗೊತ್ತು ಮಾಡಿದಾರೆ. ಅದಕ್ಕೇ ಓಡಿಹೋಗಲು ಯೋಚಿಸುತಿದಾನೆ.

ರಫೀಖ್— (ಮುನಿಸು) ಹೋಗು, ಮಾವ.

ಶಿಲ್ಪಿ ದಾವೂದ್—ಮದುವೆ ! ಹಹ್ಹ ಹ್ಹ !

ಯಾಕೂಬ್— (ರಮಿಸುವ ಧ್ವನಿಯಲ್ಲಿ) ಶಿಲ್ಪಿವರ್ಯ ! ವಯಸ್ಸಿನಲ್ಲಿ ದೊಡ್ಡವನಾದ ನಾನು ನಿಮಗೂ ಒಂದು ಮಾತು ಹೇಳುತೇನೆ. ಊರಿಗೆ ಹೋದ ಮೇಲೆ ನೀವೂ—

ಶಿಲ್ಪಿ ದಾವೂದ್— ಯಾಕೂಬ್. . . . ನಿನಗೆ ಮುಪ್ಪು ಬಂತು ; ಬುದ್ಧಿ ಬರಲಿಲ್ಲ. ಇರಲಿ, ನಿಮ್ಮ ಜತೆ ಚಕ್ಕಂದ ಆಡಲು ನನಗೆ ಸಮಯವಿಲ್ಲ. (ರಫೀಖನಿಗೆ) ನನ್ನ ಉಪಕರಣಗಳನ್ನಿಷ್ಟು ಕಟ್ಟಿಕೊಡುತೀಯಾ, ಮದುವೆಯ ಗಂಡೆ ?

ರಫೀಖ್— ಕಟ್ಟಿತರುತೇನೆ, ಶಿಲ್ಪಿವರ್ಯ. (ನಿಷ್ಕ್ರಮಣ)

ಯಾಕೂಬ್— ಹುಚ್ಚು ! ಬರೀ ಹುಚ್ಚು ! ಸಮ್ರಾಟರು ಹಿಂದೂಸ್ಥಾನದಿಂದ ಮರಳಿ ಬರುತ್ತ, ಪ್ರಾರ್ಥನಾ ಮಂದಿರವನ್ನು ದೂರದಿಂದಲೇ ನೋಡಿ

ಹೋದರಲ್ಲ? ಇನ್ನು ಸ್ವಲ್ಪ ಹೊತ್ತಿನಲ್ಲೇ ನಿಮಗೆ ಅರಮನೆಯಿಂದ ಕರೆ ಬರುತದೆ; ಬಿಳಿಯ ಕುದುರೆಯ ಮೇಲೆ ನಿಮ್ಮ ಸವಾರಿ ಆಗುತದೆ; ರಾಜಧಾನಿಯಲ್ಲಿ ನಿಮ್ಮನ್ನು ಮೆರವಣಿಗೆ ಮಾಡಿಸುತಾರೆ. ತಿಳಿಯಿತೆ, ಶಿಲ್ಪಿವರ್ಯ? ಈ ತನಕ ಯಾರಿಗೂ ನೀಡದ ಭಾರೀ ಉಡುಗೊರೆಗಳನ್ನು ನಿಮಗೆ ಕೊಡುತಾರೆ. ಒಬ್ಬಳು ಮಂಗೋಲ ಹೆಣ್ಣನ್ನು ಕೊಟ್ಟರೂ ಕೊಟ್ಟರೆ . . . .

ಶಿಲ್ಪಿ ದಾವೂದ್—ಇಲ್ಲ! ನನ್ನ ಕಲೆ, ಕೊಳ್ಳುವ ಸರಕಲ್ಲ! ಹೊನ್ನಿನ ಆಸೆಗಾಗಿ ನಾನಿದನ್ನು ಕಟ್ಟಲಿಲ್ಲ!

ಯಾಕೂಬ್—ಇದೂ ಹುಚ್ಚು! . . .ಶಿಲ್ಪಿವರ್ಯ, ನಿಮ್ಮ ಜತೆ ದುಡಿದ ಐದು ಸಹಸ್ರ ಜನ ಸಮ್ರಾಟರಿಂದ ತಮಗೇನಾದರೂ ದೊರೆತೀತು, ನೀವು ಕೊಡಿಸುತೀರಿ, ಎಂದು ನಂಬಿದಾರೆ—ಬಲ್ಲಿರಾ?

ಶಿಲ್ಪಿ ದಾವೂದ್—ಮೂರ್ಖರು, ಅಲ್ಪರು! ಇಂಥವರ ಮಧ್ಯೆ ನಾನು ಇರಬಾರದು.

ರಫೀಖ್—(ಧಾವಿಸಿ ಬರುವನು) ಶಿಲ್ಪಿವರ್ಯ! ಸಮ್ರಾಟರು ಬರುತಿರುವ ಹಾಗಿದೆ!

ಯಾಕೂಬ್—ಆಗಲೇ ಹೇಳಲಿಲ್ಲವೆ ನಾನು? ಕರೆ ಕಳುಹಿಸುವುದರ ಬದಲು ಆದರಿಸುವುದಕ್ಕೆ ಸ್ವತಃ ತಾವೇ ಬರುತಿದಾರೆ! ಯಾ ಪರವರದಿಗಾರ್! ನೀನು ದೊಡ್ಡವನು! ನಮ್ಮ ಭಾಗ್ಯದ ಬಾಗಿಲು ತೆರೆಯಿತು. ಕೃಪೆಯ ಕಣ್ಣಿನಿಂದ ಸಮ್ರಾಟರು ಒಮ್ಮೆ ನಮ್ಮನ್ನು ನೋಡುವಂತೆ ಮಾಡು.

ಶಿಲ್ಪಿ ದಾವೂದ್—(ಅಸಹನೆಯಿಂದ ಅತ್ತಿತ್ತ ಚಲಿಸತೊಡಗುತ್ತ) ನಿಲ್ಲಿಸು! ಸಾಕು! ನನಗೆ ಇದು ಇಷ್ಟವಿಲ್ಲ. ನಾನು ಆ ಮೃಗಮಾನವನ ಆತಿಥ್ಯ ಸ್ವೀಕರಿಸಲಾರೆ. ಇಲ್ಲಿಂದ ನಾನು ಹೊರಡಬೇಕು! ರಫೀಖ್, ನನ್ನ ಉಪಕರಣಗಳು—

ರಫೀಖ್—(ನೇಪಥ್ಯದತ್ತ ನೋಡುತ್ತಲೇ ಇದ್ದು) ಸಮ್ರಾಟರು, ಸೇನಾನಿ ಪೀರ್ ಮಹಮ್ಮದರು, ಸಹಸ್ರಾರು ಯೋಧರು! ಎಲ್ಲರೂ ದಿನ್ನೆಯಾಚೆಗೆ ಕುದುರೆಗಳಿಂದ ಇಳಿದು ಇತ್ತ ಬರುತಿದಾರೆ. (ದೂರದಿಂದ ಸಮ್ರಾಟನ ಕರ್ಕಶ ಗಂಟಲು ಕೇಳಿಸುವುದು: 'ಶಿಲ್ಪಿ ದಾವೂದ್!' 'ಶಿಲ್ಪಿ ದಾವೂದ್!'

ಸೈನಿಕರ ಗುಜುಗುಜು ಸದ್ದು ಕೇಳಿಸುವುದು. ಪೀರ್ ಮಹಮ್ಮದನ ಕಂಠ ('ಓಡಿ ಮುಂದೆ! ಹಿಡಿಯಿರಿ ಆ ಶಿಲ್ಪಿಯನ್ನು!') ಅಯ್ಯೋ! ಇದೇನು?

ಯಾಕೂಬ್—ಯಾ ಅಲ್ಲಾ! ಏನು ಮಾಡಿಬಿಟ್ಟೆ?

ರಫೀಖ್—ಸಮ್ರಾಟರು ರೋಷಾವೇಷದಿಂದ ಜಿಗಿಜಿಗಿದು ಬರುತಿದಾರೆ. ಏನು ತಪ್ಪಾಯಿತು ನಮ್ಮಿಂದ, ಮಾವ? ಈಗೇನು ಮಾಡೋಣ, ಶಿಲ್ಪಿವರ್ಯ?

ಶಿಲ್ಪಿ ದಾವೂದ್—(ಸ್ವಗತ) ತಪ್ಪಿಸಿಕೊಳ್ಳಲೆ? ಹೇಗೆ? ಒಂಟಿಯಾಗಿರುವ ನನ್ನನ್ನು—ಕಾಲ್ಕಡಿಗೆಯವನನ್ನು—ಅವರು ಸುಲಭವಾಗಿ ಹಿಡಿಯುವರಲ್ಲ? ನಿಂತು ಆತನನ್ನು ಇದಿರಿಸಿಯೇ ಹೋಗಲೆ? ಛೆ! ಹೀಗೂ ಆಯಿತೆ ಇಷ್ಟು ಬೇಗ?

ರಫೀಖ್—(ಈ ಪಕ್ಕಕ್ಕೆ ಬಂದು ಯಾಕೂಬನತ್ತ ಸೇರಿಕೊಳ್ಳುತ್ತ) ಮಾವ! ಮಾವ!

ಯಾಕೂಬ್—ನೀನೊಬ್ಬ ಅಳುಬುರುಕ. ಹೆದರಬೇಡ, ರಫೀಖ್! ಏನೋ ತಪ್ಪು ಗ್ರಹಿಕೆಯಾಗಿರಬೇಕು, ಸರಿಹೋಗುತದೆ.

ಶಿಲ್ಪಿ ದಾವೂದ್—(ನೇಪಥ್ಯದಲ್ಲಿ ಧ್ವನಿಗಳು ಸಮೀಪಿಸಿದಂತೆ) ಇದೂ ಒಂದು ಉಳಿದಿದ್ದಿತೇನೊ? ಆಗಲಿ, ಆಗಲಿ....

(ಅರ್ಧ ವೃತ್ತಾಕಾರವಾಗಿ ಸೈನಿಕರು ನುಗ್ಗುವರು. ಅವರ ಮಧ್ಯೆ ಒರೆ ಹಿರಿದ ತೈಮೂರ, ಆತನ ಹಿಂದೆ ಪೀರ್ ಮಹಮ್ಮದ್.)

ತೈಮೂರ—(ಏದುಸಿರುಬಿಡುತ್ತ) ಸೈನಿಕರೇ! ಆ ಶಿಲ್ಪಿಯನ್ನು ಬಂಧಿಸಿ!

(ನಾಲ್ವರು ಸೈನಿಕರು ಶಿಲ್ಪಿಯನ್ನು ಸುತ್ತುವರಿದು ಆತನ ಹಿಂದೆ ಅರ್ಧ ವೃತ್ತಾಕಾರವಾಗಿ ನಿಲ್ಲುವರು.)

ತೈಮೂರ—ಹಿಂದೂಸ್ಥಾನದಿಂದ ಈ ಸಮ್ರಾಟ ಮರಳಿಬರುವುದಿಲ್ಲ ಎಂದುಕೊಂಡೆಯೇನೊ, ನರಾಧಮ? (ಶಿಲ್ಪಿ ದಾವೂದ್ ನಿರುತ್ತರ.) ಮಾತನಾಡು! ಗಂಟಲು ನೋವೇ ನಿನಗೆ? ದೇಹಾಲಸ್ಯವೇ? ನನ್ನಲ್ಲಿದೆ ಔಷಧಿ! ಕತ್ತರಿಸಿ ಕತ್ತರಿಸಿ ನಿನ್ನನ್ನು ಕಂದಕದಾಚೆ ಎಸೆಯುತೇನೆ! ಹದ್ದುಗಳಿಗೆ ಔತಣ ಮಾಡಿಸುತೇನೆ. ಜೊತೆಯಲ್ಲೇ ನಿನ್ನ ಪ್ರೇಯಸಿಯನ್ನೂ ಕೆಳಕ್ಕೆ ತಳ್ಳುತೇನೆ. ಮಂಗೋಲ ಪ್ರಭುತ್ವದ ಸಮ್ರಾಜ್ಞಿಯ ಮೈ ಮುಟ್ಟಿದೆಯೇನೋ ನೀಚ? (ಈವರೆಗೂ ಸಮ್ರಾಟರ ಕ್ರೋಧದ ಕಾರಣ ತಿಳಿಯದ ಸೇನಾನಿ-ಸೈನಿಕರು ಎಲ್ಲರ ಬಾಯಿಗಳಿಂದಲೂ 'ಹಾ!' ಎಂಬ ಧ್ವನಿ ಹೊರಡು

ವುದು.) (ವ್ಯಂಗ್ಯವಾಗಿ) ನನ್ನ ದಿಗ್ವಿಜಯಗಳಿಗೆ ಚಿರಸ್ಮಾರಕವಾಗಿ ಕಟ್ಟಿದೆಯಲ್ಲವೆ ಈ ಕೀರ್ತಿಮಂದಿರವನ್ನು ? ಬೊಗಳು !

ಶಿಲ್ಪಿ ದಾವೂದ್—ಮನುಷ್ಯ ರುಂಡಗಳ ಪಿರವಿಡ್ಡು ಕಟ್ಟುವ ಶಿಲ್ಪಿಯೊಡನೆ ಮಾತನಾಡುವುದು ನಮಗೆ ಕುಂದು !

ಸೈನಿಕರು ಒಬ್ಬಿಬ್ಬರು—(ಒಟ್ಟಾಗಿ) ಏಯ್ ! ಹುಷಾರ್ !

ತೈಮೂರ—ಅಧಮ ! ಇನ್ನೊಂದು ಕ್ಷಣದಲ್ಲಿ ನಿನ್ನ ನಾಲಗೆಯನ್ನು ಕತ್ತರಿಸುತೇನೆ. ಅದಕ್ಕೂ ಮೊದಲು ಈ ಒಂದು ಪ್ರಶ್ನೆಗೆ ಉತ್ತರಕೊಡು : ಈ ಮಂದಿರವನ್ನು ಯಾರಿಗೋಸ್ಕರ ಕಟ್ಟಿದೆ ?

ಶಿಲ್ಪಿ ದಾವೂದ್—ಲೋಕದ ಗಂಡ ಅನ್ನಿಸಿಕೊಳ್ಳುವ ನಿನಗೆ ಅಷ್ಟೂ ಹೊಳೆಯಬೇಡವೇ ?— ಇದು ಸೌಂದರ್ಯದ ಅಧಿದೇವತೆಗೆ ಶಿಲ್ಪಿ ದಾವೂದನ ಕಾಣ್ಕೆ !

ತೈಮೂರ—(ಚೀತ್ಕರಿಸುತ್ತ) ಆ್ಹ ! ಸೌಂದರ್ಯದ ಅಧಿದೇವತೆಗೆ ಕಾಣ್ಕೆ ! (ಹಿರಿದ ಖಡ್ಗದೊಡನೆ ದಾವೂದನತ್ತ ಕುಂಟುತ್ತ ಧಾವಿಸುವನು ಶಿಲ್ಪಿ ಒಮ್ಮೆಲೆ ಸೈನಿಕರ ಎಡೆಯಿಂದ ನುಸುಳಿ ಪ್ರಾರ್ಥನಾಮಂದಿರದತ್ತ ಓಡುವನು. ತೈಮೂರ ತಾನೂ ಎರಡು ಹೆಜ್ಜೆ ಕುಂಟುತ್ತ ಓಡಲು ಯತ್ನಿಸಿ, ನಿಂತು) ಹಿಡಿದು ತನ್ನಿ, ಆ ನರಪ್ರಾಣಿಯನ್ನು ! (ಸೈನಿಕರು ಓಡುವರು. 'ಹಿಡಿಯಿರಿ !' 'ಹಿಡಿಯಿರಿ!' ಪೀರ್ ಮುಹಮ್ಮದ್ ದಂಗಾಗಿ ತಲೆತಗ್ಗಿಸಿ ನಿಲ್ಲುವನು. ತೈಮೂರ ಗಾಯಗೊಂಡ ಹುಲಿಯಂತೆ ಅತ್ತಿತ್ತ ಜಿಗಿಯುತ್ತ ಉಸಿರು ಬಿಡುವನು.) ಪೀರ್ ಮುಹಮ್ಮದ್! ನಿಂತೇ ಬಿಟ್ಟಿರಲ್ಲ, ಸೇನಾನಿಗಳೇ !

ಪೀರ್ ಮುಹಮ್ಮದ್—(ಗದ್ಗದ ಕಂಠದಿಂದ) ಸ್ತಂಭವನ್ನೇರಿ ಆ ನೀಚ ಮೇಲು ಮೇಲಕ್ಕೆ ಹೋಗುತಿದಾನೆ, ಬಾದಶಹ. ಅದು ಪಂಜರ. ತಪ್ಪಿಸಿಕೊಳ್ಳಲಾರ. ಸೈನಿಕರು ಹಿಡಿದು ತರುತಾರೆ.

ತೈಮೂರ—(ಮೇಲೆ ನೋಡಿ) ಇಳಿಯೋ ! ಇಳಿ ಕೆಳಕ್ಕೆ ! (ರಂಗಸ್ಥಲದಲ್ಲೂ ನೇಪಥ್ಯದಲ್ಲೂ ಇರುವ ಸೈನಿಕರ ಗುಜುಗುಜು.)

ಪೀರ್ ಮುಹಮ್ಮದ್—ಸೈನಿಕರೇ ! ಹತ್ತಿರಿ ಮೇಲಕ್ಕೆ ! ಆ ಶಿಲ್ಪಿಯನ್ನು ಹಿಡಿದು ತನ್ನಿ ! (ಯಾಕೂಬ್, ರಫೀಕ್ ಹಿಂದೆ ಹಿಂದಕ್ಕೆ ಸರಿದು ನಿಷ್ಕ್ರಮಣ.)

ತೈಮೂರ—(ದುಃಖಿ ; ಗದ್ಗದ ಧ್ವನಿಯಲ್ಲಿ ಅರ್ಧ ತನ್ನಷ್ಟಕ್ಕೆ) ನಾನು ಹೆಳವ. ವಯಸ್ಸಾಯಿತು ಬೇರೆ. ಓಡಲಾರೆ. . . . ಹತ್ತಲಾರೆ. . . . (ಜನರ ಗುಜು ಗುಜು)

ಪೀರ್ ಮಹಮ್ಮದ್—ಹತ್ತಿರ! ಹತ್ತಿರ! ಅಲ್ಲೇ ಇದಾನೆ!

(ಜನಸಂದಣಿಯಿಂದ ಒಬ್ಬ : 'ಅವ್ವಯ್ಯಾ! ಧುಮುಕಿದ!')

ತೈಮೂರ—ಧುಮುಕಿದನೆ? ತಪ್ಪಿಸಿಕೊಂಡನೆ?

ಸಂದಣಿಯಲ್ಲಿ ಇನ್ನೊಬ್ಬ—ಎಲ್ಲಿ? ಎಲ್ಲಿ?

ಮೊದಲನೆಯವನು—ಅಗೋ! ಕಂಬದ ತುದಿಯ ಕಿಂಡಿಯಿಂದ ಕೆಳಕ್ಕೆ ಹಾರಿದ! ಆಚೆಗೆ!

ಎರಡನೆಯವನು—ಆಳವರಿಯದ ಕಂದಕಕ್ಕೆ? ಅಬ್ಬ! ಅಬ್ಬ!

ಮೊದಲನೆಯವನು—ನೆಲ ಮುಟ್ಟಿದಾಗ ದೇಹ ಛಿದ್ರಛಿದ್ರವಾಗಿ ಹೋಗುತದೆ.

ಎರಡನೆಯವನು—ಇಲ್ಲ, ನಂಬಲಾರೆ. ಅಗೋ ಆ ಪಾರಿವಾಳ. ಆ ಮಾಯಾವಿ ಹಕ್ಕಿಯಾಗಿ ರೂಪಾಂತರ ಹೊಂದಿ ಹಾರಿ ಹೋಗುತಿದಾನೆ.

ಪೀರ್ ಮಹಮ್ಮದ್—ಸೈತಾನ ನಾಶವಾಗಿ ಹೋದ!

ತೈಮೂರ—ತಪ್ಪಿಸಿಕೊಂಡ! (ಭಾವೋದ್ವೇಗ) ತೈಮೂರನಿಗೆ ಸೋಲಾಯಿತು, ಪೀರ್ ಮಹಮ್ಮದ್! ಮಂಗೋಲ ಸಮ್ರಾಟ ತೈಮೂರನಿಗೆ ಸೋಲಾಯಿತು! ಓಹ್! ಓಹ್! (ಬಿಕ್ಕಿ, ಬಿಕ್ಕಿ, ಸೋವನ್ನು ನುಂಗಿಕೊಂಡು, ದೃಢನಿರ್ಧಾರವನ್ನು ತೋರಿ ಬೈರಾಗಿಯ ಮಾತನ್ನು ನಿಧಾನವಾಗಿ ಜ್ಞಾಪಿಸಿಕೊಳ್ಳುತ್ತ) ನೀವು ಬಿಟ್ಟು ಬಂದಿರುವ ಸಮರ್ಕಂದದಲ್ಲಿ ಶಿಲೆ ಬೆಂಕಿ ಕಾರುತದೆ, ಪರ್ವತ ಸಿಡಿಯುತದೆ, ಅಲ್ಲೋಲ ಕಲ್ಲೋಲವಾಗುತದೆ. (ನಿರ್ವಿಕಾರ ಧ್ವನಿಯಲ್ಲಿ) ಸೇನಾನಿಗಳೇ, ಈ ಮಸೀದಿಯನ್ನೂ ಕಮಾನು ಕಂಬಗಳನ್ನೂ ಕೆಡವಿ ಬಿಡಿ. ಈ ಕ್ಷಣ! ಹಿಂದೂಸ್ಥಾನಕ್ಕೆ ನಾವು ಹೊರಟುದಕ್ಕೆ ಮುನ್ನ ಹೇಗಿದ್ದಿತೋ ಹಾಗೆಯೇ ಇರಬೇಕು ಈ ಸ್ಥಳ!

ಪೀರ್ ಮಹಮ್ಮದ್—ಅಪ್ಪಣೆ, ಬಾದಶಹ! ಸೈನಿಕರಿಗೆ ಆದೇಶ ನೀಡುತೇನೆ.

ತೈಮೂರ—(ಒಡೆದ ಗಂಟಲಲ್ಲಿ) ಇನ್ನೂ ಒಂದು ಅನುಜ್ಞೆಯಿದೆ, ಸೇನಾನಿಗಳೇ.

ಪೀರ್ ಮಹಮ್ಮದ್—ಹೇಳೋಣಾಗಲಿ.

ತೈಮೂರ—ಸಮ್ರಾಜ್ಞಿಯನ್ನೂ ಆಕೆಯ ಪರಿಚಾರಿಕೆಯನ್ನೂ ಸೆರೆಯಲ್ಲಿಡಿರಿ !

(ಪೀರ್ ಮಹಮ್ಮದ್ ಮೌನವಾಗಿರಲು, ತುಸು ಧ್ವನಿ ಏರಿಸಿ) ಕೇಳಿಸಿತೆ ?

ಪೀರ್ ಮಹಮ್ಮದ್—(ವಿಷಣ್ಣನಾಗಿ) ಹ್ಞ್, ಜಹಾಪನ.

ತೈಮೂರ—ನಾವು ಅರಮನೆಗೆ ಹಿಂತಿರುಗುವುದಿಲ್ಲ. ಬಯಲುಗಾವಲಿನಲ್ಲಿ ಶಿಬಿರ ಏರ್ಪಡಿಸಿ !

ಪೀರ್ ಮಹಮ್ಮದ್—ಹಾಗೆಯೇ ಮಾಡುತೇನೆ.

ತೈಮೂರ—(ಅತ್ತಿತ್ತ ನೋಡುತ್ತ) ಷಾ ರುಖ್ ! ಷಾ ರುಖ್ !

ಪೀರ್ ಮಹಮ್ಮದ್—ಯುವರಾಜರನ್ನು ಕರೆಸಲೆ !

ತೈಮೂರ—ಇನ್ನು ರಾಜಕುಮಾರ ಸದಾ ನಮ್ಮ ಬಳಿಯಲ್ಲೇ ಇರಬೇಕು. ಕರೆದು ತನ್ನಿ !

ಪೀರ್ ಮಹಮ್ಮದ್—ಅಪ್ಪಣೆ. (ನೇಪಥ್ಯದತ್ತ ನೋಡುತ್ತ ದುಗುಡ ಬೆರೆತ ಸ್ವರದಲ್ಲಿ ಆದೇಶಗಳನ್ನು ನೀಡುವನು.) ಸೈನಿಕರೇ ! ಮಂಗೋಲ ಯುವರಾಜರನ್ನು ಕರೆದು ತನ್ನಿ ! ಈ ಪ್ರಾರ್ಥನಾ ಮಂದಿರವನ್ನೂ ಕಮಾನು ಕಂಬಗಳನ್ನೂ ಒಡೆದು, ಕೆಡವಿ, ಪುಡಿಗೂಡಿಸಿರಿ ! ನೆಲಸಮಮಾಡಿರಿ !

ತೈಮೂರ—(ಕಿರಿಚಿಕೊಳ್ಳುತ್ತ) ಈಗ ! ಈಗಲೇ !

[ತೈಮೂರ ಖಡ್ಗವನ್ನು ಝುಳಪಿಸುತ್ತಿರುವಂತೆಯೇ, ತೆರೆ.]

ದೃಶ್ಯ ೪

[ಸಮರ್ಕಂದದ ಹೊರಗೆ ಗೂಡಾರದಲ್ಲಿ ತೈಮೂರ್‌ಖಾನ್, ಅಸ್ವಸ್ಥನಂತೆ ಪೀಠದ ಮೇಲೆ ದಿಂಬಿಗೆ ಒರಗಿ ಕುಳಿತಿದಾನೆ. ಗೂಡಾರದಲ್ಲಿರುವುದು ಇದೊಂದೇ ಪೀಠ. ತೆರೆ ಸರಿದಾಗ ಷಾ ರುಖ್ ಸಮ್ರಾಟನ ಬಳಿ ನೆಲದ ಮೇಲೆ ಮಂಡಿಯೂರಿ ಆತನ ಕಾಲುಗಳನ್ನು ಒತ್ತುತ್ತಿದ್ದಾನೆ.]

ತೈಮೂರ— ಸಾಕು ಬಿಡು, ರುಖ್.

ಷಾ ರುಖ್—(ಪಾದಸೇವೆ ನಿಲ್ಲಿಸಿ, ಎದ್ದು, ಕ್ಷಣ ಕಾಲ ಮೌನವಾಗಿ ನಿಂತು) ಇವತ್ತು ಸ್ವಲ್ಪ ಮೇಲು ಎನಿಸುತಿದೆಯೆ, ಅಬ್ಬಾಜಾನ್ ?

ತೈಮೂರ—(ಕುಳಿತಲ್ಲಿಯೇ ಸ್ವಲ್ಪ ಮಿಸುಕಿ, ದಿಂಬಿಗೆ ಒರಗಿಕೊಂಡೇ) ಇದು ಔಷಧಿಯಿಂದ ಗುಣವಾಗುವ ಕಾಹಿಲೆಯಲ್ಲ, ರುಖ್. (ಎದೆಯನ್ನು ಮುಟ್ಟಿ

ತೋರಿಸಿ) ಇಲ್ಲಿಗೆ, ಇಲ್ಲಿಗೆ ಆಗಿರುವ ಗಾಯ, ಇದು .... (ಕ್ಷಣ ಮೌನ) ರುಖ್, ಸೆರೆಮನೆಯಿಂದ ದೂತರೇನಾದರೂ ಸುದ್ದಿ ತಂದರೆ ?

ಷಾ ರುಖ್—(ಒಳಗಿನ ಸಂಕಟವನ್ನು ತೋರ್ಪಡಿಸದೆ) ಹ್ಞಾ, ಸೆರೆಮನೆಯಲ್ಲಿ ಅಮ್ಮಾಜಾನ್—

ತೈಮೂರ—(ಏರಿದ ಧ್ವನಿಯಲ್ಲಿ ಮಗನ ಮಾತನ್ನು ತಡೆಯುತ್ತ) ಹಾನಿಮ್ ಅನ್ನು— ಹಾನಿಮ್....

ಷಾ ರುಖ್—(ಕುಗ್ಗಿದ ಧ್ವನಿಯಲ್ಲಿ) ಹೂಂ, ಅಬ್ಬಾಜಾನ್. ಸೆರೆಯಲ್ಲಿ ಅಳುತಾ ಇರುವರಂತೆ.

ತೈಮೂರ—ಅವರಿಬ್ಬರನ್ನೂ ನಾವೇ ತುಂಡರಿಸಿ ಎಸೆಯಬೇಕು, ಎಂದಿದ್ದೆವು. ಲಕ್ಷಾಂತರ ಜನರ ಸಾಮೂಹಿಕ ವಧೆಯನ್ನು ಎವೆ ಮುಚ್ಚದೆ ನಾವು ಮಾಡಿದ್ದರೂ ಈ ಹೆಂಗಸರಿಬ್ಬರನ್ನು ಕೈಯಾರೆ ಕೊಲ್ಲುವುದು ಆಗದೇ ಹೋಯಿತು.... (ನಿಟ್ಟುಸಿರು) .... ಇರಲಿ, ಸೆರೆಮನೆಯ ಸಾವೇ ಇವರಿಗೆ ಮೇಲು ....

ಷಾ ರುಖ್—(ಅಂಜುತಂಜುತ್ತ) ತಾನು ನಿರಪರಾಧಿ ಅಂತ ರೋಧಿಸುತಾ ದೇವಪ್ರಾರ್ಥನೆಯಲ್ಲೇ ಕಾಲ ಕಳೆಯುತಿದಾರಂತೆ.

ತೈಮೂರ—(ಕನಲಿ) ಹೆಣ್ಣಿನ ಕಣ್ಣೀರು ಕಂಡು ಎಂದೂ ಮೋಸ ಹೋಗಬೇಡ, ರುಖ್. ಅದು ಮಾಯಾಜಾಲ. ಮಾಯಾವಿನಿ ಎನ್ನುವುದು ಸ್ತ್ರೀಗಿರುವ ಇನ್ನೊಂದು ಹೆಸರು. ನೆನಪಿಡು ! (ನೇಪಥ್ಯದಲ್ಲಿ ಸೇವಕ ಕಾಣಿಸಿಕೊಳ್ಳುವನು.)

ಷಾ ರುಖ್—(ಆ ಕಡೆ ನೋಡಿ) ಏನದು ?

ಸೇವಕ—(ನಿಂತಲ್ಲಿಂದಲೇ ತೈಮೂರ ಕುಳಿತ ಪೀಠದ ಕಡೆಗೂ ರಾಜಕುಮಾರನಿಗೂ ವಂದಿಸಿ) ಸೇನಾನಿಗಳು ಬಂದಿದಾರೆ.

ಷಾ ರುಖ್—ಪೀರ್ ಮುಹಮ್ಮದರನ್ನು ಒಳಗೆ ಕರೆಯಲೆ, ಅಬ್ಬಾಜಾನ್ ? (ತೈಮೂರ ಸಮ್ಮತಿಸೂಚಕವಾಗಿ ಗೋಣು ಆಡಿಸುವನು.) (ಸೇವಕನಿಗೆ) ಬರಬಹುದು ಎಂದು ಹೇಳು. (ಎಡಗಡೆಗೆ ಹೋಗಿ ದೂರಕ್ಕೆ ನೋಡುತ್ತ ನಿಲ್ಲುವನು.)

ಪೀರ್ ಮಹಮ್ಮದ್—(ಪ್ರವೇಶಿಸಿ, ಸಮ್ರಾಟನಿಗೆ ವಂದಿಸಿ) ಹೇಗಿರುವಿರಿ, ಬಾದಶಹ ?

ತೈಮೂರ—ಹ್ಞ. . . . ವಿಶ್ರಾಂತಿ ಪಡೆಯುತಿದೇವೆ, ವಿಶ್ರಾಂತಿ—ಮೈಗೆ, ಮನಸ್ಸಿಗೆ. ಈ ವಿಶ್ರಾಂತಿಯೊಂದು ಕಠಿನ ಶಿಕ್ಷೆ, ದಂಡನಾಯಕರೇ. ರಾಜಧಾನಿಯಲ್ಲಿ ಪ್ರಜೆಗಳು ಏನು ಹೇಳುತಿದಾರೆ ?

ಪೀರ್ ಮಹಮ್ಮದ್—(ಏನು ಉತ್ತರ ಕೊಡೋಣವೆಂದು ಯೋಚನೆಗೆ ಈಡಾಗುವನು)

ತೈಮೂರ—ಯೋಚಿಸಿ ಹೇಳದೆ, ಥಟ್ಟನೆ ಉತ್ತರ ಕೊಡಿ, ಪೀರ್.

ಪೀರ್ ಮಹಮ್ಮದ್—ರಾಜಧಾನಿಗೆ ದಂಡು ಮರಳಿ ಹತ್ತು ದಿನಗಳಾದರೂ ಪ್ರಜಾಕೋಟಿ ಇನ್ನೂ ಸುಖ ಸಂತೋಷಗಳ ಕಾಲಯಾಪನೆ ಆರಂಭಿಸಿಲ್ಲ. ಸಮ್ರಾಟರು ಮರಳಿದರೆಂದು ಸಡಗರ ಸಂಭ್ರಮಗಳಿಲ್ಲ.

ತೈಮೂರ—ಮೂರ್ಖರು ! . . . ಮುಂದುವರಿಸಿ.

ಪೀರ್ ಮಹಮ್ಮದ್—ಇಡಿಯ ರಾಜಧಾನಿಯೇ ದಂಗುಬಡೆದಂತಿದೆ. ನಿದ್ರೆಯಲ್ಲಿ ಚಲಿಸುವ ಹಾಗೆ ಜನರು ಓಡಾಡುತಿದಾರೆ.

ತೈಮೂರ—(ದಿಂಬನ್ನು ಬಿಟ್ಟು ನೇರವಾಗಿ ಕುಳಿತುಕೊಳ್ಳುತ್ತ) ಈ ನಿದ್ರೆಯಿಂದ ಅವರನ್ನು ಎಚ್ಚರಿಸಬೇಕು.

ಪೀರ್ ಮಹಮ್ಮದ್—ತಾವು ಗೂಡಾರವನ್ನು ಬಿಟ್ಟು ನಗರದೊಳಕ್ಕೆ ಬಂದರೆ. .

ತೈಮೂರ—(ಸಿಟ್ಟಾಗಿ) ಗೂಡಾರ ! ಗೂಡಾರ ! ಇದೇ ಮಂಗೋಲರ ಅರಮನೆ, ಪೀರ್ ಮಹಮ್ಮದ್ ; ಇದೇ ಮಂಗೋಲರ ಅಧಿಕಾರ ಪೀಠ ! (ಥಟ್ಟನೆ ಏಳಲು ನೋಡುವನು. ಎದೆ ನೋವು ಕಾಣಿಸಿಕೊಂಡಂತಾಗಿ ಅಂಗೈಯನ್ನು ಎದೆಯ ಮೇಲಿಟ್ಟು, ತುಸು ನರಳುವನು.)

ಷಾ ರುಖ್—(ತಂದೆಯ ಬಳಿಗೆ ಓಡಿ ಬರುತ್ತ) ಅಬ್ಬಾಜಾನ್ !

(ಪೀರ್ ಮಹಮ್ಮದನೂ ಕಾತರನಾಗುವನು.)

ತೈಮೂರ—(ಎದೆಯ ಮೇಲಿನ ಕೈಗಳನ್ನು ಕೆಳಗಿಳಿಸಿ, ನೆಟ್ಟಗೆ ನಿಂತು, ಆಳವಾಗಿ ಉಸಿರೆಳೆದು, ಹತ್ತಿರ ಬಂದವರನ್ನು ಕೈ ಸನ್ನೆಯಿಂದ ಬದಿಗೆ ಸರಿಸಿ) ನಮ್ಮ ಪೂರ್ವಜರು ಆಕಾಶದತ್ತ ನೋಡುತ್ತ ಚಾಪೆಯ ಮೇಲೆ ಮಲಗಿಕೊಳ್ಳುತ್ತಿದ್ದರು. ಹೆಚ್ಚೆಂದರೆ ಗೂಡಾರಗಳಲ್ಲಿ ವಾಸಿಸುತಿದ್ದರು. ಅವರು ಬೀಡು ಬಿಟ್ಟ ಸ್ಥಳವೇ ನಗರವಾಗುತಿತ್ತು. ಬಲ್ಲಿರಾ, ದಂಡನಾಯಕರೇ ?

ಪೀರ್ ಮಹಮ್ಮದ್—ಕ್ಷಮಿಸಬೇಕು, ಬಾದಶಹ.

ತೈಮೂರ—(ಅತ್ತಿಂದಿತ್ತ ಇತ್ತಿಂದತ್ತ, ಮೊದಲು ಮೆಲ್ಲಮೆಲ್ಲನೆ, ಬಳಿಕ ಬಿರುಸಾಗಿ, ನಡೆಯತೊಡಗುತ್ತ) ಇಲ್ಲಿ ಕೇಳಿ! ಮಂಗೋಲರಿಗೆ ಮಂಕು ಕವಿದಿದೆ. ಇದೊಂದು ಜಾಡ್ಯ. ಇದರ ನಿವಾರಣೆಗೆ ಇರುವ ಔಷಧಿ ಒಂದೇ. ಯಾವುದು ಗೊತ್ತೆ, ಪೀರ್ ಮಹಮ್ಮದ್ ?

ಪೀರ್ ಮಹಮ್ಮದ್—ಖಾವಂದರು ಹೇಳಬೇಕು.

ತೈಮೂರ—(ನಡೆಯುತ್ತಿದ್ದವನು ರಂಗಮಧ್ಯದಲ್ಲಿ ನಿಂತು) ಯುದ್ಧ! ತಿಂಗಳು ಗಟ್ಟಲೆ ವರ್ಷಗಟ್ಟಲೆ ಯುದ್ಧ! ಘನ ಘೋರ ಯುದ್ಧ! (ಸೇನಾನಿಯತ್ತ ನೋಡಿ) ಹೌದೆ? (ಮಗನತ್ತ ದೃಷ್ಟಿ ಹೊರಳಿಸಿ) ಹೌದೆ, ಷಾ ರುಖ್ ? (ಇಬ್ಬರೂ ಮೌನವಾಗಿ ಹೌದು ಎನ್ನುವಂತೆ ತಲೆ ಆಡಿಸುವರು.) ನಾವು ಆಜ್ಞಾಪಿಸುತಿದೇವೆ! ಇನ್ನೊಂದು ಜೈತ್ರಯಾತ್ರೆಗೋಸುಗ ಮಂಗೋಲರ ಅಜೇಯ ದಂಡು ಅಣಿಯಾಗಲಿ!

ಷಾ ರುಖ್—ಈ ಸಲ ಪಯಣ ಯಾವ ದಿಕ್ಕಿಗೆ, ಅಬ್ಬಾಜಾನ್ ?

ತೈಮೂರ—ಟಿಬೆಟ್ಟಿಗೆ, ಚೀಣಕ್ಕೆ! (ಸೇನಾನಿಯತ್ತ ನೋಡಿ) ಸುಮ್ಮನಿದೀರಲ್ಲ, ಪೀರ್ ಮಹಮ್ಮದ್ ? ಹೇಳಿ; ಯೋಚನೆ ಮಾಡದೆ, ತೋಚಿದ್ದನ್ನು ಹೇಳಿ.

ಪೀರ್ ಮಹಮ್ಮದ್—ಹಿಂದೂಸ್ಥಾನದಿಂದ ಮರಳಿಬಂದ ದಂಡು ಬಳಲಿಕೆಯಿಂದ ಇನ್ನೂ ಚೇತರಿಸಿಕೊಂಡಿಲ್ಲ.... ಮತ್ತೆ ಈಗಲೇ ಹೊರಡಬೇಕು, ಅಂದರೆ—

ತೈಮೂರ—(ಕುಂಟು ಕಾಲನ್ನೆತ್ತಿ ಸಪ್ಪಳ ಮಾಡುತ್ತ ನೆಲಕ್ಕೆ ತುಳಿದು) ದಂಡ ನಾಯಕರೇ! ನೀವು ಆಡುತ್ತಿರುವುದು ಹಿಂದೂಸ್ಥಾನದ ಭಾಷೆಯನ್ನು! ಮಂಗೋಲ ಯೋಧನಿಗೆ ದಣಿವು ಎಂಬುದೇ ಇಲ್ಲ. ಸಮರವೇ ಅವನ ವಿಹಾರ. ಸುಮ್ಮನೆ ಕುಳಿತಾಗ ಅವನಿಗೆ ತುಕ್ಕು ಹಿಡಿಯುತದೆ. ಅರ್ಥವಾಯ್ತೆ ?

ಪೀರ್ ಮಹಮ್ಮದ್—(ಅಭಿಮಾನ ಭಂಗವಾಯಿತೆಂದು ನೊಂದು, ನೋವನ್ನು ಮರೆ ಸಲು ಧ್ವನಿ ಏರಿಸಿ) ಅಪ್ಪಣೆಯಾಗಲಿ, ಬಾದಶಹ! ದಂಡು ಹೊರಡು ವುದು ಯಾವಾಗ ?

ತೈಮೂರ—(ಚಲಿಸತೊಡಗುತ್ತ) ಭೇಷ್ ! ಇದೀಗ ನಮ್ಮ ಭಾಷೆ ! . . . . ಹುಂ, (ನಿಂತು, ತುಸು ಪರಿಹಾಸ್ಯ ಬೆರೆಸಿ) ಇವತ್ತು ?. . . ನಾಳೆ ? (ನಿರ್ಧಾರದ ಧ್ವನಿಯಲ್ಲಿ) ಹೋಗಲಿ, ನಾಡದು ಬೆಳಗ್ಗೆ ಸೂರ್ಯ ಉದಯಿಸುವ ವೇಳೆಗೆ ಆತನಿಗಿದಿರಾಗಿ ಮಂಗೋಲ ದಂಡು ಸಮರ್ಕಂದ ದಿಂದ ಹೊರಡಬೇಕು !

ಪೀರ್ ಮಹಮ್ಮದ್—ನನಗೆ ಅಪ್ಪಣೆಯಾಗಲಿ. ಏರ್ಪಾಟು ಮಾಡುತ್ತೇನೆ. (ನಮಿಸುವನು.)

ತೈಮೂರ—ಹೊರಡಿ, ದಂಡನಾಯಕರು . . . (ಮಾತನಾಡಿ ಆದ ಬಳಲಿಕೆ) (ಮತ್ತೆ ಎದೆಯಲ್ಲಿ ಸೋವು ಕಾಣಿಸಿಕೊಳ್ಳಲು ಅಂಗೈಯಿಂದ ಅದನ್ನು ಒತ್ತು ವನು. ಮೆಲ್ಲನೆ ಪೀಠದ ಬಳಿ ಸಾರಿ ಕುಳಿತುಕೊಳ್ಳುವನು.)

ಷಾ ರುಖ್—(ಸಮೀಪಿಸಿ, ಗಾಬರಿಯಿಂದ) ವೈದ್ಯರನ್ನು ಕರೆಸಲೆ ?

ತೈಮೂರ—(ಬೇಡವೆನ್ನುವಂತೆ ತಲೆಯಾಡಿಸಿ) ರುಖ್, ನೀನು ಹೋಗು, ದಂಡ ಯಾತ್ರೆಯ ಸಿದ್ಧತೆಯ ಉಸ್ತುವಾರಿ ನೋಡಿಕೊಂಡು ಬಾ.

[ಷಾ ರುಖ್ ತುಸು ತಲೆ ಬಾಗಿ ವಂದಿಸಿ ನೇಪಥ್ಯದತ್ತ ಹೋಗುತ್ತಿರುವಂತೆಯೇ ತೆರೆ.]

ದೃಶ್ಯ ೫

[ದಾರಿಯಲ್ಲಿ ಮಂಗೋಲ ಸೇನೆ ಬೀಡುಬಿಟ್ಟಿರುವ ಒಂದು ಕಡೆ, ತೈಮೂರನ ಗೂಡಾರ. ಹಿಂದಿನ ದೃಶ್ಯಕ್ಕಿಂತ ತುಸು ಭಿನ್ನವಾದ ರಂಗಸಜ್ಜಿಕೆ.

ತೆರೆ ಸರಿದಾಗ ಪಲ್ಲಂಗದ ಮೇಲೆ ಮಲಗಿ ನಿದ್ದೆ ಹೋಗಿರುವ ತೈಮೂರ ಕಂಡು ಬರುತ್ತಾನೆ. ಗೂಡಾರದ ಅರೆತೆರೆದ ಒಂದು ಬಾಗಿಲಿನಾಚೆಗೆ ಇಬ್ಬರು ಸಶಸ್ತ್ರ ಕಾವಲು ಗಾರರು ಎದುರುಬದುರಾಗಿ ಗಸ್ತು ತಿರುಗುತ್ತಿರುತ್ತಾರೆ. ಒಳಬಾಗಿಲಿನಿಂದ ಷಾ ರುಖ್ ಪ್ರವೇಶಿಸಿ, ಪಲ್ಲಂಗದತ್ತ ನೋಡಿ, ನಿಧಾನವಾಗಿ ಹೆಜ್ಜೆಗಳನ್ನಿಡುತ್ತ ಮಲಗಿದ್ದ ತಂದೆ ಯನ್ನು ಸಮೀಪಿಸಿ ಮೌನವಾಗಿ ಪ್ರೇಕ್ಷಕರಿಗೆ ಬೆನ್ನು ಮಾಡಿ ನಿಲ್ಲುವನು. ಮಂಡಿಯೂರಿ ಒಂದು ಕ್ಷಣ ಪಲ್ಲಂಗಕ್ಕೆ ತಲೆ ಇಡುವನು. ಬಳಿಕ ಎದ್ದು, ಹೊದಿಕೆ ಸರಿಸುವನು.

ಷಾ ರುಖ್ ನಿಟ್ಟುಸಿರು ಬಿಡುತ್ತ ಮುಂದಕ್ಕೆ ಬರುತ್ತಿದ್ದಂತೆ ಹೊರಬಾಗಿಲಿ ನಿಂದ ಪೀರ್ ಮಹಮ್ಮದನ ಪ್ರವೇಶ. ಮುಖಮುದ್ರೆ ಗಂಭೀರವಾಗಿದೆ. ಷಾ ರುಖ್

ರಂಗಸ್ಥಲದ ಮುಂಭಾಗದಲ್ಲೊಂದು ಮೂಲೆಯಲ್ಲಿ ನಿಲ್ಲಲು, ಪೀರ್ ಮಹಮ್ಮದ್ ಆತನ ಬಳಿಗೆ ಬರುವನು. ಒಬ್ಬರ ದೃಷ್ಟಿಯನ್ನೊಬ್ಬರು ನೇರವಾಗಿ ಇದಿರಿಸದೆಯೇ ಕ್ಷಣ ಮೌನ.]

ಪೀರ್ ಮಹಮ್ಮದ್—ಬಾದಶಹರಿಗೆ ನಿದ್ದೆ ಹತ್ತಿದೆ, ಅಲ್ಲವೆ ?

ಷಾ ರುಖ್—ಹೌದು, ದಂಡನಾಯಕರೇ.

ಪೀರ್ ಮಹಮ್ಮದ್—ಯುವರಾಜ, ಈ ಜಾಡ್ಯ ಗುಣಮುಖವಾಗುವುದಿಲ್ಲ.

ಷಾ ರುಖ್—(ನಿಟ್ಟುಸಿರು ಬಿಟ್ಟು, 'ಹೌದು' ಎನ್ನುವಂತೆ ತಲೆ ಆಡಿಸುವನು.)

ಪೀರ್ ಮಹಮ್ಮದ್—ನಿನ್ನೆ ಹಿಂದೂಸ್ಥಾನದಿಂದ ಓಲೆಕಾರರು ಬಂದಾಗ ಬಾದಶಹರಿಗೆ ಸುದ್ದಿ ಮುಟ್ಟಿಸಬಾರದು, ಅವರ ಮನಸ್ಸಿಗೆ ಘಾತವಾಗುತದ್ದೆ, ಎಂದುಕೊಂಡಿದ್ದೆನಲ್ಲ, ಆದರೂ ಅವರಿಗೆ ತಿಳಿದುಹೋಯಿತು.

ಷಾ ರುಖ್—ಹಿಂದೂಸ್ಥಾನದಲ್ಲಿ ಆದದ್ದು ಒಳ್ಳೆತೇ ಆಯಿತು, ದಂಡನಾಯಕರೇ.

ಪೀರ್ ಮಹಮ್ಮದ್—(ತುಸು ಅಚ್ಚರಿಯಿಂದ) ಒಳ್ಳೆತಾಯಿತು ಎಂದು ಹೇಗೆ ಹೇಳೋಣ ? ಮಂಗೋಲರ ಕೀರ್ತಿಗೆ ಹಿಂದೂಸ್ಥಾನ ಮಸಿ ಬಳಿಯಿತು.

ಷಾ ರುಖ್—ಅದರಿಂದ ನಾವು ಪಾಠ ಕಲಿಯುವಂತಾದರೆ, ಆ ಘಟನೆಯಿಂದ ನಮಗೆ ಒಳ್ಳೆತಾದಂತೆಯೇ, ಅಲ್ಲವೆ ? ಪ್ರತ್ಯಕ್ಷವಾಗಿ ಆಳಲಾಗದ ವಿಸ್ತಾರ ಭೂಭಾಗಗಳನ್ನು ಜಯಿಸಿ ಫಲವೇನು ? ನಮ್ಮವರಲ್ಲದ ಜನರನ್ನು ಗೆಲ್ಲುವುದರಿಂದ ಆಗುವ ಲಾಭವೇನು ?

ಪೀರ್ ಮಹಮ್ಮದ್—ಅರಸೊತ್ತಿಗೆಗಳ ಅಂತಃಕಲಹದ ಕಾರಣದಿಂದ ಹಿಂದೂಸ್ಥಾನ ನಮ್ಮೆದುರು ಮೈಚಾಚಿತು. ನಮ್ಮವರ ಆಳ್ವಿಕೆ ಆರಂಭವಾದೊಡನೆಯೇ ಅಲ್ಲಿನ ರಾಜರೆಲ್ಲ ಒಂದಾದರು. ವಿದೇಶೀಯ ನೊಗವನ್ನು ಝಾಡಿಸಿಯೂ ಬಿಟ್ಟರು.

ಷಾ ರುಖ್—ಖಿಜರ್‌ಖಾನರ ನೆರವಿಗೆ ನಾವು ಹೋಗುವಂತಿಲ್ಲ ಎಂದು ವ್ಯಸನವಾಗುತದೆ.

ಪೀರ್ ಮಹಮ್ಮದ್—ಒಂದು ರೀತಿಯಲ್ಲಿ ಚೆಂಗೀಸ್‌ಖಾನರಿಗಾದ ಗತಿಯೇ ನಮ್ಮ ದಂಡಿಗೂ ಆಯಿತು. ಅಳಿದುಳಿದ ಮಂಗೋಲ್ ಪಡೆಯೊಡನೆ ಖಿಜರ್ ಮರಳಿ ಬರುವುದರ ಹೊರತು ಅನ್ಯದಾರಿಯಿಲ್ಲ.

ಷಾ ರುಖ್—ಲೋಕಕ್ಕೆಲ್ಲ ನಾವೇ ಒಡೆಯರಾಗಬೇಕೆಂಬ ಸಮ್ರಾಟರ ಆಸೆಗೆ

ಎಂಥ ಆಘಾತ! ಈ ಯುದ್ಧವಂತೂ .... (ತೈಮೂರ ಮಲಗಿದ್ದ ಕಡೆ ಗೊಮ್ಮೆ ನೋಡಿ, ಧ್ವನಿ ತಗ್ಗಿಸಿ).... ದಂಡನಾಯಕರೇ, ಟಿಬೆಟ್ಟನ್ನು ಜಯಿಸಿ ಹತೋಟಿಯಲ್ಲಿಟ್ಟುಕೊಳ್ಳುವುದು ನಮ್ಮಿಂದ ಸಾಧ್ಯವೆ?

ಪೀರ್ ಮಹಮ್ಮದ್—ಇನ್ನೊಂದು ತಿಂಗಳಲ್ಲಿ ಈ ನೆಲವೆಲ್ಲ ಹಿಮಾಚ್ಛಾದಿತ ವಾಗುತದೆ. ಮುಂದಕ್ಕೆ ಸಾಗಲಾರದೆ ನಮ್ಮ ದಂಡು ಹೆಪ್ಪುಗಟ್ಟುತದೆ.

ಷಾರುಖ್—ಈ ಜೈತ್ರಯಾತ್ರೆಯನ್ನು ಇಲ್ಲಿಗೇ ನಿಲ್ಲಿಸಿ ರಾಜಧಾನಿಗೆ ಹಿಂತಿರುಗುವುದಲ್ಲವೆ ಮೇಲು?

ಪೀರ್ ಮಹಮ್ಮದ್—ಹೌದು. ಆದರೆ ಆ ಬಾದಶಹರಿಗೆ ಹೇಳುವವರು ಯಾರು? ಅವರ ಈಗಿನ ಅನಾರೋಗ್ಯ ಸ್ಥಿತಿಯಲ್ಲಿ ಮಾತನಾಡುವುದಾದರೂ ಹೇಗೆ?

ಷಾ ರುಖ್—(ತಲೆಯಲ್ಲಾಡಿಸಿ) ಇಲ್ಲ. ಹಿಂತಿರುಗುವುದಕ್ಕೆ ಬಾದಶಹರು ಒಪ್ಪುವುದಿಲ್ಲ.

ಪೀರ್ ಮಹಮ್ಮದ್—ಆಹಾರ ಕಡಮೆಯಾಯಿತೆಂದರೆ, ಚಳಿ ಹೆಚ್ಚಿತೆಂದರೆ ಸೈನಿಕರು ಬಂಡಾಯವೇಳಬಹುದು.

ಷಾ ರುಖ್—ಅಲ್ಲಿಗೆ ಮಂಗೋಲ ಸಾಮ್ರಾಜ್ಯದ ಅವಸಾನವಾದಂತೆಯೇ....

ತೈಮೂರ—(ಮಲಗಿದ್ದಲ್ಲೇ ಕ್ಷೀಣವಾಗಿ ನರಳಿದ, ರಾಜಕುಮಾರನನ್ನು ಹೆಸರು ಹಿಡಿದು ಕರೆದ ಸದ್ದು. ಎಚ್ಚರವಾಗಿದೆ.) ರುಖ್....

ಷಾ ರುಖ್—ಬಂದೆ, ಅಬ್ಬಾಜಾನ್. (ಪಲ್ಲಂಗದ ಬಳಿಗೆ ಹೋಗುವನು.)

ತೈಮೂರ—(ನಡುಗುವ ನರಳುವ ಧ್ವನಿ) ಹತ್ತಿರವೇ ಇರು ಅಂದರೆ ಹೊರಟೇ ಹೋಗಿದ್ದೆಯಲ್ಲೋ....ನಾನು ಸತ್ತೆ ಅಂದುಕೊಂಡೆಯಾ?

ಷಾ ರುಖ್—(ವ್ಯಥೆಯಿಂದ) ಶ್ರಮಪಡಬಾರದು, ಅಬ್ಬಾಜಾನ್.

ತೈಮೂರ—ಯಾರ ಜೊತೆ....ಮಾತನಾಡುತಾ....ಇದ್ದೆ?

ಷಾ ರುಖ್—ದಂಡನಾಯಕ ಪೀರ್ ಮಹಮ್ಮದರು ಬಂದಿದಾರೆ. (ಹತ್ತಿರ ಬರುವಂತೆ ಪೀರ್ ಮಹಮ್ಮದನಿಗೆ ಸನ್ನೆ ಮಾಡುವನು.)

ತೈಮೂರ—(ಉಸಿರೆಳೆಯುತ್ತ) ಪೀರ್, ಪೀರ್, ಪೀರ್.... (ತೈಮೂರ ಹೀಗೆ ಹೇಳುತ್ತಿರುವಂತೆಯೇ ಪೀರ್ ಮಹಮ್ಮದ್ ಹತ್ತಿರಕ್ಕೆ ಬಂದು ಬಾಗಿ ವಂದಿಸುವನು.) ರುಖ್, ಬಾ. ಹೋಗಬೇಡ.

ಷಾ ರುಖ್—ಇಲ್ಲಿಯೇ ನಿಂತಿದೇನೆ, ಅಬ್ಬಾಜಾನ್.

ತೈಮೂರ—(ನಿಧಾನವಾಗಿ ಒಂದೊಂದು ಪದಗಳನ್ನು ಉಚ್ಚರಿಸುತ್ತ) ಬಂದೀಖಾನೆಯಲ್ಲಿ ನಿಮ್ಮಮ್ಮ—ಹಾನಿವ್ ಬೀಬಿ—ಮಂಗೋಲರ ಸಮ್ರಾಜ್ಞಿ ಇನ್ನೂ ಬದುಕಿದ್ದರೆ ಅವಳನ್ನು ಬಿಟ್ಟುಬಿಡು....ತಿಳಿಯಿತೆ ?

ಷಾ ರುಖ್—(ಕಣ್ಣುಗಳಲ್ಲಿ ನೀರು, ಭಾವೋದ್ವೇಗವನ್ನು ಹತ್ತಿಕ್ಕಲು ಯತ್ನಿಸುತ್ತ) ಹುಂ, ಅಬ್ಬಾಜಾನ್.

ತೈಮೂರ—(ಅಲೆಯುವ ಮನಸ್ಸು) ವ್ಯರ್ಥ, ವ್ಯರ್ಥ....

ಷಾ ರುಖ್—ನಿಮಗೇನಾದರೂ ಬೇಕೆ ?

ತೈಮೂರ—(ಒಮ್ಮೆಲೆ ಧ್ವನಿ ಏರಿಸಿ) ಬೇಕು ! ನನಗೆ ಬೇಕು ಬದುಕು ! ಇನ್ನೂ ನೂರು ವರ್ಷಗಳ ಬದುಕು ! ಅದಿಲ್ಲವಾದರೆ, (ಧ್ವನಿ ಕುಂಠಿತ) ತಕ್ಷಣ ಸಾವು. (ಷಾ ರುಖ್ ನಿಟ್ಟುಸಿರು ಬಿಡುವನು. ಪೀರ್ ಮುಹಮ್ಮದ್ ಮೌನವಾಗಿ ಕಳಕ್ಕೆ ನೋಡುವನು.)

ತೈಮೂರ—(ಪ್ರಯತ್ನಪೂರ್ವಕವಾಗಿ ಮಾತನಾಡುತ್ತ) ಅದನ್ನು ಕೊಡುವುದು ನಿನ್ನ ಕೈಯಲ್ಲಿಲ್ಲ, ಅಲ್ಲ ?....(ಮೌನ, ತೈಮೂರನ ನರಳಾಟ, ಬಳಿಕ) ರುಖ್ ! ಈ ಭೂಮಿಯ ಮೇಲೆ ಏನು ಸಾಧಿಸಬೇಕೆಂಬ ಆಸೆ ಇಟ್ಟುಕೊಂಡಿದೀಯಾ ನೀನು ?

ಷಾ ರುಖ್—ಜಗತ್ತಿನಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಒಂದು ಗ್ರಂಥಭಂಡಾರ ಸ್ಥಾಪಿಸಬೇಕು ಎನ್ನುವುದೇ ನನಗಿರುವ ಆಸೆ, ಅಬ್ಬಾಜಾನ್.

ತೈಮೂರ—(ಕುಸಿಯುತ್ತಿರುವ ಬಲವನ್ನು ಮತ್ತೆ ಒಟ್ಟುಗೂಡಿಸಿ ಮಾತನಾಡುತ್ತ) ಥತ್ ! ಮೂರ್ಖ ! ಗ್ರಂಥಭಂಡಾರವಂತೆ ! ಜಗತ್ತಿನಲ್ಲೆಲ್ಲಾ ಅತ್ಯಂತ ಬಲಿಷ್ಠವಾದ ವಿಸ್ತಾರವಾದ ಸಾಮ್ರಾಜ್ಯ ಕಟ್ಟಬೇಕು ; ಜಗತ್ತೇ ನನ್ನ ಸಾಮ್ರಾಜ್ಯವಾಗಬೇಕು ಎನ್ನುವ ಆಸೆ ಇಟ್ಟುಕೋ ! (ಏಳಲು ಯತ್ನಿಸುವನು. ಒಮ್ಮೆಲೆ ಎದೆ ನೋವು. ಎದೆಯನ್ನು ಅಂಗೈಯಿಂದ ಒತ್ತಿ ಹಿಡಿಯುತ್ತ) ಆದರೆ. . . .ಸಾಮ್ರಾಜ್ಯ ಏಳುತದೆ, ಬೀಳುತದೆ. . . . (ಇದ್ದಕ್ಕಿದ್ದಂತೆ ಕುಸಿಯುವನು, ಹೊರಳಾಡುವನು.) . . . .ಥತ್ ! ಥತ್ ! . . . . ಖಡ್ಗ ! ಕುದುರೆ ! . . . .ಆ ! (ಕೊನೆಯ ಆಕ್ರಂದನದೊಡನೆ ತೈಮೂರ ನಿಶ್ಚೇಷ್ಟಿತ.)

ಪೀರ್ ಮಹಮ್ಮದ್—ಪ್ರಾಣೋತ್ಕ್ರಮಣವಾಯಿತು....

ಷಾ ರುಖ್—ತಂದೆಯ ಮೃಗಯಾವಿನೋದ ಮುಗಿಯಿತು. (ತಾಯಿಯ ನೆನಪಾಗಿ) ಅಮ್ಮಾ! ಅಮ್ಮಾಜಾನ್!

[ತೆರೆ]

ದೃಶ್ಯ ೬

[ಸಮರ್ಕಂದದಲ್ಲಿ ಕಾರಾಗೃಹ. ಒಂದು ಮೂಲೆಯಲ್ಲಿ ಕಲ್ಲು ಹಲಗೆ. ಹೊರಗೆ ಇರಬಹುದಾದ ದೀಪದಿಂದ ಕಿಂಡಿಯ ಮೂಲಕ ಬೆಳಕು ಕೋಣೆಯೊಳಕ್ಕೆ ಬೀಳುತ್ತಿದೆ. ಎತ್ತರದಲ್ಲೆಲ್ಲೋ ಒಂದು ಕಡೆ ಪಾರಿವಾಳ ಕುಳಿತು ಕುಟುರ್ ಕುಟುರ್ ಎನ್ನುತ್ತಿದೆ. ಬೆಳಗಿನ ಜಾವ.

ತೆರೆ ಸರಿದಾಗ ಹಾನಿಮ್—ಬಡಕಲು ಶರೀರ—ಮೌನಪ್ರಾರ್ಥನೆಯಲ್ಲಿ ಮಗ್ನಳಾಗಿದ್ದಾಳೆ. ಮುಖದ ಮೇಲೆ ತನ್ಮಯತೆಯ ಭಾವ.

ಅಮೀನಾ ತನಗೆ ಎಟುಕುವ ಒಂದು ಕಿಂಡಿಯಿಂದ ಹೊರಕ್ಕೆ ನೋಡುತ್ತಿದ್ದಾಳೆ. ತಾನು ಕಂಡುದರ ಬಗೆಗೆ ಆಕೆ ತನ್ನಷ್ಟಕ್ಕೆ ಮಾತನಾಡುತ್ತಿದಾಳೆ.]

ಅಮೀನಾ—(ಸ್ವಗತ) ಎಲಾ ಏನಿದು? ನಿತ್ಯಕ್ಕಿಂತ ಮೊದಲೇ ರಾಜಧಾನಿಯ ಪ್ರಜೆಗಳು ಎದ್ದಿರುವರಲ್ಲ! ಏನಾದರೂ ಸುದ್ದಿ ಬಂತೆ? ಮಂಗೋಲರ ದಂಡು ಮರಳಿ ಬರುತಿರಬಹುದೆ? ಈ ಬೀದಿಯುದ್ದಕ್ಕೂ ಜನ ಪ್ರೇತಗಳ ಹಾಗೆ ಆ ಕಡೆಯಿಂದ ಈ ಕಡೆಗೆ ನಸು ಬೆಳಕಿನಲ್ಲಿ ಓಡಾಡುತಿರುವರಲ್ಲ! ಅಗೋ! ನಿಧಾನವಾಗಿ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ಬರುತ್ತಿರುವ ಕುದುರೆ ಸವಾರರು. ನಮ್ಮವರೇ! ಇವರು ನಮ್ಮವರೇ! ಆರೇ ತಿಂಗಳಲ್ಲಿ ದಂಡು ಹಿಂತಿರುಗಿತೇ ಹಾಗಾದರೆ? ಎಲ್ಲಿಂದ ಮರಳಿದರೊ? ಯಾವ ದೇಶವನ್ನು ಗೆದ್ದರೊ? ಏನು ವಿಚಿತ್ರ! ನನಗೇನಾದರೂ ಮರುಳೆ? ಜೈತ್ರಯಾತ್ರೆಯಿಂದ ಸೈನ್ಯ ಹಿಂತಿರುಗುವ ವೈಖರಿ ಇದಲ್ಲವಲ್ಲ! ಈ ಬೀದಿಯಿಂದ ಇನ್ನೊಂದು ಬೀದಿಯತ್ತ ಹೋಗುತಿದಾರೆ....ಅಯ್ಯೋ! ಏನದು? ಏನು ಇದರ ಅರ್ಥ? ಶವದಾನಿ! ಮಗ್ಗುಲಲ್ಲಿ ರಾಜಕುಮಾರ! ಬಾದಶಹರೆಲ್ಲಿ? ಅಯ್ಯೋ! (ಅರ್ಥವಾದವಳಂತೆ) ಅಯ್ಯೋ! ಸಮ್ರಾಜ್ಞಿಗೆ ಹೇಗೆ ತಿಳಿಸಲಿ? ಯಾ ಪರವರದಿಗಾರ್! ಏನಾಗಿ ಹೋಯಿತು!

ಹಾನಿಮ್—(ಗುಳಿಬಿದ್ದಿರುವ ಕಣ್ಣುಗಳ, ನಿಸ್ತೇಜ ಮುಖದ, ಒಮ್ಮೆಲೆ ನರೆತ ಕೂದಲ ಕೃಶಾಂಗಿ. ಪ್ರಾರ್ಥನೆ ಮುಗಿಸಿ ಏಳುವಳು. ಕಿಂಡಿಯೊಳಗಿಂದ ಬೆಳಗಿನ ಶುಭ್ರ ಪ್ರಭೆ ಕೊಠಡಿಯೊಳಕ್ಕೆ ತೂರಿ ಬರತೊಡಗಿದೆ) ಬೆಳಗಾಯಿತು. . . . (ಮಗ್ಗುಲಿಗೆ ತಿರುಗಿ) ಅಮೀನಾ, ಅಲ್ಲಿ ನಿಂತು ಏನು ಮಾಡುತಿರುವೆ ? ನನಗೆ ಬಳಲಿಕೆ. ಮಲಗಿರಲೆ ?

(ಕಲ್ಲುಹಲಗೆಯ ಬಳಿ ಹೋಗಿ "ಯಾ ಅಲ್ಲಾ !" ಎಂದು ಉದ್ಗರಿಸಿ ಒರಗಿ ಕೊಳ್ಳುವಳು.)

(ಅಮೀನಾ ಉತ್ತರವೀಯುವುದಿಲ್ಲ.)

ಹಾನಿಮ್—ಅಮೀನಾ........ನನ್ನ ಪ್ರಶ್ನೆಗೆ ಉತ್ತರವಿಲ್ಲ. ಇನ್ನೂ ಅಲ್ಲೇ ನಿಂತಿದೀಯಲ್ಲ.

ಅಮೀನಾ—(ಒಳಗಿನ ಭಾವನೆಗಳನ್ನು ಅದುಮಿ ಹಿಡಿಯುತ್ತ) ಏನೋ ಕಂಡಂತಾಯಿತು, ಸಮ್ರಾಜ್ಞಿ.

ಹಾನಿಮ್—ನಿನ್ನ ತಲ್ಲೀನತೆ ನೋಡಿದರೆ, ಅರಮನೆಯಲ್ಲಿ ಜಾಲಂದ್ರದ ಬಳಿ ನಿಂತು ಜೈತ್ರಯಾತ್ರೆಯಿಂದ ಮರಳುವ ಮಂಗೋಲ ಸೈನ್ಯವನ್ನು ನೀನು ನೋಡುತಿದ್ದ ನೆನಪಾಗುತದೆ.

ಅಮೀನಾ—ಈಗಲೂ, ದಂಡು ಬರುತಿರುವುದನ್ನೇ ನೋಡುತಲಿದೇನೆ, ಸಮ್ರಾಜ್ಞಿ.

ಹಾನಿಮ್—ಎಲ್ಲಿ ಜಯಕಾರ ಕಲರವಗಳು ಕೇಳುತಿಲ್ಲವಲ್ಲ ?........

ಅಮೀನಾ—ಕಾರಾಗೃಹದ ಗೋಡೆಗಳು ಭಾರೀ ದಪ್ಪ. ಇದನ್ನು ದಾಟಿ ಯಾವ ಸದ್ದೂ ಸಂಚಾರ ಮಾಡುವುದಿಲ್ಲ, ಸಮ್ರಾಜ್ಞಿ........

ಹಾನಿಮ್—(ನಿಧಾನವಾಗಿ) ಒಳ್ಳೇದು. ಮೆರವಣಿಗೆಯನ್ನು ನಾನು ಬಣ್ಣಿಸಲೆ ಅಮೀನಾ ? ಬಗೆಗಣ್ಣಿನಿಂದ ನನಗೆಲ್ಲ ಕಾಣುತಿದೆ. ಬಾದಶಹರು ಶ್ವೇತಾಶ್ವದ ಮೇಲೆ ಕುಳಿತು ಠೀವಿಯಿಂದ ಆ ಕಡೆ ಈ ಕಡೆ ನೋಡುತ್ತ, ಪ್ರಜೆಗಳ ಮುಜರೆ ಸ್ವೀಕರಿಸುತ್ತ ಬರುತಿದಾರೆ. ಯುವರಾಜ ಷಾ ರುಖ್, ಬಾದಶಹರ ಮಗ್ಗುಲಲ್ಲಿ ಕಂದು ಬಣ್ಣದ ಕುದುರೆಯ ಮೇಲೆ ಕುಳಿತು ಮಂದಹಾಸ ಸೂಸುತಿದಾನೆ. ಜಯಘೋಷಗಳು ಗಗನ ಅಡರಿವೆ. (ಅಮೀನಾ ಬಿಕ್ಕಿ ಅಳುವಳು, ಅರ್ಧ ಕ್ಷಣ.) ಅದೇನು ಸದ್ದು, ಅಮೀನಾ ?

ಅಮೀನಾ—ಹಲ್ಲಿಯೋ ಬಾವಲಿಯೋ ಇರಬೇಕು, ಸಮ್ರಾಜ್ಞಿ.

ಹಾನಿಮ್—ನಾನು ವರ್ಣಿಸಿದ್ದು ಸರಿಯಾಗಿದೆಯೆ?

ಅಮೀನಾ—ಅತ್ಯಂತ ಸಮರ್ಪಕ, ಸಮ್ರಾಜ್ಞಿ.

ಹಾನಿಮ್—ಇನ್ನೂ ಹೇಳುತ್ತೇನೆ. ಎಷ್ಟೊಂದು ಬಣ್ಣಗಳು! ಎಂಥೆಂಥ ಉಡುಪುಗಳು! (ಅಮೀನಾ ಮತ್ತೆ ಬಿಕ್ಕಿದ ಸದ್ದು.) (ಹಾನಿಮ್ ಸೇವಕಿಯ ಕಡೆ ತಿರುಗಿ) ಅಲ್ಲಾ, ಪಾರಿವಾಳವನ್ನು ಕಿಂಡಿಯಿಂದಾಚೆಗೆ ಹಾರಿ ಬಿಡದೆ ಸುಮ್ಮನಿದೀಯಲ್ಲ, ಅಮೀನಾ.

ಅಮೀನಾ—ಹ್ಞಾ. ಹಾರಿಸುತ್ತೇನೆ, ಸಮ್ರಾಜ್ಞಿ. (ಗದ್ಗದ ಕಂಠದಿಂದ) ಅರಮನೆಯಿಂದ ಸೆರೆಮನೆಗೂ ನಮ್ಮನ್ನು ಹಿಂಬಾಲಿಸಿ ಬಂದಿರುವ ಪಾರಿವಾಳವೇ! ಕೆಳಕ್ಕೆ ಬಾ. ಹಾರಿಹೋಗಿ, ಸಮ್ರಾಟರಿಗೆ—(ಬಿಕ್ಕುವಳು) ಥೂ! ಈ ಪಾರಿವಾಳ ಬರಲೊಲ್ಲದು.

ಹಾನಿಮ್—(ಮೆಲ್ಲನೆ ಏಳುತ್ತ, ಎರಡು ಹೆಜ್ಜೆ ಅಮೀನಾಳತ್ತ ನಡೆದು, ನಿಂತು) ಏನಾಯಿತು ನಿನಗೆ, ಅಮೀನಾ?

ಅಮೀನಾ—ಸಮ್ರಾಜ್ಞಿ, ಸಮ್ರಾಜ್ಞಿ! ಬೆಳಗಿನ ಜಾವ ಯಾವುದೋ ಕೆಟ್ಟ ಕನಸು.

ಹಾನಿಮ್—ಮುಚ್ಚು ಮರೆಯ ಉತ್ತರ. ಮೆರವಣಿಗೆ ಅರಮನೆಯ ಬೀದಿಗೆ ಬಂದಿರಬೇಕು. (ಶೋಕದಿಂದ) ಬಾದಶಹರು ಇಲ್ಲಿಗೆ ಬರುವರೋ ಇಲ್ಲವೋ. ಈ ಆನಂದಾಶ್ರು ಅವರಿಗೆ ಇಷ್ಟವಿಲ್ಲ. ರಾಜಕುಮಾರನಾದರೂ ಬರುವನೇನೋ....ಸ್ತುತಿಪಠಣ ಕಿವಿಗೆ ಬೀಳಬೇಕಾದ ಹೊತ್ತು, ಅಲ್ಲವೆ ಅಮೀನಾ?

ಅಮೀನಾ—ಬೆಳಗಿನ ಜಾವ, ಸ್ತುತಿಪಾಠಕರು ಎದ್ದಿರಬೇಕಲ್ಲ?

ಹಾನಿಮ್—ಛೆ! ಛೆ!

ಸ್ತುತಿಪಾಠಕರು—(ನೇಪಥ್ಯದಲ್ಲಿ) ಚೆಂಗೀಸ ವಂಶಜ, ತೈಮೂರ ಪುತ್ರ, ಮಂಗೋಲ ಪ್ರಭು ಷಾ ರುಖ್ ಬಾದಶಹರು ದಯಮಾಡಿಸುತಿದಾರೆ. ಹೋಷಿಯಾರ್! ಹೋಷಿಯಾರ್!

ಹಾನಿಮ್—(ನಿಶ್ಚಲಳಾಗಿ ನಿಂತು) ಅದೇನು ಸ್ತುತಿಪಠಣವೋ!........ಎಲ್ಲಾ ತಿರುವು ಮುರುವು.

ಅಮೀನಾ— ಹೇಳಲಿಲ್ಲವೆ, ಸಮ್ರಾಜ್ಞಿ ? ಅವರಿಗೆ ನಿದ್ದೆಗಣ್ಣು.

(ಸರಪಣಿಗಳ ಝಣ ಝಣ ನಾದದೊಡನೆ ಬಾಗಿಲು ತೆರೆದ ಕಿರ್ ಶಬ್ದ. 'ಅಮ್ಮಾಜಾನ್ !' ಎಂದು ಕಿರಿಚುತ್ತ ಷಾ ರುಖ್ ತಾಯಿಯ ಬಳಿಗೆ ಓಡುವನು.)

ಷಾ ರುಖ್—(ಆನಂದಾತಿಶಯದಿಂದ) ಅಮ್ಮಾಜಾನ್! ಚೆನ್ನಾಗಿದೀರಾ ಅಮ್ಮಾಜಾನ್ ? (ತಾಯಿಯನ್ನು ತಬ್ಬಿಕೊಂಡು ಉದ್ವಿಗ್ನನಾಗಿ) 'ನಿನ್ನ ತಾಯಿಯನ್ನು-ಹಾನಿಮ್ ಬೀಬಿಯನ್ನು-ಸಮ್ರಾಜ್ಞಿಯನ್ನು ಬಿಟ್ಟುಬಿಡು, ರುಖ್'—ಎಂದರು, ಅಬ್ಬಾಜಾನ್ !

ಹಾನಿಮ್—(ಭಾವ ಪರವಶಳಾಗಿ) ಆ್ಹ ! ಆ್ಹ ! ಈ ಮಾತು ಕೇಳುವುದಕಾಗಿಯೇ ಇಷ್ಟು ದಿನ ನಾನು ಬದುಕಿದೆ, ಅಲ್ಲವೆ ? ಅಮೀನಾ, ನನ್ನ ರುಖ್ ಏನೆಂದ ಕೇಳಿಸಿತೆ, ಅಮೀನಾ ? ಅಮೀನಾ !

ಷಾ ರುಖ್—ಈ ಸೆರೆಯಲ್ಲಿ ನಿಮಗೆ ಎಷ್ಟೊಂದು ಕಷ್ಟವಾಗಿರಬೇಡ, ಅಮ್ಮಾಜಾನ್ !

ಹಾನಿಮ್— ಇಲ್ಲ, ರುಖ್. ಇದು ಅರಮನೆಯೇ ಎಂದುಕೊಂಡು ನಿಮ್ಮ ದಾರಿ ನೋಡುತ, ದೇವರಿಗೆ ಪ್ರಾರ್ಥನೆ ಸಲ್ಲಿಸುತ ದಿನ ಕಳೆದೆ. ರುಖ್.... (ಆಲಿಂಗನದಿಂದ ಮಗನನ್ನು ಬಿಡುತ್ತ) ರುಖ್, ಒಂದು ಪ್ರಶ್ನೆ ಕೇಳುತೇನೆ.

ಷಾ ರುಖ್—(ಗೊಗ್ಗರ ಧ್ವನಿಯಲ್ಲಿ) ಕೇಳು, ಅಮ್ಮಾಜಾನ್.

ಹಾನಿಮ್—ಬಾದಶಹರು ನಿಜವಾಗಿಯೂ ನನ್ನನ್ನು ಕ್ಷಮಿಸಿದರೆ, ರುಖ್ ?

ಷಾ ರುಖ್—ಹೌದು, ಅಮ್ಮಾಜಾನ್.

ಹಾನಿಮ್—ಆದರೆ, (ನಿರಾಶೆಯ ಧ್ವನಿಯಲ್ಲಿ) ನನ್ನನ್ನು ನೋಡಲು ಅವರು ಬರಲಿಲ್ಲ.

ಷಾ ರುಖ್—ಅವರು ಬರುವ ಸ್ಥಿತಿಯಲ್ಲಿಲ್ಲ, ಅಮ್ಮಾಜಾನ್.

ಹಾನಿಮ್—(ಗಾಬರಿಯಾಗಿ) ಹೌದೆ ? ಯಾಕೆ ರುಖ್ ? ಅವರಿಗೆ ಏನಾಗಿದೆ, ರುಖ್ ? (ಆ ತನಕ ಎರಡೂ ಕೈಗಳಿಂದ ಎದೆಯನ್ನು ಒತ್ತಿಕೊಂಡು ಮೂಲೆಯಲ್ಲಿ ನಿಂತಿದ್ದ ಅಮೀನಾ, ಒಮ್ಮೆಲೆ ಅಣೆಕಟ್ಟು ಬಿರಿದಂತೆ ಕೂಗಿಕೊಳ್ಳುವಳು : 'ಆ !')

ಹಾನಿಮ್—(ಕಾತರಗೊಂಡು) ಅಯ್ಯೋ! ಅಮೀನಾ, ಇದೇನು? ರುಖ್, ಮಾತನಾಡು!

ಷಾ ರುಖ್—ಅಮ್ಮಾಜಾನ್! ಮಂಗೋಲ ಸಾಮ್ರಾಜ್ಯದ ಧ್ವಜವನ್ನು ಕೀರ್ತಿಯ ಶಿಖರಕ್ಕೇರಿಸಿದ ಸಮ್ರಾಟ ತೈಮೂರಖಾನರ ದೇಹಾವಸಾನ ವಾಯಿತು, ಅಮ್ಮಾಜಾನ್!

ಹಾನಿಮ್—ಅಯ್ಯೋ!(ಚೀರಿ ನೆಲಕ್ಕುರುಳುವಳು. "ಅಮ್ಮಾಜಾನ್! ಅಮ್ಮಾಜಾನ್!" ಎನ್ನುತ್ತ, ತಾಯಿಯನ್ನೆತ್ತಿಕೊಂಡು ಒಯ್ದು ಕಲ್ಲುಹಲಗೆಯ ಮೇಲೆ ರುಖ್ ಮಲಗಿಸುವನು. "ಯಾರಲ್ಲಿ? ವೈದ್ಯರು! ವೈದ್ಯರು!" ಎಂದು ಕೂಗುವನು. ಅಮೀನಾ ಓಡಿ ಬಂದು, ಆಗಲೇ ಶವವಾಗಿದ್ದ ಹಾನಿಮಳನ್ನು ಎತ್ತುವಳು, ಅಲುಗಿಸುವಳು. ಕೆಳಕ್ಕೆ ಬೀಳುವಳು.)

ಅಮೀನಾ—(ರೋದಿಸುತ್ತ) ಚೆಂಗೀಸ ವಂಶಜ, ತೈಮೂರ ಪುತ್ರ, ಮಂಗೋಲ ಪ್ರಭು ಷಾ ರುಖ್ ಬಾದಶಹ! ನೀವೀಗ ತಾಯಿಯೂ ಇಲ್ಲದ ತಬ್ಬಲಿ!

ಷಾ ರುಖ್—(ಸಮ್ರಾಜ್ಞಿಯ ಶವದೆದುರು ಮಂಡಿಯೂರಿ ಪ್ರಲಾಪಿಸುತ್ತ) ಅಮ್ಮಾಜಾನ್! ನನ್ನ ಅಮ್ಮಾಜಾನ್!

ಅಂಕದ ಪರದೆ

[ಸಮಾಪ್ತಿ]

ನಮ್ಮ ಕೆಲವು ಪ್ರಕಟನೆಗಳು

ನಾಟಕಗಳು

ಅಹಲ್ಯೋದ್ಧಾರ —ಶ್ರೀರಂಗ		೧ ೫೦
ಪೂರ್ವರಂಗ	,,	೧ ೫೦
ಮುಹೂರ್ತ	,,	೧ ೫೦
ಸರ್ಕಸ್ಸಿನ ಸರಸ್ವತಿ	,,	೧ ೫೦
ದಾಂಪತ್ಯದ ದೊಂಬೆ	,,	೨ ೫೦
ಪ್ರಪಂಚ ಪ್ರವಾಹ	,,	೨ ೫೦
ಭೂತಕನ್ನಡಿ	,,	೨ ೦೦
ತಾರಕಸಂಹಾರ	,,	೨ ೦೦
ಪರಮೇಶ್ವರ ಪುಲಕೇಶಿ	,,	೨ ೨೫
ಶ್ರೀರಂಗನಾಟ್ಯತರಂಗ I	,,	೧೨ ೦೦
ಶ್ರೀರಂಗನಾಟ್ಯತರಂಗ II	,,	೧೫ ೦೦
ಶಬರಿ—ಪು. ತಿ. ನರಸಿಂಹಾಚಾರ್		೧ ೦೦
ಹರಿಶ್ಚಂದ್ರ	,,	೩ ೭೫
ಹರಿಶ್ಚಂದ್ರ—ಎಸ್. ವಿ. ರಂಗಣ್ಣ		೨ ೨೫
ಏಕಾಂಕ ಸಂಗ್ರಹ (ದೆಹಲಿ ಸಾಹಿತ್ಯ ಅಕಾಡೆಮಿಯ ಪರವಾಗಿ)		೫ ೦೦
ಚಂದ್ರಗುಪ್ತ	(,,)	೪ ೫೦
ಮೇಜರ್‌ಬಾರ್ಬರ (ಬರ್ನಾಡ್‌ಷಾ) ಅನು—ವಿ. ಸೀತಾರಾಮಯ್ಯ		೮ ೦೦
ವಸಂತಚಂದನ—ಪು. ತಿ. ನರಸಿಂಹಾಚಾರ್		೧ ೦೦
ಸುಧಾ—ಸಾಹಸಿ		೨ ೫೦
ಹಂಸದಮಯಂತಿ ಮತ್ತು ಇತರ ರೂಪಕಗಳು—ಪು. ತಿ. ನ.		೧೦ ೦೦
ಹರಿಣಾಭಿಸರಣ—ಪು. ತಿ. ನರಸಿಂಹಾಚಾರ್		೧ ೨೫
ಕನ್ನಡಮಾಳವಿಕಾಗ್ನಿಮಿತ್ರ	೩-೫೦ (ಕ್ಯಾ)	೧ ೫೦
ಕನ್ನಡ ಮೃಚ್ಛಕಟಿಕ (ಶೂದ್ರಕ) ಅನು—ಡಾ. ಕೆ. ಕೃಷ್ಣಮೂರ್ತಿ		೪ ೦೦
ಕನ್ನಡ ಉತ್ತರರಾಮಚರಿತ್ರೆ (ಭವಭೂತಿ) ಅನು :	,,	೩ ೦೦

ನಾಟಕಗಳು

ಕನ್ನಡ ಪ್ರತಿಮಾನಾಟಕ (ಭಾಸ) ಅನು:	,,	೨ ೨೫
ಕನ್ನಡ ಯಜ್ಞಫಲ (ಭಾಸ) ಅನು:	,,	೨ ೦೦
ಕರ್ಣಾಟ ಪ್ರತಿಮಾನಾಟಕ (ಭಾಸ) ಅನು—ಮೈ. ಸೀತಾರಾಮಶಾಸ್ತ್ರೀ		೨ ೨೫
ವೇಣೀ ಸಂಹಾರನಾಟಕ ಪ್ರತಿಕೃತಿ (ಭಟ್ಟನಾರಾಯಣ) ಅನು: ಮೈ. ಸೀ.		೨ ೨೫

ಕನ್ನಡ ಕವಿ ಕಾವ್ಯಮಾಲೆ

ಬೆಳ್ಳಿಯ ಹಬ್ಬದ ಪ್ರಕಟನೆಗಳು

೧. ಹೊನ್ನ ಶೂಲ (ವಿಮರ್ಶ ಪ್ರಬಂಧಗಳು)—ಎಸ್. ವಿ. ರಂಗಣ್ಣ ೩.೦
೨. ಶಾಕುಂತಳ ನಾಟಕ ವಿಮರ್ಶೆ—ಎಸ್. ವಿ. ರಂಗಣ್ಣ ೪.೫
೩. ಕಾಳಿದಾಸನ ನಾಟಕಗಳ ವಿಮರ್ಶೆ—ಎಸ್. ವಿ. ರಂಗಣ್ಣ ೧೫.೦
೪. ಕನ್ನಡ ಕಾವ್ಯಮೀಮಾಂಸೆ (ರಾಜಶೇಖರ)—ಕೆ. ಕೃಷ್ಣಮೂರ್ತಿ ೧೨.೦
೫. ಆನಂದವರ್ಧನನ ಕಾವ್ಯಮೀಮಾಂಸೆ—ಕೆ. ಕೃಷ್ಣಮೂರ್ತಿ
೬. ಕನ್ನಡ ಶಾಕುಂತಳ (ಕಾಳಿದಾಸ)—ಕೆ. ಕೃಷ್ಣಮೂರ್ತಿ
೭. ರನ್ನನ ಕೃತಿರತ್ನ (ವಿಮರ್ಶೆ)—ಆರ್. ಎಸ್. ಮುಗಳಿ
೮. ಸಂಚಯ (ಸಾಹಿತ್ಯ ಪ್ರಬಂಧಗಳು)—ಹಾ. ಮಾ. ನಾಯಕ
೯. ಅಶ್ವತ್ಥಾಮನ್ (ವಿಮರ್ಶೆ)—ವಿ. ಸೀತಾರಾಮಯ್ಯ
೧೦. ಬೆಳುದಿಂಗಳು—(ಪ್ರಬಂಧಗಳು)—ವಿ. ಸೀತಾರಾಮಯ್ಯ
೧೧. ಮೇಜರ್ ಬಾರ್ಬರ (ನಾಟಕ)—ವಿ. ಸೀತಾರಾಮಯ್ಯ
೧೨. ಸತ್ಯಾಯನ ಹರಿಶ್ಚಂದ್ರ (ನಾಟಕ)—ಪು. ತಿ. ನರಸಿಂಹಾಚಾರ್
೧೩. ಶಬ್ದಮಣಿದರ್ಪಣ—ಡಿ. ಎಲ್. ನರಸಿಂಹಾಚಾರ್
೧೪. ಗೀತಾಗಾಂಭೀರ್ಯ (ವಿಚಾರ ಸಾಹಿತ್ಯ)—ಶ್ರೀರಂಗ
೧೫. ಜ್ಯೋತಿಷ್ಯ ಸಾರಸಂಗ್ರಹ—ಎಂ. ರಾಮಸ್ವಾಮಿ
೧೬. ಕಥಾಮೃತ (ಕಥಾಸಂಗ್ರಹ)—ಎ. ಆರ್. ಕೃಷ್ಣಶಾಸ್ತ್ರೀ
೧೭. ದೂರದ ಕಾಶಿಯಲ್ಲಿ (ಸಣ್ಣ ಕಥೆಗಳು)—ಅಶ್ವತ್ಥ
೧೮. ಅಭಿನಯ ಜಗತ್ತು (ಸಣ್ಣ ಕಥೆಗಳು)—ಅಶ್ವತ್ಥ
೧೯. ಹೃದಯ ಸಮುದ್ರ (ಸಣ್ಣ ಕಥೆಗಳು)—ಅನುಪಮ ನಿರಂಜನ
೨೦. ಯಶೋಧರ ಚರಿತ್ರೆ (ಜನ್ನ)—ಕೆ. ವಿ. ರಾಘವಾಚಾರ್
೨೧. ತುಂಬೆಯ ಹೂವು (ಕವನ)—ಎಸ್. ವಿ. ಪರಮೇಶ್ವರಭಟ್ಟ
೨೨. ಜಾನಪದ ಖಂಡ ಕಾವ್ಯಗಳು—ಜೀ. ಶಂ. ಪರಮಶಿವಯ್ಯ

ವಿವ [illegible]

ಶಾರದಾಮಂದಿರ : ರಾ[illegible] ರಸ್ತೆ : ಮೈಸೂರು-4